ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 8

೨೨, ಡಿಸೆಂಬರ್ ೧೯೫೭

★

ಪುಟ ೧೦ ಬೆಲೆ: ೧೩ ನ. ಪೈಸೆ

ಭೂಸುಧಾರಣೆಯನ್ನು ತಡೆಗಟ್ಟಲು ಭೂಮಾಲಿಕರ ಪಿತೂರಿ

ಮೈಸೂರು ಸರಕಾರ ಕಳೆದೊಂದು ವರ್ಷದಿಂದಲೂ ಇಡೀ ಪ್ರಾಂತ್ಯಕ್ಕೆ ಅನ್ವಯಿಸುವ ಒಂದು ಸಮಗ್ರ ಮತ್ತು ಯೋಗ್ಯ ಟೆನೆನ್ಸಿ ಶಾಸನವನ್ನು ಜಾರಿಗೆ ತರುತ್ತೇವೆಂದು ಹಲವಾರು ಸಂದರ್ಭಗಳಲ್ಲಿ ಹೇಳಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಉದ್ದಿಶ್ಯದಿಂದಲೇ ಸರಕಾರ ಜತ್ತಿ ಸಮಿತಿಯನ್ನು ನೇಮಿಸಿ ಎಲ್ಲ ಪ್ರದೇಶಗಳಲ್ಲಿರುವ ಟೆನೆನ್ಸಿ ಪದ್ಧತಿಗಳ ಬಗ್ಗೆ ವಿಷಯ ಸಂಗ್ರಹಿಸಿ, ಯಾವ ರೀತಿಯ ಹೊಸ ಶಾಸನ ಬೇಕೆಂಬುದನ್ನು ವರದಿಮಾಡಲು ತೀರ್ಮಾನಿಸಿತ್ತು. ಜತ್ತಿ ಸಮಿತಿಯ ವರದಿಯು ಪ್ರಕಟವಾಗಿ ಮೂರು ತಿಂಗಳ ಮೇಲಾಯಿತು. ಹೋದ ಅಸೆಂಬ್ಲಿಯಲ್ಲೇ ಇದರ ಚರ್ಚೆ ಮುಗಿಸಿ ಹೊಸ ಶಾಸನವನ್ನು ತರಲು ಸರ್ಕಾರಕ್ಕೆ ಸಾಧ್ಯವಿತ್ತು. ಆದರೆ ಇಷ್ಟು ದಿವಸಗಳಾದರೂ ಸರಕಾರ ಇದನ್ನು ಮಾಡದಿರುವುದು ತುಂಬಾ ಶೋಚನೀಯವಾಗಿದೆ.

ಮಂತ್ರಿ ಮಂಡಲದ ಈ ಕಾಲಹರಣೆಯಿಂದ ಪ್ರಾಂತದ ಭೂಮಾಲಿಕರು ಸರಕಾರದ ಮೇಲೆ ಮಿತಿಮೀರಿದ ಪ್ರಭಾವವನ್ನು ಬೀರಿ ಒತ್ತಾಯ ತರಲು ಪ್ರಯತ್ನಿಸುತ್ತಿದ್ದಾರೆಂದು ತಿಳಿದು ಬಂದಿದೆ. ಸರಕಾರ ತರಲಿರುವ ಹೊಸ ಶಾಸನದಿಂದ ರೈತರಿಗೆ ಯಾವ ರೀತಿಯ ಸೌಲಭ್ಯವೂ ದೊರೆಯದಂತೆ ಮಾಡಬೇಕೆಂಬುದೇ ಅವರ ಉದ್ದೇಶ್ಯವಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ದೊಡ್ಡ ಭೂಮಾಲಿಕರ ಪ್ರಭಾವವೂ ಕೈವಾಡವೂ ತುಂಬಾ ಇದೆ. ದ.ಕ. ಜಿಲ್ಲೆಯ ಕಾಂಗ್ರೆಸ್ ಅಸೆಂಬ್ಲಿ ಸದಸ್ಯರೆಲ್ಲರೂ ಭೂಸುಧಾರಣೆಯನ್ನು ತೀವ್ರ ಪ್ರತಿಭಟಿಸುವವರೇ ಆಗಿದ್ದಾರೆ. ಕೊಡಗಿನ ಸದಸ್ಯರೂ ಭೂಮಾಲಿಕರ ಕಡೆಯವರೇ ಆಗಿದ್ದಾರೆ. ಹಳೇ ಮೈಸೂರು ಪ್ರದೇಶದಲ್ಲೂ ಬಹು ಸಂಖ್ಯಾತ ಸದಸ್ಯರು ಪ್ರತಿಗಾಮಿಗಳಿದ್ದಾರೆಂಬುದು ಖಂಡಿತ. ಬೊಂಬಾಯಿ ಕರ್ನಾಟಕದ ಸದಸ್ಯರಲ್ಲೂ ಹಲವರು ಭೂಸುಧಾರಣೆಯನ್ನು ವಿರೋಧಿಸುತ್ತಿರುವರೆಂದು ಗೊತ್ತಾಗಿದೆ. ಅವರ ಒತ್ತಾಯದಿಂದಲೇ ಬೊಂಬಾಯಿ ಸರಕಾರದ ಶಾಸನದ ಪ್ರಕಾರ ಕಳೆದ ಏಪ್ರಿಲ್ ಒಂದರಂದು "ಉಳುವವನಿಗೇ ಜಮೀನು' ದಿನವನ್ನಾಗಿ ಪರಿಗಣಿಸಿ ಬೊಂಬಾಯಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಶಾಸನ ಜಾರಿಗೆ ತರುವುದನ್ನು ತಡೆಗಟ್ಟುವಂತೆ ಮಾಡಿರುವುದನ್ನು ಗಮನಿಸಬೇಕಾಗಿದೆ. ಹೀಗೆ ಕಾಂಗ್ರೆಸ್ ಪಕ್ಷದಲ್ಲೇ ಬಹು ಸಂಖ್ಯಾತ ಸದಸ್ಯರು ಜಮೀನ್ದಾರರ ಪರವಾಗಿದ್ದು ಜತ್ತಿ ಸಮಿತಿಯ ವರದಿಯಲ್ಲಿರುವ ಶಿಫಾರ್ಸುಗಳನ್ನು ಸಹ ಸರಕಾರ ಕೈಬಿಡುವಂತೆ ಒತ್ತಾಯ ತರಲು ಪಿತೂರಿ ನಡೆಸಿದ್ದಾರೆಂದು ಗೊತ್ತಾಗಿದೆ.

ಜತ್ತಿ ಸಮಿತಿಯ ವರದಿ ಪ್ರಕಟವಾದಾಗಿನಿಂದ ಈ ಪ್ರತಿಗಾಮಿ ಶಕ್ತಿಗಳು ಅದರ ವಿರುದ್ಧ ತೀವ್ರವಾದ ಪ್ರಚಾರ ಕೈಗೊಂಡಿರುತ್ತಾರೆ. ಲೆಖ್ಖವಿಲ್ಲದ ಮನವಿಗಳನ್ನು ಮಂತ್ರಿಗಳಿಗೆ ಕೊಡಲಾಗಿದೆ. ಅವರ ನಿಯೋಗಗಳು ವಿಧಾನಸೌಧದಲ್ಲಿ ಯಾವಾಗಲೂ ಕಂಡು ಬರುತ್ತಿವೆ. ಮಂತ್ರಿಗಳು ಹೋದ ಕಡೆಯಲ್ಲೆಲ್ಲಾ ಮನವಿಗಳನ್ನು

ಎಸ್.ಎಲ್. ಉಪಾಧ್ಯಾಯ

ಕೊಡಲಾಗುತ್ತಿದೆ. ಇವರ ಬೆಂಬಲಿಗರು ಮಂತ್ರಿಮಂಡಲದಲ್ಲೇ ಬೇಕಾದಷ್ಟಿದ್ದಾರೆಂಬುದು ಖಂಡಿತ. ಹಲವು ಪತ್ರಿಕೆಗಳಲ್ಲಿ ಒಂದೇ ಸವನೆ ಅವರ ಪ್ರಚಾರ ನಡೆದಿದೆ. ಗೇಣಿಯ ಪ್ರಮಾಣ ಮತ್ತು ಪರಮಾವಧಿ ಹಿಡುವಳಿಯ ಶಿಫಾರ್ಸುಗಳ ಮೇಲೆ ಅವರ ಧಾಳಿ ಮುಖ್ಯವಾಗಿ ನಡೆದಿದೆ.

ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ, ಚನ್ನಬಸಪ್ಪ ಮುಂತಾದವರು ಬಹಿರಂಗವಾಗಿ ಈ ಪ್ರತಿಗಾಮಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ವಿರೋಧ ಪಕ್ಷದಲ್ಲೂ ಹಲವರು ಭೂಮಾಲಿಕರ ಪರವಾಗಿಯೇ ಇದ್ದಾರೆಂದು ತಿಳಿದು ಬಂದಿದೆ. ಪಿ. ಎಸ್. ಪಿ. ಯಲ್ಲಿ ಹಲವರು ಭೂಸುಧಾರಣೆಯನ್ನು ವಿರೋಧಿಸುವವರಿದ್ದಾರೆ.

ಕಾಂಗ್ರೆಸ್ಸಿಗರ ಈ ಧೋರಣೆಯು ಆಶ್ಚರ್ಯಕರವಾಗಿದೆ. ಕಾಂಗ್ರೆಸ್ ಸಂಸ್ಥೆಯು ಹಲವಾರು ವರ್ಷಗಳಿಂದ ಭೂಸುಧಾರಣೆಗೆ ಮಹತ್ವ ಕೊಟ್ಟಿರುತ್ತದೆ. ಎಲ್ಲ ರಾಜ್ಯ ಸರಕಾರಗಳೂ ಇದಕ್ಕೆ ಗಮನ ಕೊಡಬೇಕೆಂದು ಯೋಜನಾ ಸಮಿತಿಯು ಆದೇಶವಿತ್ತಿದೆ. ದೇಶದ ಆಹಾರ ಸಮಸ್ಯೆಯನ್ನು ಬಗೆಹರಿಸಲು ರಾಜ್ಯಸರಕಾರಗಳು ಕೂಡಲೇ ಭೂಸುಧಾರಣೆಯನ್ನು ತರಲು ಕ್ರಮ ತೆಗೆದುಕೊಳ್ಳಬೇಕೆಂದು ಪಂಡಿತ್ ನೆಹರೂರವರು ಹಲವು ಬಾರಿ ಹೇಳಿದ್ದಾರೆ. ಅಶೋಕ ಮೆಹ್ತಾ ಸಮಿತಿಯೂ ಇದೇ ಅಭಿಪ್ರಾಯ ಪಟ್ಟಿದೆ. ಕೇಂದ್ರದ ಮಂತ್ರಿಗಳಾದ ಎ. ಪಿ. ಜೈನ್, ಎಸ್. ಕೆ. ಡೇಯವರು ಇದನ್ನೇ ಒತ್ತಿ ಹೇಳಿದ್ದಾರೆ. ಅಷ್ಟೇ ಅಲ್ಲದೆ ಪ್ರತಿಗಾಮಿ ಶಕ್ತಿಗಳು ಇದನ್ನು ಪ್ರತಿಭಟಿಸುವುದನ್ನು ಖಂಡಿಸಿರುತ್ತಾರೆ. ಭೂಸುಧಾರಣೆಯಲ್ಲಿ ಹಿಂದುಳಿದ ರಾಜ್ಯಗಳ ಪೈಕಿ ಮೈಸೂರು ಸಹ ಒಂದೆಂದು ಲೋಕಸಭೆಯಲ್ಲಿ ಮಂತ್ರಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಹೀಗಿದ್ದರೂ ಮೈಸೂರಿನ ಕಾಂಗ್ರೆಸ್ ನಾಯಕರು ಕೇಂದ್ರ ಸರಕಾರದ, ಯೋಜನಾ ಸಮಿತಿಯ ಮತ್ತು ಕಾಂಗ್ರೆಸ್ ಪಕ್ಷದ ಧೋರಣೆಗಳಿಗೆ ವಿರುದ್ಧವಾಗಿ ವರ್ತಿಸುವುದು ತೀವ್ರ ಖಂಡನೀಯವಾಗಿದೆ. ವಿನೋಬಾಜೀಯವರ ಪೂಜಾರಿಗಳೇ, ಬಾಪೂಭಕ್ತರುಗಳೇ ಹೀಗೆ ವರ್ತಿಸುವುದು ಹಾಸ್ಯಾಸ್ಪದವಾಗಿದೆ.

ಜತ್ತಿ ಸಮಿತಿಯ ವರದಿಯಿಂದ ರೈತರಲ್ಲೂ ಅಸಮಾಧಾನ ಉಂಟಾಗಿರುವುದು ನಿಜ. ಕರ್ನಾಟಕ ಪ್ರಾಂತ ರೈತ ಸಮ್ಮೇಳನವೂ, ಕಮ್ಯೂನಿಸ್ಟ್ ಪಾರ್ಟಿಯೂ, ಇತರ ಸಂಸ್ಥೆಗಳೂ ಅದರಲ್ಲಿರುವ ಪ್ರತಿಗಾಮಿ ಅಂಶಗಳ ಬಗ್ಗೆ ಟೀಕಿಸಿರುತ್ತವೆ. ಸರಕಾರ ತರಲಿರುವ ಶಾಸನವು ಈ ಪ್ರತಿಗಾಮಿ ಅಂಶಗಳನ್ನು ಬಿಟ್ಟು ನಿಜವಾಗಿ ರೈತರ ಹಿತರಕ್ಷಿಸುವ ಯೋಗ್ಯ ಶಾಸನವಾಗಿರಬೇಕೆಂದು ಅವು ಒತ್ತಾಯ ಪಡಿಸಿವೆ.

ದಸರಾ ಅಧಿವೇಶನದಲ್ಲೇ ಬರಬೇಕಾಗಿದ್ದ ಶಾಸನವು ಇನ್ನೂ ಬಾರದಿರುವುದು ಖಂಡನೀಯವಾಗಿದೆ. ಸರಕಾರ ವಿಳಂಬ ಮಾಡುವುದರಿಂದ ಈ ಪ್ರತಿಗಾಮಿ ಜನ ವಿರೋಧಿಗಳಿಗೆ ಇನ್ನೂ ಒತ್ತಾಯ ತರಲು ಶಾಸನದ ಉದ್ದಿಶ್ಯವನ್ನು ವಿಫಲಗೊಳಿಸಲು ಅವಕಾಶ ನೀಡಿದಂತಾಗುತ್ತದೆ.

ಸರಕಾರ ಕೂಡಲೇ ಯೋಗ್ಯ ಶಾಸನವನ್ನು ತರುವಂತೆ ಒತ್ತಾಯ ತರುವುದು ಪ್ರಾಂತದ ರೈತರ ಮತ್ತು ಎಲ್ಲಾ ಪ್ರಜಾಪ್ರಭುತ್ವವಾದಿಗಳ ಕರ್ತವ್ಯ. ಕಮ್ಯೂನಿಸ್ಟರೂ, ರೈತ ಸಂಘದವರೂ ಪ್ರಾಂತಾದ್ಯಂತ ಸಭೆ ಸಮ್ಮೇಳನಗಳ ಮೂಲಕ ಇತರ ಪಕ್ಷಗಳ ಮತ್ತು ವ್ಯಕ್ತಿಗಳ ಸಹಕಾರ ಪಡೆದು ಸರಕಾರದ ಮೇಲೂ ಅಸೆಂಬ್ಲಿ ಸದಸ್ಯರ ಮೇಲೂ ಒತ್ತಾಯ ತರುವುದು ಬಹಳ ಅಗತ್ಯ. ಭೂಮಾಲಿಕರ ಪಿತೂರಿಯನ್ನು ಸೋಲಿಸಲು ರೈತ ಬಾಂಧವರೂ, ಪ್ರಜಾ ಪ್ರಭುತ್ವವಾದಿಗಳೂ ಕೂಡಲೇ ಗಮನ ಕೊಡುವರೆಂದು ನಂಬುತ್ತೇನೆ.

ಬೆಂಗಳೂರು ಕಾರ್ಪೊರೇಷನ್ ಚುನಾವಣೆ

ಕಾಂಗ್ರೆಸ್ಸಿನ ಗುತ್ತೇದಾರೀ ಅಳಿಯಲಿ

ಬೆಂಗಳೂರು ನಗರದ ಕಾರ್ಪೊರೇಷನ್ ಚುನಾವಣೆಯು ಇದೇ 22ರಂದು ನಡೆಯಲಿದೆ. ನಗರದ ಸಾರ್ವಜನಿಕ ಜೀವನದಲ್ಲಿ ಇದು ಮುಖ್ಯವಾದ ಚುನಾವಣೆಯಾಗಿದೆ. ನಾಗರಿಕ ಸೌಲಭ್ಯಗಳಿಗಾಗಿ, ನಗರಾಭಿವೃದ್ಧಿಗಾಗಿ ಮತ್ತು ಕಾರ್ಪೊರೇಷನ್ನಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವಂಥ ಪ್ರತಿನಿಧಿಗಳನ್ನೇ ಆಯ್ಕೆ ಮಾಡುವುದು ಅಗತ್ಯವಿದೆ.

ಅನೇಕ ವರ್ಷಗಳಿಂದ ಕಾಂಗ್ರೆಸು ಕಾರ್ಪೊರೇಷನ್‌ನಲ್ಲಿ ಗುತ್ತೇದಾರಿಯನ್ನು ಪಡೆದುಕೊಂಡು ತನ್ನ ಹಿಡಿತದಲ್ಲಿರಿಸಿಕೊಂಡಿದೆ. ಸ್ವಹಿತ ಸಾಧನೆ, ಪಕ್ಷದ ರಾಜಕೀಯ ಗುಂಪು ಕಾಳಗ ಇವುಗಳಿಗೆ ಕಾರ್ಪೊರೇಷನ್ ಕೌನ್ಸಿಲ್ ಮನೆಯಾಗಿದೆ. ಕಾಂಗ್ರೆಸಿನ ಈ ಗುತ್ತೇದಾರಿಯನ್ನು ಮುರಿಯದೆ ನಗರಾಭಿವೃದ್ಧಿ ಸಾಧ್ಯವಿಲ್ಲ. ಪ್ರಬಲವಾದ ವಿರೋಧ ಪಕ್ಷವಿಲ್ಲದೆ ಕಾರ್ಪೊರೇಷನ್ ಕಾಂಗ್ರೆಸ್ಸಿನ ಖಾಸಗೀ ಸೊತ್ತಾಗಿ ಪರಿಣಮಿಸಿದೆ. ಈ ಅಭಾವವನ್ನು ನೀಗಿಸಲು ವಿರೋಧ ಪಕ್ಷದ ಉಮೇದುವಾರರನ್ನು ಹೆಚ್ಚು ಸಂಖ್ಯೆಯಲ್ಲಿ ಆರಿಸಬೇಕಾಗಿದೆ.

ಕಾರ್ಪೊರೇಷನ್ ಇಂದು ಸ್ವತಂತ್ರ ಸ್ವಾಯತ್ತ ಅಂಗವಾಗಿರದೆ ಸರಕಾರದ ಹಿಡಿತದಲ್ಲಿದೆ. ಕಾರ್ಪೊರೇಷನ್ ಎಂಥದೇ ತೀರ್ಮಾನವನ್ನು ಮಾಡಿದರೂ ಸರಕಾರವದನ್ನು ಮೂಲೆಗೊತ್ತುತ್ತದೆ. ಜನತೆಯ ಒತ್ತಾಯದ ಫಲವಾಗಿ, ಸೈಕಲ್ ಕರವನ್ನು ರದ್ದುಗೊಳಿಸುವ ತೀರ್ಮಾನವನ್ನು ಕಾರ್ಪೊರೇಷನ್ ಕೌನ್ಸಿಲ್ ಮಾಡಿದ್ದರೂ ಸರಕಾರ ಅದನ್ನು ತಿರಸ್ಕರಿಸಿದೆ. ನಾಗರಿಕ ಜೀವನಕ್ಕೆ ನೇರ ಸಂಬಂಧವಿರುವ ಕಾರ್ಪೊರೇಷನಿನ ಮೇಲೆ ಸರಕಾರದ ಹಿಡಿತವಿರುವದು ಪ್ರಜಾಪ್ರಭುತ್ವಕ್ಕೇ ಅಪಹಾಸ್ಯವೆಸಗಿದಂತಾಗಿದೆ. ಕಾರ್ಪೊರೇಷನ್ ಎಂದಿನವರೆಗೆ ಸರಕಾರ ಹಿಡಿತದಲ್ಲಿರುವುದೋ ಅಲ್ಲಿಯವರೆಗೆ ಅಭಿವೃದ್ಧಿ ಸಾಧ್ಯವಿಲ್ಲ. ಆದ್ದರಿಂದಾಗಿ ಕಾರ್ಪೊರೇಷನ್ನು ಸಂಪೂರ್ಣವಾದ ಸ್ವತಂತ್ರ ಸ್ವಾಯತ್ತ ಸಂಸ್ಥೆಯಾಗಲಿಕ್ಕೆ ಹೋರಾಟವನ್ನು ನಡೆಸಬೇಕಿದೆ.

ಕಾರ್ಪೊರೇಷನ್ನಿಗೆ ಆದಾಯ ಕಡಿಮೆ ಇದೆ ಎಂದು ಹೇಳಿಕೊಂಡು ವರ್ಷ ವರ್ಷ ತೆರಿಗೆಯನ್ನು ಅಧಿಕಗೊಳಿಸಲಾಗುತ್ತಿದೆ. ಆದರೆ ನಿಜಸ್ಥಿತಿ ಇದಕ್ಕೆ ವಿರುದ್ಧವಾಗಿದೆ. ಕಾರ್ಪೊರೇಷನ್ [illegible] ಎಲ್ಲ

(೧೦ನೇ ಪುಟ ನೋಡಿ)

ಅರಾಜಕತೆ ಎಲ್ಲಿ....?

ಮೈಸೂರು ರಾಜ್ಯದಲ್ಲಿ, ಪ್ಲಾಂಟೇಷನ್ ಉದ್ದಿಮೆಯು ಅತಿ ಮುಖ್ಯವಾದುದು, ಇಲ್ಲಿ ಸಹಸ್ರಾರು ಕಾರ್ಮಿಕರ ಮೇಲಾಗುವ ದಬ್ಬಾಳಿಕೆ, ಕ್ರೌರ್ಯ ಅತೀವ. ಇವರ ಶೋಷಣೆ-ಸುಲಿಗೆ ನಿರಾಂತಕವಾಗಿ ನಡೆದಿದೆ. ಈಗೀಗ ಸಂಘಟಿತರಾಗಿ ಈ ಅನ್ಯಾಯಗಳ ವಿರುದ್ಧ, ತಮ್ಮ ಹಕ್ಕು-ಬಾಧ್ಯತೆಗಳ ರಕ್ಷಣೆಗಾಗಿ ಹೋರಾಡುತ್ತಿರುವ ಕಾರ್ಮಿಕರ ಮೇಲೆ ಹಿಂದೆಂದು ತೋರದ ನಿರ್ದಯ ನಿರಂಕುಶ ಮರ್ದನ ನೀತಿಯ ಅಸ್ತ್ರವನ್ನು ಮಾಲೀಕರು ಪ್ರಯೋಗಿಸ ತೊಡಗಿದ್ದಾರೆ. ತೋಟ ಮಾಲೀಕರಿಗೂ ಕಾರ್ಮಿಕರಿಗೂ ಮಧ್ಯೆ ತ್ರೈವಾರ್ಷಿಕ ಕೈಗಾರಿಕಾಶಾಂತಿ ಒಪ್ಪಂದಆಗಿದೆ ಎಂಬುದು ನಿಜ. ಆದರೆ ಈ ಶಾಂತಿ ಒಪ್ಪಂದದ ಲಾಭ ಮಾಲಿಕರಿಗಲ್ಲದೆ ಕಾರ್ಮಿಕರಿಗೆ ದೊರೆತಿಲ್ಲ. ಅವರ ದುಡಿಮೆಯ ಜೀವನದಲ್ಲಿ ಶಾಂತಿ ಎಂಬುದೇ ಇಲ್ಲವಾಗಿದೆ. ದಿನ ಬೆಳಗಾದರೆ ಯಾವುದಾದರೊಂದು ಅನಿಷ್ಟ ವಿಕ್ರಯಿಸುವುದು ಅವರ ಪಾಡಾಗಿದೆ. ಇಡೀ ದಿನ ಕೆಲಸ ಮಾಡಿದರೆ ಅರ್ಧ ದಿವಸ ಹಾಜರಿ; ಇದನ್ನು ಪ್ರತಿಭಟಿಸಿದರೆ ಗೂಂಡಾಗಳನ್ನು ಛೂಬಿಟ್ಟು, ಕಟ್ಟಿ ಹಾಕಿಸಿ ಬಡೆಯುವುದು, ಸ್ತ್ರೀ ಕಾರ್ಮಿಕರಿಗೂ ಹೊಡೆಯುವುದು, ಬಲಾತ್ಕಾರವಾಗಿ ಹಾರಿಸಿಕೊಂಡು ಮಾನಭಂಗ ಮಾಡುವುದು, ಚಿಕ್ಕ ಮಕ್ಕಳೆನ್ನದೆ ಮನೆ ಹೊಕ್ಕು ಮನೆಮಂದಿಯನ್ನೆಲ್ಲಾ ಥಳಿಸುವುದು ಇದು ಮೈಸೂರು ರಾಜ್ಯದ ತೋಟಗಳ ಮಾಲಿಕರು ನಡೆಸುವ ದೈತ್ಯ ದರ್ಬಾರು; ಈ ಬಗ್ಗೆ 'ಜನಶಕ್ತಿ'ಯಲ್ಲಿ ಬೇಕಾದಷ್ಟು ವರದಿಗಳು ಬಂದಿವೆ. ಆದರೆ ಇಷ್ಟರ ವರೆಗೆ ನಮ್ಮ ಕಾನೂನು ಪರಿಪಾಲಕ ಕಾಂಗ್ರೆಸ್ ಮಂತ್ರಿಗಳು ಈ ವಿಚಾರವಾಗಿ ಏನೊಂದು ಕ್ರಮ ಕೈಗೊಂಡದ್ದಿಲ್ಲ. ಈ ಎಲ್ಲಾ ಭ್ರಷ್ಟಾಚಾರ ದುಷ್ಕಾರ್ಯಗಳು, ದಮನ-ದಬ್ಬಾಳಿಕೆಗಳು ಮಾಲಿಕ ಮತ್ತವರ ಗೂಂಡಾಗಳಿಂದ ಮಾತ್ರ ನಡೆಯುತ್ತಿದೆಯೇ? ಅಲ್ಲ. ಇದರ ಜೊತೆಯಲ್ಲಿ ನೇರವಾಗಿ ಹಾಗೂ ಪರೋಕ್ಷವಾಗಿ ಪೋಲಿಸ್ ಖಾತೆಯಿಡೀ ಪಾಲುಗೊಂಡಿದೆ. ಚಿಕ್ಕಮಗಳೂರು ಜಿಲ್ಲೆಯ ಪೋಲೀಸು ಖಾತೆ ಮಾಲಿಕರ ಖಾಸಗಿ ಖಾತೆಯಾಗಿರಬಹುದೇ ಎಂಬ ಸಂಶಯ ಕಾರ್ಮಿಕರೆಲ್ಲರಲ್ಲೂ ಮನೆ ಮಾಡಿದೆ.

ಇಷ್ಟೆಲ್ಲಾ ಅರಾಜಕತೆ ಇದ್ದೂ, ಇದನ್ನು ತಾವೇ ಬೆಂಬಲಿಸಿಯೂ ನಾಚಿಕೆಗೆಟ್ಟ ಕಾಂಗ್ರೆಸ್ 'ಕೇರಳದಲ್ಲಿ ಅರಾಜಕತೆ'ಯ ಹುಯಿಲು ಎಬ್ಬಿಸುತ್ತಿರುವುದು ಅತ್ಯಂತ ಆಶ್ಚರ್ಯಕರವಾದುದು ಮಾತ್ರವಲ್ಲ, ಇದು ಸ್ಪಷ್ಟ ಆತ್ಮವಂಚನೆಯ ಪ್ರತೀಕ

ಇದೀಗ ಚಿಕ್ಕಮಗಳೂರು ಜಿಲ್ಲೆಯ ಮಾವಿನ ಗುಡಿಗೆ ಎಸ್ಟೇಟಿನಲ್ಲಿ, (ಸೋಮೇಶ್ವರ ಖಾನ) ಮಾಲಿಕರು ಗೂಂಡಾಗಳಿಂದ ಕಾರ್ಮಿಕರನ್ನು ಕಟ್ಟಿ ಹಾಕಿಸಿ ಹೊಡೆಸಿದರು ಮತ್ತು ಪೋಲೀಸರು ಈ ಗೂಂಡಾಗಳನ್ನು ದಸ್ತಗಿರಿ ಮಾಡುವ ಬದಲು ಕಾರ್ಮಿಕರನ್ನೇ ದಸ್ತಗಿರಿ ಮಾಡಿದ ವರದಿ ನಮಗೆ ಬಂದಿದೆ. ಕಾರ್ಮಿಕರ ಹೇಳಿಕೆಯನ್ನಿಲ್ಲಿ ಕೊಡಲಾಗಿದೆ:

ಜ್ವಾಲಾಮುಖಿ....!

ಅತ್ತಲಿತ್ತ ಸುತ್ತು ಮುತ್ತು
ಬಡತನವೇ ಬಡತನ;
ಬಡವರನ್ನೊ ಕೊಲ್ಲುತಿಹುದು
ಹುಚ್ಚು ಹಿಡಿದ ಒಡೆತನ!

o o o

ಬೀದಿ ಬೀದಿ ಅಲೆಯುತಿಹಳು
ನಮ್ಮ ಭಾಗ್ಯ ಭಾರತಿ;
ಅನ್ನ – ಸೀರು ದೊರೆಯದಿಹುದು
ಅವಳಿಗಿಲ್ಲೊ - ಸಾರಥಿ!

o o o

ಕೋಟಿ ಜನತೆ ಕೂಗುತಿಹುದು
ಏಕಕಂಠದಿಂದಲಿ;
'ನಿಲಿಸಿರಯ್ಯೊ, ನಿಲಿಸಿರಯ್ಯೊ!
ನರಕಪ್ರಾಯ ನರಬಲಿ!

o o o

ದುಡ್ಡು ಇರುವ ಗೊಡ್ಡ ನರನೆ
ಇಂದು ದೊಡ್ಡ ಬೊಮ್ಮನು;
ನಮ್ಮ ತಲೆಗಳೊಡೆಯುತಿರುವ–
ನಯ್ಯೊ! ಇವನೆ ಗುಮ್ಮನು!

o o o

ಕೂದಲೆಳೆಗಳಿಂದೆ ಕೋಟಿ
ಕೊರಳ ಬಿಗಿಯುತಿರುವನು;
ಸೂಕ್ಷ್ಮ-ಸೂಜಿಗಳನೊ ಚುಚ್ಚಿ
ಕರುಳ ಕೊಯ್ಯುತಿರುವನು!

ತೆರೆದ ಬಾಯಿಗಳಲಿ, ಅಯ್ಯೊ
ಕೊಳ್ಳಿಯಿಕ್ಕುತಿರುವನು:
ಕಯ್ಯನೊಡ್ಡಲೊಡನೆ ಹಿಡಿದು -
ಹೆಡಕ, ಮುರಿಯುತಿರುವನು!

o o o

ಅತ್ತ ಪ್ರೇತ ಯಾತ್ರೆ ನಡೆಯೆ
ಇತ್ತಲಿವನ ಹಬ್ಬವು;
ಬರದ ಕಾಳಿ ಕುಣಿಯಲಿವಗೆ
ಅದುವೆ ವಿಕಟ - ಹಾಸ್ಯವು!

o o o

ಒಮ್ಮೆ ರೊಚ್ಚಿಗೆದ್ದರಾಯ್ತು
ಮಹಾ–ಕ್ರೂರ, ಬಡತನ,
ಪ್ರಳಯಂಕರ,–ಭೂಕಂಪನ,
ಜ್ವಾಲಾಮುಖಿ - ನರ್ತನ!

o o o

'ನಾನೆ ಸರ್ವಶಕ್ತ'ನೆಂಬ
ಗರ್ವವಿರುವ, ದಾನವ;
ನರಕ–ಸ್ಥಿತಿಯಲಿಳಿದು. ತಾನೆ
ಪಡೆವನು, ಬಹುಮಾನವ!

o o o

ಅತ್ತಲಿತ್ತ ಸುತ್ತು ಮುತ್ತು
ಬಡತನವೇ ಬಡತನ;
ಬಡವರನ್ನೊ ಕೊಲ್ಲುತಿಹುದು
ಹುಚ್ಚು ಹಿಡಿದ ಒಡೆತನ!

"ಹೇಮಂತ" — ಬೆಳಗಾವಿ

ತೋಟ ಕಾರ್ಮಿಕರ ಮೇಲೆ ಮಾಲಿಕ-ಪೊಲೀಸರ ದಬ್ಬಾಳಿಕೆ!

ನಾವು ಸದ್ರಿ ಎಸ್ಟೇಟ್‌ನಲ್ಲಿ ಯಾವ ತೊಂದರೆಯೂ ಇಲ್ಲದೆ ಕೆಲಸ ಮಾಡುತ್ತಾ ಬಂದಿರುತ್ತೇವೆ. ತಾರೀಕು 2-12—57ರಂದು ಕಾರ್ಮಿಕರಾದ ಅಂತೋನಿಸ್ವಾಮಿ, ಆರೋಗ್ಯಸ್ವಾಮಿ, ರಾಜು, ಅರ್ಬುದಂ ಮತ್ತು ಮುಂಗಿಲಯರಿಗೆ ಅರ್ಧ ಹಾಜರಿಯನ್ನು ಹಾಕಿದ್ದರ ಬಗ್ಗೆ ನಾವು ಮರುದಿನ ಗಣತೆಯಲ್ಲಿ ಕೇಳಿದೆವು. ಅದಕ್ಕೆ ಅವರು (ಮಾಲಿಕರು) ನಮ್ಮ ಇಷ್ಟವೆಂದು ಹೇಳಿದರು. ಇದು ನಡೆದಿದ್ದು ಇದೇ ಮಾಲಕರಿಗೆ ಸೇರಿದ ಸೋಮೇಶ್ವರ ಖಾನಿನಲ್ಲಿ. ನಾವು ಪೂರ್ತಿ ಕೆಲಸ (ಸಾಯಂಕಾಲದ ವರೆಗೆ) ಮಾಡಿದರೂ ನಮಗೆ ಅರ್ಧ ಹಾಜರಿ ಹಾಕಿದ್ದೀರಲ್ಲಾ ಎಂದು ಕೇಳಿದೆವು. ಅದಕ್ಕೆ ಮಾಲೀಕರು ಹೊಡೆಯಲಿಕ್ಕೆ ಬಂದರು. ನಾವು ಹೆದರಿ ಓಡಿ ಬಂದೆವು. ಬರುವಾಗ ಮಾಲೀಕರಿಗೆ ಸಹಾಯಕರಾಗಿ ಡ್ರೈವರ್, ಶೋಫ್ ಕೀಪರ್, ಬ್ಲೇಕ್‌ಸ್ಮಿತ್, ಇವರೆಲ್ಲಾ ಸೇರಿ ಹೊಡೆದರು. ಮಾಲೀಕರು ಕೋಲಿನಿಂದಲೂ ಬಾಕಿ ಮೂವರು ಕೈಯಿಂದಲೂ ಹೊಡೆದರು. ಆನಂತರ ನಾವು ಮಾವಿನ ಗುಡಿಗೆ ಎಸ್ಟೇಟಿಗೆ ಬಂದೆವು. ಮತ್ತೆ ಪುನಃ ನಾವು ಎಲ್ಲರೂ ಸೇರಿ ಮಾಲೀಕರ ಹತ್ತಿರ ನಿಮ್ಮಲ್ಲಿ ಕೆಲಸ ಮಾಡುವ ನಮ್ಮನ್ನು ನೀವು ಈತರ ಹೊಡೆಯುವುದು ಸರಿಯೇ ಎಂದುಕೇಳುವಷ್ಟರಲ್ಲಿಅಲ್ಲಿ ತುಂಬಾ ಜನರು ಸೇರಿದ್ದರು. ಸೇರಿದ್ದವರು ನಮ್ಮ ಮೇಲೆ ಏರಿ ಬಂದರು ಆಗ ಅವರಿಗೂ ನಮಗೂ ಹೊಡೆದಾಟವಾಯಿತು. ನಮ್ಮ ಪೈಕಿ 1) ಚಿನ್ನಮಾಣಿಕ್ಯಂ, 2) ಅರ್ಬುದಂ, 3) ಕಂದಸ್ವಾಮಿ, 4) ಪೊಂಗಾನ್, 5) ಆರೋಗ್ಯಸ್ವಾಮಿ, 6) ರಾಜು, 7) ನಾದುಲ, 8) ಸಣ್ಣ ಪ್ರಹಲ್ಲಾದ, 9) ದೂಜ ಮತ್ತು ದೊಡ್ಡ ಪ್ರಹಲ್ಲಾದ ಎಂಬ ಹತ್ತು ಜನರನ್ನು ಕಟ್ಟಿ ಹಾಕಿ ಹೊಡೆದರು. ಈ ಪೈಕಿ ಕಂದಸ್ವಾಮಿ ಎಂಬವರಿಗೆ ವಿಪರೀತವಾದ ಪೆಟ್ಟು ಬಿದ್ದಿದೆ. ಮೇಲೆ ಕಾಣಿಸಿದ ಹತ್ತು ಜನರನ್ನೂ ಸುಮಾರು ರಾತ್ರಿ ಹನ್ನೆರಡು ಗಂಟೆಯ ಹೊತ್ತಿಗೆ ಪೋಲೀಸರನ್ನು ಮಾಲೀಕರು ಕರಕೊಂಡು ಬರುವ ತನಕ ಕಟ್ಟಿ ಹಾಕಿದ್ದರು. ಈ ಪೈಕಿ ಮೂರು ಜನರನ್ನು ಮಾತ್ರ (ರಾಜು, ಮಾಣಿಕ್ಯಂ ಮತ್ತು ಸಣ್ಣ ಪ್ರಹಲ್ಲಾದ) ಪೋಲೀಸರು ಕರೆದುಕೊಂಡು ಮಾಲೀಕರ ವೇನ್‌ನಲ್ಲೇ ಹೋದರು. ಪೋಲೀಸರು ಕೂಡ ಈ ಹತ್ತು ಜನರನ್ನು ಹೊಡೆದಿರುತ್ತಾರೆ. ಇಲ್ಲಿ ಬಿಟ್ಟುಹೋದ ಪೈಕಿ ಕಂದಸ್ವಾಮಿಗೆ ಬಹಳವಾಗಿ ಪೆಟ್ಟು ಬಿದ್ದಿದೆ.

ಪೋಲೀಸರು ನಮ್ಮನ್ನು ಈ ಸಂಬಂಧ ಬಗ್ಗೆ ಯಾವ ವಿಚಾರಣೆಯು ಮಾಡಲಿಲ್ಲ. ಮೇರಿ ಎಂಬ ಹೆಂಗಸನ್ನು ಮಾಲೀಕರು ಮತ್ತು ಅವರ ಸಿಬ್ಬಂದಿಗಳು ಸೇರಿ ತಾ 3-12-57ರಂದು ಹಗಲು ಸುಮಾರು ಮೂರು ಗಂಟೆ ಹೊತ್ತಿಗೆ ಹೊಡೆದು ಬಿಟ್ಟರು. ಮತ್ತೆ ಪುನಃ ರಾತ್ರಿ ಸುಮಾರು ಎರಡು ಗಂಟೆಯ ಹೊತ್ತಿಗೆ ಮೇರಿಬಾಯಿಯನ್ನು ಮಾಲೀಕರ ಗೂಂಡಾಗಳು ಎಳೆದುಕೊಂಡು ಹೋಗಿ ತೋಟ ಸುಪ್ರೇಂಡ್ ಬಂಗ್ಲೆಗೆ ಬಿಟ್ಟು ಮೇರಿಬಾಯಿಯನ್ನು ಮಾನಭಂಗಪಡಿಸಿ ಬಿಟ್ಟಿದ್ದಾರೆ.

ನಮ್ಮ ಮೇಲೆ ನಡೆದ ಅನ್ಯಾಯ ಅಕ್ರಮಗಳ ಬಗ್ಗೆ ಚಿಕ್ಕಮಗಳೂರು ಅಸಿಸ್ಟಾಂಟ್ ಕಮೀಶನರ್ ಓಫ್ ಲೇಬರ್ ಇವರಿಗೆ, ನಮ್ಮ ಪ್ರತಿನಿಧಿಯಾಗಿ ಎನ್. ರಾಜುಮೇಸ್ತ್ರಿ. ಎಸ್. ಆರುಮುಗಂ ಮತ್ತು ಪೋಕರ್‌ಕಾಕ ಇವರುಗಳನ್ನು ಕಂಪ್ಲೇಂಟ್ ಕೊಡಲು 4—12—57ರಲ್ಲು ಕಳಿಸಿದ್ದೆವು ಹಾಗೆಯೇ ಕಂಪ್ಲೇಂಟ್ ಕೊಡಲಾಗಿದೆ. ತದನಂತರ 5—12—57ರಲ್ಲು ರಾತ್ರಿ ಜಯಪುರದ ಪ್ಲಾಂಟೇಶನ್ ಲೇಬರ್ ಇನ್‌ಸ್ಪೆಕ್ಟರ್ ಬಂದು ನಮ್ಮನ್ನು ವಿಚಾರಣೆ ನಡೆಸಿ ನಮ್ಮ ಹೇಳಿಕೆಗಳನ್ನು ಪಡೆದುಕೊಂಡು ಹೋದರು.

ಮತ್ತೆ ಪುನಃ 9—12—57ರಲ್ಲು ಪೋಲೀಸರು ಬಂದು ಪೋಕರ್‌ಕಾಕ ಅಂತೋಣಿಸ್ವಾಮಿ ಇವರನ್ನು ದಸ್ತಗಿರಿ ಮಾಡಿ ಹೋದರು: ಪೋಕರ್‌ಕಾಕನನ್ನು ಕೊಪ್ಪ ಪೋಲಿಸ್ ಸ್ಟೇಶನಿನಿಂದ ಬಿಟ್ಟರು. ಅಂತೋಣಿಸ್ವಾಮಿಯನ್ನು ಲೋಕಪ್ಪಿನಲ್ಲಿಟ್ಟರು.

ಆ ನಂತರ ಈವರೆಗೆ ಪೋಲೀಸರು ಬಂಧಿಸಿ ಕೊಂಡುಹೋದವರು ಏನಾಗಿದ್ದಾರೆಂದೂ ಗೊತ್ತಿಲ್ಲ, ಈ ನಡುವೆ ಎನ್. ರಾಜುಮೇಸ್ತ್ರಿ ಏನಾಗಿದ್ದಾರೆಂದು ಗೊತ್ತಿಲ್ಲ.

ತಾವು ಈ ಬಗ್ಗೆ ಯೋಗ್ಯ ಕ್ರಮವನ್ನು ಕೈಗೊಂಡು ನಮಗೆ ರಕ್ಷಣೆ ಮತ್ತು ನ್ಯಾಯ ದೊರಕಿಸಿ ಕೊಡುವುದರ ಮೂಲಕ ಮೇಲಿನ ಅನ್ಯಾಯವನ್ನು ನಿಲ್ಲಿಸಲು ಪ್ರಯತ್ನಿಸುವಿರೆಂದೂ, ರಕ್ಷಣೆ ಒದಗಿಸಬೇಕಾಗಿಯೂ ಪ್ರಾರ್ಥನೆ.

ಇದು ಕರ್ನಾಟಕ ಪ್ರಾಂತ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಸಂಘಕ್ಕೆ ಕಾರ್ಮಿಕರೆಲ್ಲರೂ ಕೂಡಿ ಬರೆದು ಕಳಿಸಿದ ದೂರಾಗಿದೆ.

ಲೇಖಕ—ಸಂಪಾದಕ

- ಕಾದಂಬರಿ ಓದಯ್ಯಾ ಎಂದರೆ ಮುನ್ನುಡಿ ಯಾರದು ಎಂದ.
- ಅಕ್ಷರ ಕಾಣಿಸದೇ ಇರೋ ಪುಸ್ತಕಕ್ಕೆ ರಕ್ಷಾಕವಚ ಬೇಕಂತೆ!
- ತೋಚಿದ್ದೆಲ್ಲಾ Nobelಉ ಗೀಚಿದ್ದೆಲ್ಲಾ ನಾವಲ್ಲು.
- ಅಚ್ಚು ಮಾಡಲಾರದ ಸಂಪಾದಕ ಅಕ್ಷರ ಸ್ವಚ್ಛವಾಗಿಲ್ಲ ಅಂದ್ನಂತೆ.
- ಯೋಚನೆ ಮಾಡಿ ಬರೆದ್ರೂ ಯಾಚನೆಮಾಡೋದು ತಪ್ಪಿಲ್ಲ.
- ಬರಿಯೋದ ಒಂದು ಕಥೆ; ಹೇಳೋದು ಸಾವಿರ ವ್ಯಥೆ.
- ಪೂರ್ತಿ ಕೆಟ್ಟರೋ ಕಥೆ Tragedy ಆದ್ರೇನು Comedy ಆದ್ರೇನು?
- ಶುಧ್ಧಾಗಿರೋ ಕಥೆ ಅಂತ ಓದಿದ್ರೆ ಕದ್ದು ಬರೆದಿರುವುದೆ?

—"ನಾಣಿ", ಬೆಂಗಳೂರು.

1972ರಲ್ಲಿ ಚೀನವು ಬ್ರಿಟಿಷ್ ರಾಷ್ಟ್ರವನ್ನು ಮೀರಿಸುವುದು

ಎನ್.ಎಲ್. ಉಪಾಧ್ಯಾಯ

"ಇನ್ನು ಹದಿನೈದು ವರ್ಷಗಳಲ್ಲಿ ಉಕ್ಕು ಮತ್ತಿತರ ಮುಖ್ಯ ಕೈಗಾರಿಕಾ ವಸ್ತುಗಳ ಉತ್ಪಾದನೆಯಲ್ಲಿ ಚೀನವು ಇಂಗ್ಲೆಂಡನ್ನು ಮೀರಿಸುವು''ಎಂದು ಚೀನಾದ ಉಪಪ್ರಧಾನಿ ಶ್ರೀ ಲಿಫು-ಚುನ್‌ರವರು ಸಾರಿದ್ದಾರೆ. ಚೈನಾದ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ 8ನೇ ಅಧಿವೇಶನದಲ್ಲಿ ಮಾತಾಡುತ್ತಾ ಅವರು ಚೀನದ ಪ್ರಥಮ ಪಂಚವಾರ್ಷಿಕ ಯೋಜನೆಯ ಸಾಧನೆ ಮತ್ತು ದ್ವಿತೀಯ ಯೋಜನೆಯ ಗುರಿಗಳನ್ನು ವಿವರಿಸಿ ಈ ಭವ್ಯ ಚಿತ್ರವನ್ನು ಮುಂದಿಟ್ಟರು.

ಆಗಸ್ಟ್ 15, 1947ರಂದು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ಈಗ ಹತ್ತು ವರ್ಷಗಳಾದುವು. ಚೀನದ ಪ್ರಜಾಪ್ರಭುತ್ವವು ಅಕ್ಟೋಬರ್ 1, 1949ರಲ್ಲಿ, ಅಂದರೆ ನಮಗಿಂತ ಎರಡು ವರ್ಷದ ನಂತರ ಸ್ಥಾಪನೆಯಾಯಿತು. ಭಾರತದ ಪ್ರಥಮ ಯೋಜನೆಯು 1951ರಲ್ಲಿ ಆರಂಭವಾಯಿತು. ಆದರೆ ಚೈನಾದಲ್ಲ 1952ರಲ್ಲಿ ಪಂಚವಾರ್ಷಿಕ ಯೋಜನೆ ಆರಂಭವಾಗಿ ಈಗ ಅದು ಮುಗಿದಿದೆ. ಅವರ ದ್ವಿತೀಯ ಯೋಜನೆಯು 1962ರಲ್ಲಿ ಮುಗಿಯಲಿದೆ.

ಉಪಪ್ರಧಾನಿ ಲಿಫು-ಚುನ್‌ರವರು ಪ್ರಥಮ ಯೋಜನೆಯ ಬಗ್ಗೆ ಈ ರೀತಿ ವಿವರಿಸಿದ್ದಾರೆ.

ಉಕ್ಕು ಉತ್ಪಾದನೆ 1952ರಲ್ಲಿ 1,350,000 ಟನ್ ಇದ್ದದ್ದು 1957ರಲ್ಲಿ 5,240,000ಕ್ಕೇರಿದೆ. ಭೋಗ್ಯ ವಸ್ತುಗಳ ಉತ್ಪಾದನೆ ಶೇ 80ರಷ್ಟು ಹೆಚ್ಚಾಗಿದೆ. ದವಸ ಧಾನ್ಯಗಳು 154·5 ಮಿಲಿಯ ಟನ್‌ಗಳಿಂದ 185 ಮಿಲಿಯ ಟನ್‌ಗಳಿಗೇರಿವೆ. ಹತ್ತಿ 1,305,000 ಟನ್‌ಗಳಿಂದ 1,640,000 ಟನ್ ಆಗಿದೆ. 8,500 ಕಿಲೋಮೀಟರ್ ಹೊಸ ರೈಲು ಹಾಕಲಾಗಿದೆ. ಐದು ವರ್ಷಗಳಲ್ಲಿ 80 ಲಕ್ಷ ಜನರಿಗೆ ಕೈಗಾರಿಕೆಯಲ್ಲಿ ಹೊಸ ಉದ್ಯೋಗ ಕಲ್ಪಿಸಲಾಗಿದೆ. 6 ಲಕ್ಷ ಇಂಜಿನಿಯರ್‌ಗಳನ್ನು ತಯಾರು ಮಾಡಲಾಗಿದೆ. 270,000 ಜನ ಕಾಲೇಜು ಪದವೀಧರರಾಗಿದ್ದಾರೆ.

ಕೆಲಸಗಾರರ ವೇತನದಲ್ಲಿ ಶೇ. 37ರಷ್ಟು ಹೆಚ್ಚಾಗಿದೆ. ರೈತರ ಆದಾಯ ಶೇ. 30ರಷ್ಟು ಏರಿದೆ.

ಯೋಜನೆಯ ಗುರಿಯನ್ನು ಸಾಧಿಸಿದ್ದಲ್ಲದೆ ಅದಕ್ಕಿಂತಲೂ ಹೆಚ್ಚಿನ ಪ್ರಗತಿಯಾಗಿದೆ. ಒಟ್ಟು ಕೈಗಾರಿಕಾ ಉತ್ಪಾದನೆಯು ಯೋಜನೆಯ ಗುರಿಗಿಂತ ಶೆ. 17ರಷ್ಟು ಹೆಚ್ಚಾಗಿದೆ ಮತ್ತು ಹಾಕಿದ ಬಂಡವಾಳವೂ ಯೋಜನೆಗಿಂತ ಶೇ. 13ರಷ್ಟು ಜಾಸ್ತಿಯಾಗಿದೆ.

ಚೈನಾದ ಶಹರಗಳಲ್ಲೂ ಹಳ್ಳಿಗಳಲ್ಲೂ ಈಗ ಸಮಾಜವಾದಿ ಆರ್ಥಿಕ ಕ್ಷೇತ್ರವು ಬಲವಾಗಿದೆ ಬಂಡವಾಳಶಾಹಿ ಭಾಗವನ್ನು ಹೆಚ್ಚು ಕಡಿಮೆ ನಿರ್ಮೂಲ ಮಾಡಲಾಗಿದೆ ಮತ್ತು ವೈಯಕ್ತಿಕ ಕ್ಷೇತ್ರ ತೀರಾ ಅಲ್ಪ ಪ್ರಮಾಣದ್ದಾಗಿದೆ.

1956ರ ಕೊನೆಯಲ್ಲಿ ಸರಕಾರಿ ಕಾರ್ಖಾನೆ ಮತ್ತು ಗಣಿಗಳ ಉತ್ಪಾದನೆಯು ದೇಶದ ಒಟ್ಟು ಉತ್ಪಾದನೆಯ ಶೇಕಡ 65 5ರಷ್ಟೂ, ಸಹಕಾರಿ ಸಂಸ್ಥೆಗಳು ಶೇ. 2ರಷ್ಟೂ ಮತ್ತು ಖಾಸಗಿ ಜಂಟೀಸರಕಾರಿ ಮಾಲಿಕತ್ವದಲ್ಲಿ ಶೇ. 32 5ರಷ್ಟು ಆಗಿದೆ.

ವ್ಯವಸಾಯ ಕ್ಷೇತ್ರ ನೋಡಿದರೆ ಸರಕಾರಿ ಜಮೀನುಗಳಲ್ಲಿ ಒಟ್ಟು ವ್ಯವಸಾಯ ಉತ್ಪಾದನೆಯ ಶೇ 2ರಷ್ಟು, ಸಹಕಾರಿ ವ್ಯವಸಾಯ ಕ್ಷೇತ್ರದಲ್ಲಿ ಶೇ 94ರಷ್ಟು ಮತ್ತು ವೈಯಕ್ತಿಕ ರೈತರ ಉತ್ಪಾದನೆ ಶೇ 5ರಷ್ಟು ಆಗಿದೆ.

ವ್ಯಾಪಾರದಲ್ಲೂ ಸರಕಾರಿ ಸ್ಟೋರ್‌ಗಳಲ್ಲಿ ಒಟ್ಟು ವ್ಯಾಪಾರದ ಶೇ. 38·5ರಷ್ಟು, ಸಹಕಾರಿ ಸಂಸ್ಥೆಗಳಲ್ಲಿ ಶೇ 29·9ರಷ್ಟು, ಸರಕಾರಿ ಮತ್ತು ಖಾಸಗಿ ಜಂಟೀ ಮಾಲಿಕತ್ವದ ಸ್ಟೋರ್‌ಗಳಲ್ಲಿ ಶೇ 28.6ರಷ್ಟು ಮತ್ತು ಖಾಸಗಿ ವ್ಯಾಪಾರಸ್ಥರ ಮೂಲಕ ಶೇ 3ರಷ್ಟು ನಡೆದಿದೆ.

ಪ್ರಥಮ ಪಂಚವಾರ್ಷಿಕ ಯೋಜನೆಯು ಚೈನಾದ ಕೈಗಾರಿಕಾಭಿವೃದ್ಧಿಗೆ ತಳಹದಿಯಾಗಿದೆ. ಘನಕೈಗಾರಿಕೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಅದರಲ್ಲಿ ಕೊಡಲಾಗಿದೆ. ಈ ಯೋಜನೆಗೆ ಬೇಕಾಗಿದ್ದ ಯಂತ್ರಗಳಲ್ಲಿ ಶೇ 60ರಷ್ಟು ಯಂತ್ರಗಳೂ ಶೇ 80ರಷ್ಟುಲೋಹಗಳೂ ದೇಶದಲ್ಲೇ ಆಗಿವೆ. ಈಗಅನೇಕ ಹೊಸ ಯೋಜನೆಗಳು ತಯಾರಾಗುತ್ತಿವೆ. ಕೈಗಾರಿಕೆ ಬೆಳೆಯುತ್ತಿದೆ ನೀರಾವರಿ ಕ್ಷೇತ್ರ ಹೆಚ್ಚುತ್ತಿದೆ. 40 ಲಕ್ಷ ಹೆಕ್ಟರ್ ಸರಕಾರಿ ಜಮೀನನ್ನು ಹೊಸದಾಗಿ ವ್ಯವಸಾಯ ಮಾಡಲಾಗುತ್ತಿದೆ.

ಈ ಅದ್ಭುತ ವಿಜಯಕ್ಕೆ ಕಮ್ಯೂನಿಸ್ಟ ಪಾರ್ಟಿಯ ಸರಿಯಾದ ನೇತೃತ್ವ, ದುಡಿಯುವ ಜನತೆಯ ಉತ್ಸಾಹ ಮತ್ತು ಕ್ರಿಯಾಶೀಲತೆ, ಸೋವಿಯತ್ ರಷ್ಯಾ ಮತ್ತಿತರ ಸಮಾಜವಾದಿ ರಾಷ್ಟ್ರಗಳ ಸಹಾಯ ಮತ್ತು ಪ್ರಪಂಚದ ಪ್ರಗತಿಗಾಮಿ ಜನತೆಯ ಬೆಂಬಲಗಳು ಕಾರಣವೆಂದು ಉಪಪ್ರಧಾನಿಯವರು ಹೇಳಿದ್ದಾರೆ.

ದ್ವಿತೀಯ ಪಂಚವಾರ್ಷಿಕ ಯೋಜನೆ (1962ರಲ್ಲಿ ಮುಗಿಯುವ)ಯ ಗುರಿ ಈ ರೀತಿ ಇದೆ:

ಉಕ್ಕು ಉತ್ಪಾದನೆ-- 120 ಲಕ್ಷ ಟನ್, ಕಲ್ಲಿದ್ದಲು— 23 ಕೋಟಿ ಟನ್, ವಿದ್ಯುತ್ಪಾದನೆ— 4,400 ಕೋಟಿ KWH, ರಸಾಯನಿಕ ಗೊಬ್ಬರ— 70 ಲಕ್ಷ ಟನ್, ಧಾನ್ಯಗಳು— 24 ಕೋಟಿ ಟನ್, ಹತ್ತಿ— 21·5 ಲಕ್ಷ ಟನ್ ಇತ್ಯಾದಿ. ಘನ ಕೈಗಾರಿಕೆಗೆ ಹೆಚ್ಚಿನ ಗಮನವನ್ನೂ, ಮಹತ್ವವನ್ನು ಕೊಡಲಾಗುವುದು ಮತ್ತು ಅದರ ಉತ್ಪಾದನೆಯನ್ನು ಇಮ್ಮಡಿಗೊಳಿಸಲಾಗುವುದು. ವ್ಯವಸಾಯಕ್ಕೆ ಸಹಾಯಕವಾಗುವ ಘನಕೈಗಾರಿಕೆಯನ್ನು ಇನ್ನೂ ಹೆಚ್ಚು ತೀವ್ರತೆಯಿಂದ ಅಭಿವೃದ್ಧಿಗೊಳಿಸಲಾಗುವುದು.

ವ್ಯವಸಾಯ ಉತ್ಪಾದನೆಯನ್ನು ಹೆಚ್ಚಿಸಲು ಈಗ ಸಾಗುವಳಿಯಾಗುತ್ತಿರುವ ಜಮೀನುಗಳಲ್ಲಿ ಹೆಚ್ಚು ಬೆಳೆ ತೆಗೆಯಲು ಬಹಳ ಪ್ರಯತ್ನ ನಡೆಸಲಾಗುವುದು. ಬಂಜರು ಜಮೀನುಗಳನ್ನು ಸಾಗುವಳಿಗೆ ತರಲೂ ಪ್ರಯತ್ನಿಸಲಾಗುವುದು. ಅದಕ್ಕೆ ಬೇಕಾದ ಯೋಗ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸರಕಾರ ನಿರ್ಧರಿಸಿದೆ.

1972ರಲ್ಲಿ ಚೈನಾದ ಉಕ್ಕಿನ ಉತ್ಪಾದನೆ 3·5 ಕೋಟಿಯಿಂದ 4ಕೋಟಿ ಟನ್‌ಗಳಷ್ಟಾಗುವುದೆಂದು ಅಂದಾಜು ಮಾಡಲಾಗಿದೆ. ಇಂಗ್ಲೆಂಡಿನಲ್ಲಿ ಈಗ 2·1 ಕೋಟಿ ಟನ್ ಉಕ್ಕು ಉತ್ಪಾದನೆಯಾಗುತ್ತಿದ್ದರೂ ಅದನ್ನು ಹೆಚ್ಚು ಪ್ರಮಾಣದಲ್ಲಿ ಅಧಿಕಗೊಳಿಸಲು ಅವರಿಗೆ ಸಾಧ್ಯವಿಲ್ಲ. ಕಲ್ಲಿದ್ದಲು, ಯಂತ್ರಗಳು, ಸಿಮೆಂಟ್, ರಾಸಾಯನಿಕ ಗೊಬ್ಬರ ಮುಂತಾದುವುಗಳ ಉತ್ಪಾದನೆಯಲ್ಲೂ ಚೈನಾ ಬ್ರಿಟನ್ನಿಗಿಂತಲೂ ಮುಂದುವರಿಯುವುದು. ಇದಕ್ಕೆ ಕೆಲವು ಕಾರಣಗಳಿವೆ:

○ ರಾಜಕೀಯವಾಗಿಯೂ ಆರ್ಥಿಕವಾಗಿಯೂ ಚೈನಾದಲ್ಲಿ ಸಮಾಜವಾದಿ ಪದ್ಧತಿಯು ಭದ್ರವಾಗಿ ಸ್ಥಾಪನೆಯಾಗಿದೆ. ಇದರಿಂದ ಉತ್ಪಾದನಾ ಶಕ್ತಿಗಳು ಅಭಿವೃದಿಯಾಗಲು ಸಾಧ್ಯವಾಗಿದೆ.

○ ದೊಡ್ಡ ಜನಸಂಖ್ಯೆಯಿರುವುದರಿಂದ ಸಾಕಷ್ಟು ಜನಬಲವೂ ವಿಶಾಲವಾದ ಆಂತರಿಕ ಮಾರ್ಕೆಟ್ ಸಹಾ ಇದೆ. ಚೀನೀಯರಲ್ಲಿ ನವಚೇತನ ಮೂಡಿದೆ. ಅವರು ಧೈರ್ಯಶಾಲಿಗಳೂ ಕ್ರಿಯಾಶೀಲರೂ ಆಗಿದ್ದಾರೆ.

○ ಚೈನಾದಲ್ಲಿ ಕಬ್ಬಿಣ, ಕಲ್ಲಿದ್ದಲು ಮತ್ತಿತರ ವಸ್ತುಗಳು ವಿಪುಲವಾಗಿ ದೊರೆಯುತ್ತವೆ. ಜಲಶಕ್ತಿಯಲ್ಲಿ ಚೈನವು ಪ್ರಪಂಚದ ಅಗ್ರ ರಾಷ್ಟ್ರಗಳಲ್ಲೊಂದಾಗಿದೆ.

○ ಚೈನಾಕ್ಕೆ ಬಲವಾದ ಸೋವಿಯತ್ ರಷ್ಯಾ ಮತ್ತಿತರ ಸಮಾಜವಾದಿ ರಾಷ್ಟ್ರಗಳ ಬೆಂಬಲವಿದೆ. ಅವರ ಅನುಭವ ಬಹಳ ಸಹಾಯಕವಾಗಿದೆ.

○ ಅತ್ಯಾಧುನಿಕ ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನೆಗಳನ್ನು ರಷ್ಯಾ ಮತ್ತಿತರ ಸಮಾಜವಾದಿ ರಾಷ್ಟ್ರಗಳಿಂದ ನೇರವಾಗಿ ಪಡೆಯಲು ಸಾಧ್ಯವಿದೆ.

○ ಚೆನ್ನಾಗಿ ಪಳಗಿದ ಚೈನಾದ ಕಮ್ಯೂನಿಸ್ಟ ಪಾರ್ಟಿಯ ಮತ್ತು ಅಧ್ಯಕ್ಷ ಮಾ-ತ್ಸೆ-ತುಂಗ್‌ರವರ ನಾಯಕತ್ವದಲ್ಲಿ ಉತ್ಪಾದನಾ ಶಕ್ತಿಗಳ ಬೆಳವಣಿಗೆಗೆ ಸರಿಯಾದ ಧೋರಣೆ, ಮಾರ್ಗದರ್ಶನ ಮತ್ತು ಕಾರ್ಯಕ್ರಮ ದೊರೆಯುತ್ತಿರುವುದು. ಅದನ್ನು ಕೃತಿಗಿಳಿಸಲು ಚೈನಾದ ಕಾರ್ಮಿಕರು, ರೈತರು ಮತ್ತು ಬುದ್ಧಿಜೀವಿಗಳು ನಿರ್ಧರಿಸಿದ್ದಾರೆ. ಇದು ಮೂಲಭೂತವಾದ ಅಂಶ.

ಈ ಕಾರಣಗಳಿಂದ ಚೈನಾ ಬೇಗನೆ 10–15 ವರ್ಷಗಳಲ್ಲಿ ಪ್ರಬಲವಾದ ಸಮಾಜವಾದಿ ರಾಷ್ಟ್ರವಾಗುವುದು ಖಂಡಿತ.

ಭಾರತ ಮತ್ತು ಚೈನಾ ರಾಷ್ಟ್ರಗಳ ಯೋಜನೆಯ ಗುರಿಗಳನ್ನು ಹೋಲಿಸಿ ನೋಡಿದರೆ ಭಾರತ ಎಷ್ಟು ಮಂದಗತಿಯಿಂದ ಮುಂದರಿಯುತ್ತಿದೆಂಬುದು ಸ್ಪಷ್ಟವಾಗುತ್ತದೆ. 1961ರಲ್ಲಿ ನಮ್ಮಲ್ಲಿ ಉಕ್ಕಿನ ಉತ್ಪಾದನೆ 43 ಲಕ್ಷ ಟನ್‌ಗಳಷ್ಟಾಗುವುದೆಂದು ಅಂದಾಜಾಗಿದೆ. ಚೈನಾದಲ್ಲಿ ಈಗಲೇ ಅದಕ್ಕಿಂತ ಹೆಚ್ಚು ಉಕ್ಕು ತಯಾರಾಗುತ್ತಿರುವುದು ಗಮನೀಯವಾಗಿದೆ. ದೇಶದ ಅಭಿವೃದ್ಧಿಗೆ ಉಕ್ಕು ಬಹಳ ಅವಶ್ಯ. ಅದರಲ್ಲೇ ನಾವು ಹಿಂದುಳಿದಿದ್ದೇವೆ ಇತರ ಕ್ಷೇತ್ರಗಳಲ್ಲೂ ಇದೇ ಪರಿಸ್ಥಿತಿ ಕಂಡು ಬರುತ್ತದೆ.

ಇದರ ಜೊತೆಗೆ ಚೈನಾದಲ್ಲಿ ಹಣದುಬ್ಬರವೆಂಬ ರೋಗವಿಲ್ಲವೆಂಬುದನ್ನು ನಾವು ಮರೆಯಬಾರದು. ಬೆಲೆ ಏರಿಕೆ, ಹಣದುಬ್ಬರ ಮತ್ತು ವಿದೇಶಿ ವಿನಿಮಯದ ಕೊರತೆಗಳು ನಮ್ಮ ದೇಶವನ್ನು ಮಿತಿಮೀರಿ ಪೀಡಿಸುತ್ತಿದ್ದು ದ್ವಿತೀಯ ಯೋಜನೆಗೆ ವಿಶೇಷ ಧಕ್ಕೆ ತಗಲಿದೆ. ಯೋಜನೆಯನ್ನು ಪೂರೈಸುವ ಬದಲು ಯೋಜನೆಯ ತಿರುಳನ್ನು ಹುಡುಕಲು ಸರಕಾರ ಹೊರಟಿರುವಾಗ ಚೈನಾ ದೇಶ ಯಾವ ಯೋಚನೆಯೂ ಇಲ್ಲದೆ ಪ್ರಗತಿ ಹಾದಿಯಲ್ಲಿ ತನ್ನ ಯೋಜನೆಯ ಗುರಿ ಮುಟ್ಟಲು ಮುಂದರಿಯುತ್ತಿದೆ. ಭಾರತದಲ್ಲಿ ಬೆಲೆಯೇರಿಕೆಯೇ ಪರಿಣಾಮವಾಗಿ ಸಾಮಾನ್ಯ ಜನತೆಯ ಜೀವನಮಟ್ಟ ಕುಂಠಿತವಾಗುತ್ತಿರುವಾಗ ಚೈನಾದಲ್ಲಿ ಬೆಲೆಯೇರಿಕೆಯೇ ಇಲ್ಲದೆ ಕೆಲಸಗಾರರ ಮತ್ತು ರೈತರ ಆದಾಯಗಳು ಹೆಚ್ಚಾಗಿ ಅವರ ಜೀವನ ಮಟ್ಟ ದಿನೇ ಏರುತ್ತಿದೆ. ಭಾರತ ಮತ್ತು ಚೈನಾ ದೇಶಗಳ ವಿವಿಧ ಸಮಾಜ ಪದ್ಧತಿಯೇ ಇದಕ್ಕೆ ಕಾರಣವೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಸಮಾಜವಾದವೇ ತನ್ನ ಗುರಿಯೆಂದು ಭಾರತ ಸರಕಾರ ಸಾರುತ್ತಿದ್ದರೂ ಅದರ ಧೋರಣೆಯು ಗುತ್ತೇದಾರಿ ಭಂಡವಾಳ ಶಾಹಿಗಳಿಗೂ ಜಮೀನ್ದಾರರಿಗೂ ಪ್ರೋತ್ಸಾಹ ನೀಡುವ ಧೋರಣೆಯನ್ನೇ ಅನುಸರಿಸುತ್ತಿದ್ದುದರಿಂದ ದೇಶದ ಪ್ರಗತಿಗೆ ಧಕ್ಕೆ ಬಂದಿದೆ. ಚೈನಾದಲ್ಲಿ ಭದ್ರವಾದ ಸಮಾಜವಾದಿ ಪದ್ಧತಿ ಇರುವುದರಿಂದ, ಲಾಭಖೋರರೂ, ಲಂಚಖೋರರೂ ಇಲ್ಲದಿದ್ದುದರಿಂದ ಅಲ್ಲಿ ಉತ್ಪಾದನೆಹೆಚ್ಚುತ್ತಿದೆ. ನಮ್ಮಲ್ಲೂ ಸಂಪತ್ತು ಸಾಕಷ್ಟಿದೆ. ಜನಸಂಖ್ಯೆಯೂ ಅಪಾರವಾಗಿದೆ. ಆದರೆ ಈ ಉತ್ಪಾದನಾ ಶಕ್ತಿಗಳನ್ನು ಉಪಯೋಗಿಸುವ ಸರಿಯಾದ ಸಮಾಜ ವ್ಯವಸ್ಥೆ ಅಗತ್ಯ. ಸರಕಾರದ ಧೋರಣೆಯಲ್ಲೂ, ಸಮಾಜದ ವ್ಯವಸ್ಥೆಯಲ್ಲೂ ಮೂಲಭೂತ ಬದಲಾವಣೆಯಾಗದೆ ನಮ್ಮ ದೇಶದಲ್ಲಿ ಪ್ರಗತಿ ಸಾಧ್ಯವಾಗಲಾರದೆಂಬುದು ಸ್ಪಷ್ಟವಾಗಿದೆ. ಸಾಮ್ರಾಜ್ಯಶಾಹಿರಾಷ್ಟ್ರಗಳ ನೆರವನ್ನಾಗಲಿ, ಗುತ್ತೇದಾರಿ ಭಂಡವಾಳ ಶಾಹಿಗಳನ್ನಾಗಲಿ ಅವಲಂಬನೆ ಮಾಡಿ ಯೋಜನೆಗೆ ಹಣ ತರಲು ಭಿಕ್ಷಾಟನೆ ಮಾಡಿದರೆ ಯೋಜನೆ ಸಫಲವಾಗಲಿಕ್ಕಿಲ್ಲ ಮತ್ತು ದೇಶವು ಅಭಿವೃದ್ಧಿಯಾಗಲಿಕ್ಕಿಲ್ಲ. ಋಣಘೋಷಣೆಗಳಿಂದ ಉತ್ಪಾದನೆ ಹೆಚ್ಚಾಗಲಾರದು. ಅದಕ್ಕೆ ಯೋಗ್ಯ ಪರಿಸ್ಥಿತಿ ನಿರ್ಮಾಣವಾಗಬೇಕು. ಅದಕ್ಕೆಲ್ಲಾ ಪ್ರಜಾಪ್ರಭುತ್ವವಾದಿಗಳೂ, ಸಮಾಜವಾದಿ ಶಕ್ತಿಗಳೂ ದುಡಿಯುವುದು ಅಗತ್ಯ.

ಅಖಿಲ ಭಾರತ ಟ್ರೇಡ್ ಯೂನಿರ್ಯ ಕಾಂಗ್ರೆಸಿನ ರಾಷ್ಟ್ರೀಯ ಅಧಿವೇಶನವು ಈ ತಿಂಗಳ ಕೊನೆಯಲ್ಲಿ ಎರ್ನಾಕುಲಂನಲ್ಲಿ ಜರುಗಲಿದೆ. ಈ ಸಂದರ್ಭದಲ್ಲಿ ಎ. ಐ. ಟಿ. ಯು. ಸಿ.ಯ ಪ್ರಧಾನ ಕಾರ್ಯದರ್ಶಿ ಮತ್ತು ಲೋಕಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ನಾಯಕರಾಗಿರುವ ಎಸ್. ಎ. ಡಾಂಗೆಯವರು ದೆಹಲಿಯಲ್ಲಿ ನಡೆದ ಕಾರ್ಯಕಾರೀ ಸಮಿತಿ ಸಭೆಯಲ್ಲಿ ಮಾಡಿದ ಸಮಾರೋಪ ಭಾಷಣದ ಮುಖ್ಯಾಂಶಗಳನ್ನು ಈ ಲೇಖನದಲ್ಲಿ ನಮ್ಮ ಓದುಗರ ಮುಂದಿಡಬಯಸುತ್ತೇವೆ.

ಕಾರ್ಮಿಕ ಸಂಘಟನೆಗ

ದ್ವಿತೀಯ ಪಂಚವಾರ್ಷಿಕ ಯೋಜನೆ

ದ್ವಿತೀಯ ಪಂಚವಾರ್ಷಿಕ ಯೋಜನೆಯ ಮೂಲಕ ನಮ್ಮ ದೇಶದ ಔದ್ಯೋಗಿಕ ಪ್ರಗತಿಯನ್ನು ಸಾಧಿಸುವ ಪ್ರಶ್ನೆಯನ್ನು ಮೊದಲು ತೆಗೆದುಕೊಳ್ಳೋಣ ಯೋಜನೆಯು ಒಳ್ಳೆಯದಿದೆ; ಅದರ ತಿರುಳನ್ನಾದರೂ ಕಾರ್ಯಗತಗೊಳಿಸಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಯೋಜನೆಯನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಕಾರ್ಯಕಾರಿಗೊಳಿಸಬೇಕೆಂದು ನಾವು ಕೇಳುತ್ತೇವೆ. ಆದರೆ ಅದೊಂದು ಮೂಲಭೂತ ಭಿನ್ನಾಭಿಪ್ರಾಯವೆನ್ನಲಾಗುವುದಿಲ್ಲ. ಯೋಜನೆಯನ್ನು ನೆರವೇರಿಸುವುದರಲ್ಲಿ ನಾವು ಭಾಗವಹಿಸುತ್ತೇವೆ.

ಮೊದಲನೆಯ ಪಂಚವಾರ್ಷಿಕ ಯೋಜನೆ ಪೂರ್ತಿಯಾಗಿದೆ; ಎರಡನೆಯದು ಆರಂಭವಾಗಿದೆ. ಇವೆಲ್ಲದರ ಒಟ್ಟು ಫಲವೇನು?

ಉತ್ಪಾದನೆ ಹೆಚ್ಚಾಗಿದೆ. ಅದರಿಂದ ಕೇವಲ ಬಂಡವಾಳಶಾಹಿ ಗುತ್ತೇದಾರ ತನವು ಬಲ ಹೊಂದಿದೆ ಎಂದು ಕಾರ್ಮಿಕರಿಗೆ ನಾವು ಹೇಳಬೇಕಾಗಿದೆ. ಪ್ರಭುತ್ವ ಕೇತ್ರದಲ್ಲಾಗಲಿ, ಖಾಸಗಿ ಕ್ಷೇತ್ರದಲ್ಲಾಗಲಿ—ಹೊಸ ಕೈಗಾರಿಕೆಗಳು ಹುಟ್ಟಿರುವುದರಿಂದ ಬಂಡವಾಳ ಶಾಹಿ ಗುತ್ತೇದಾರಿಕೆಯು ಬಲಗೊಂಡಿದೆ. ಪ್ರಭುತ್ವ ಕ್ಷೇತ್ರವೆಂದರೆ ಸಮಾಜಸತ್ತೆ ಎಂಬ ಭ್ರಮೆ ಯಾರಿಗೂ ಇರಲಾರದೆಂದು ನಾನು ನಂಬುತ್ತೇನೆ. ಇಂದು ಇಂಡಿಯದಲ್ಲಿ ಪ್ರಭುತ್ವ ಕ್ಷೇತ್ರವೆಂದರೆ ಪ್ರಭುತ್ವ —ಬಂಡವಾಳಶಾಹಿ.

ಬಂಡವಾಳಶಾಹಿ ಗುತ್ತೇದಾರಿಕೆಯು ಬಲ ಹೊಂದಿರುವುದರಿಂದ ಶೋಷಣೆಯೂ ತೀವ್ರವಾಗುತ್ತದೆ. ಸರಕುಗಳ ಧಾರಣೆಗಳು ಏರುತ್ತವೆ, ಜನರ ಜೀವನದ ಸ್ಥಿತಿಯು ಕೆಡುತ್ತದೆ. ಆಹಾರದ ಮಾರುಕಟ್ಟೆ ಕೂಡ ಇಂದು ಗುತ್ತೇದಾರಿ ಬಂಡವಾಳಶಾಹಿಯ ಬಿಗಿ ಹಿಡಿತದಲ್ಲಿದೆ.

ಆಹಾರದ ಮಾರುಕಟ್ಟೆಯು ಹೆಚ್ಚು ಹೆಚ್ಚಾಗಿ ದೊಡ್ಡ ಬಂಡವಾಳಗಾರ ಸಟ್ಟಾ ವ್ಯಾಪಾರಿಗಳ ಕೈಯೊಳಗೆ ಸೇರುತ್ತಿದೆ. ಐದಾರು ವರ್ಷಗಳ ಹಿಂದೆ ಈ ಪರಿಸ್ಥಿತಿ ಇದ್ದಿಲ್ಲ. ಇದು ನಾವು ಗಮನಿಸತಕ್ಕ ಹೊಸ ಸಂಗತಿಯಾಗಿದೆ.

ಆಹಾರದ ಮತ್ತು ನಿತ್ಯ ಉಪಯೋಗದ ವಸ್ತುಗಳ ಕ್ರಯಗಳು ಏರುತ್ತಿವೆ; ಬಂಡವಾಳಗಾರರ ಲಾಭ ಹೆಚ್ಚಾಗುತ್ತಿದೆ. ಉತ್ಪಾದನೆ ಹೆಚ್ಚಾಗಿದೆಯಾದರೂ — ಬೆಲೆಗಳೂ ಲಾಭವೂ ಹೆಚ್ಚಾಗಿರುವುದರಿಂದ ಕೆಲಸಗಾರರ ಪಾಲು ಕಡಿಮೆಯಾಗಿದೆ. ಅದುದರಿಂದ ನಾವು ಕೂಲಿ ಹೆಚ್ಚಾಗಬೇಕೆಂದು ಕೇಳುತ್ತೇವೆ.

ಯೋಜನೆಗೆ ನಮ್ಮ ಬೆಂಬಲವಿದೆ. ಅದರಲ್ಲಿ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ನಮ್ಮ ಬೆಂಬಲವಿದೆ. ಆದರೆ ಗುತ್ತೇದಾರಿ ಬಂಡವಾಳ ಶಾಹಿಯು ತನ್ನ ಬಲವನ್ನು ಹೆಚ್ಚಿಸಿಕೊಳ್ಳುವುದರಿಂದ ಯೋಜನೆಗೆ ತಡೆಯಾಗುತ್ತಿದೆ. ಯೋಜನೆಯು ವಿಪತ್ತಿಗೆ ಸಿಲುಕಿದೆ. ಅದನ್ನು ನಾವಿಂದು ಕಣ್ಣಾರೆ ಕಾಣುತ್ತಿದ್ದೇವೆ. ಅದನ್ನು ಕಡೆಗಾಣಿಸಬಾರದು.

ಲಂಚಗುಳಿತನ ಬಲ ಹೊಂದಿದೆ

ಆಡಳಿತ ಯಂತ್ರದಲ್ಲಿ ಲಂಚಗುಳಿತನವು ಜಾಸ್ತಿಯಾಗಿದೆ ಎನ್ನುವುದನ್ನು ನಾವು ಗಮನಿಸಬೇಕು. ದೊಡ್ಡ ಬಂಡವಾಳಗಾರರು ಆಳುವ ಪಕ್ಷವಾದ ಕಾಂಗ್ರೆಸಿನೊಳಗೆ ನುಸುಳುತ್ತಾರೆ. ಅವರು ಆಡಳಿತ ಯಂತ್ರದಲ್ಲಿ ತಮ್ಮ ಕೈವಾಡವನ್ನು ನಡೆಸುತ್ತಾರೆ. ಪ್ರಭುತ್ವವನ್ನೇ ನಿಷ್ಕ್ರಿಯಗೊಳಿಸಲು ಅವರಿಗೆಸಾಧ್ಯವಿದೆ. ಅವರನ್ನು ಆಡಳಿತ ಯಂತ್ರದಿಂದ ದೂರ ಇರಿಸಿದ್ದರೆ, ಅವರ ಬಲವನ್ನು ಮೊಟಕು ಮಾಡಿದ್ದರೆ, ಕೆಲಸಗಾರರ ಮತ್ತು ಜನಸಾಮಾನ್ಯರ ಜೀವನದ ಸ್ಥಿತಿಯನ್ನು ಉತ್ತಮಗೊಳಿಸ ಬಹುದಾಗಿತ್ತು. ಹಾಗೆ ಆಗಲಿಲ್ಲ.

ಇದರಿಂದ ಜನರು ಆತೃಪ್ತಿ ಹೊಂದಿದ್ದಾರೆ. ಜನರು ಹೋರಾಟಗಳನ್ನು ನಡೆಸುತ್ತಾರೆ. ಹೋರಾಟಗಳನ್ನು ಮುರಿಯಲು ಸರಕಾರವು ದಬ್ಬಾಳಿಕೆ ನಡೆಸುತ್ತದೆ, ಪ್ರಜಾಪ್ರಭುತ್ವವನ್ನು ಬಲಿಕೊಡುತ್ತದೆ, ಆದರೆ ಅದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ ಕಾಂಗ್ರೆಸಿನ ಒಳಗಡೆಯೇ ತಿಕ್ಕಾಟಗಳು ಬೆಳೆಯುತ್ತವೆ.

ಸರಕಾರವು ಒಂದು ಕಡೆಯಿಂದ ಜನರನ್ನು ಮರ್ದಿಸುತ್ತದೆ, ಇನೊಂದು ಕಡೆಯಿಂದ ಜನರ ಹೋರಾಟದ ಮುಂದೆ ಹಿಮ್ಮೆಟ್ಟುತ್ತದೆ. ಗುಂಡು ಹಾರಿಸುತ್ತದೆ; ಗುಂಡಿಗೆ ಆಹುತಿಯಾದವರಿಗೆ ಸಂತಾಪವನ್ನು ಸೂಚಿಸುತ್ತದೆ..

ಕೇರಳವು ಕಾಂಗ್ರೆಸ್ ಸರಕಾರಗಳ ಇದಿರಲ್ಲಿದೆ. ಅದರ ಪರಿಣಾಮ ಈಗಾಗಲೆ ಕಾಣುತ್ತಿದೆ.

ಈ ಪರಿಸ್ಥಿಯು ಹೇಗೆ ಮುಂದುವರಿಯುವುದೆಂದು ಈಗಲೆ ಹೇಳಲು ಸಾಧ್ಯವಿಲ್ಲ. ಆದರೆ ಪರಿಸ್ಥಿತಿ ಮುಂದುವರಿಯುವುದು ಸ್ವಲ್ಪ ಮಟ್ಟಿಗೆ ನಮ್ಮನ್ನೂ ಹೊಂದಿಕೊಂಡಿದೆ ಎನ್ನುವುದನ್ನು ನಾವು ಮರೆಯಬಾರದು.

ಕಾರ್ಮಿಕ ಸಂಘಟನೆಗಳ ಪಾತ್ರ

ನಾವು ಯೋಜನೆಯನ್ನು ಟೀಕಿಸುತ್ತೇವೆ. ಕೆಲವೊಮ್ಮೆ ಬರೀ ಟೀಕೆಯನ್ನೇ ಮಾಡುತ್ತಿರುತ್ತೇವೆ. ಅದರಲ್ಲಿನ ಒಳ್ಳೆಯ ಅಂಶವನ್ನು ಗಮನಿಸಿ, ಅದನ್ನು ಪೂರ್ಣಗೊಳಿಸುವ ಕಾರ್ಯವನ್ನು ಕೈಗೊಳ್ಳುವುದರಲ್ಲಿ ನಾವು ಹಿಂದೆ ಬೀಳುತ್ತೇವೆ. ಸರಕಾರೀ ಉದ್ದಿಮೆಗಳಲ್ಲಿ ಕಳ್ಳತನ, ಲಂಚ ರುಷುವತ್ತುಗಳನ್ನು ನಿವಾರಿಸುವುದರಲ್ಲಿ ಟ್ರೇಡ್ ಯೂನಿಯನ್‌ಗಳು ಸಹಾಯ ನೀಡಬೇಕು. ನಾವು ಈ ಜವಾಬುದಾರಿಯನ್ನು ಹೊತ್ತು, ದೇಶದ ಅಸ್ತಿಯನ್ನು ರಕ್ಷಿಸುವಂತೆ ಜನರಲ್ಲಿ ತಿಳುವಳಿಕೆ ಉಂಟುಮಾಡಬೇಕು.

ಯೋಜನೆಯೊಂದಿಗೆ ನಮ್ಮ ಸಂಪರ್ಕವು ಇನ್ನೂ ಒಳ್ಳೆಯ ಅಂಶಗಳನ್ನು ಕಾರ್ಯಗತಗೊಳಿಸುವುದು ಮತ್ತು ಇತರ ಅಂಶಗಳ ಬಗ್ಗೆ ಟೀಕಾತ್ಮಕವಾದ ದೃಷ್ಟಿಯನ್ನು ಹೊಂದಿರುವುದೂ ಆಗಿಲ್ಲ. ಕಾರ್ಮಿಕ ವರ್ಗಕ್ಕೆ ಸೇರಿದ ನಾವು ಇದನ್ನು ಮಾಡದೇ ಇದ್ದಲ್ಲಿ, ಯೋಜನೆಯು ಬಲಪಂಥವಾದಿಗಳಿಂದ ಮುರಿಯಲ್ಪಡುತ್ತದೆ.

ನಾವು ಎಡದೃಷ್ಟಿ ಕೋಣದಿಂದ ಯೋಜನೆಯನ್ನು ಟೀಕಿಸಿದರೆ, ಅವರು ಬಲದೃಷ್ಟಿ ಕೋಣದಿಂದ ಟೀಕಿಸುತ್ತಿರುತ್ತಾರೆ. ಇವೆರಡೂ ಟೀಕೆಗಳೇ ಆಗಿದ್ದು ಯೋಜನೆಯೇ ಮುರಿಯುವಂತೆ ತೋರುತ್ತದೆ.

ನಾವು ಯೋಜನೆಯ ತಿರುಳನ್ನು ಎತ್ತಿಹಿಡಿಯುತ್ತೇವೆ. ಮಸಾನಿಯಂಥವರು ಯೋಜನೆಯನ್ನೇ ರದ್ದುಮಾಡಬೇಕೆಂದು ಹೇಳುತ್ತಾರೆ. ನಾವು ಯೋಜನೆಯು ಬಿಕ್ಕಟ್ಟನಲ್ಲಿದೆ ಎಂದು ಹೇಳುತ್ತೇವೆ. ಅವರೂ ಅದನ್ನೇ ಹೇಳುತ್ತಾರೆ. ಪರಿಸ್ಥಿತಿಯು ಹೀಗೇ ಮುಂದುವರಿದಲ್ಲಿ ಎರಡು ವರ್ಷಗಳ ಕೊನೆಯಲ್ಲಿ ಕೈಗಾರಿಕೆಯಲ್ಲಿ ಅನಾಯಕತೆ ಏರ್ಪಟ್ಟು, ಸರಕಾರವು ಎಲ್ಲವನ್ನೂ ಖಾಸಗೀ ಉದ್ದಿಮೆದಾರರಿಗೆ ವಹಿಸುಬಹುದು.

ಸರಕಾರವು ಈ ಪರಿಸ್ಥಿತಿಗೆ ಕಾರಣವೆಂಬುದು ನಿಜ. ಆದರೆ ಬಲಪಂಥ ದೃಷ್ಟಿಕೋಣದಿಂದ ಯೋಜನೆಯನ್ನು ಟೀಕಿಸುವವರು ಜನತೆಯ ಕಡು ವಿರೋಧಿಗಳಾಗಿದ್ದಾರೆ. ನಾವು ಸರಕಾರವನ್ನು ಟೀಕಿಸುವಾಗ ಜಾಗರೂಕತೆಯಿಂದ ಮಾಡಬೇಕು. ಸರಕಾರದಲ್ಲಿ ಮತ್ತು ಆಡಳಿತ ಪಕ್ಷದಲ್ಲಿ ಯೋಜನೆಯನ್ನು ಮುರಿಯುವವರು ಇದ್ದಾರೆ. ಟ್ರೇಡ್ ಯೂನಿಯನ್ ಚಳವಳಿಯು ಇದನ್ನು ಗಮನಿಸಬೇಕು. ಯೋಜನೆಯ ತಿರುಳನ್ನು ಕಾರ್ಯಗತಗೊಳಿಸುವಂತೆ ನಾವು ಒತ್ತಾಯ ಪಡಿಸಬೇಕು ಸರಕಾರದಲ್ಲಿ ಯೋಜನೆಗೆ ಬೆಂಬಲ ಕೊಡುವವರಿಗೆ ನಾವು ಬೆಂಬಲ ಕೊಡಬೇಕು. ಇಂದು ಟ್ರೇಡ್ ಯೂನಿಯನ್ ಚಳವಳಿಯಲ್ಲಿ ನಾವು ಎದುರಿಸುತ್ತಿರುವ ಸಮಸ್ಯೆ ಇದೇ ಆಗಿದೆ.

ಗುತ್ತೇದಾರೀ ಶಕ್ತಿಗಳು ಕಾರ್ಮಿಕರ ಮೇಲೆ ಧಾಳಿನಡೆಸಿ, ;ಅವರನ್ನು ಅರಕ್ಷಕರನ್ನಾಗಿ ಮಾಡಲು ಯತ್ನಿಸುತ್ತದೆ. ತುಟ್ಟಿ ಭತ್ಯ, ಕೂಲಿ ಹೆಚ್ಚಳ, ಬೋನಸ್‌ಗಳಿಗಾಗಿ ಒತ್ತಾಯ ಮತ್ತು ಮುಷ್ಕರದ ಪರಿಸ್ಥಿತಿಯು ಹೆಚ್ಚಾಗಿದೆ. ನಮಗೆ ತಿಳಿಯದಂತೆಯೇ ಕೆಲವು ಮುಷ್ಕರಗಳು ಬಂದಲ್ಲಿ ಆಶ್ಚರ್ಯ ಪಡಬೇಕಿಲ್ಲ. ಯೋಜನೆಯ ಹೆಸರಿನಲ್ಲಿ ಮುಷ್ಕರ ಕೂಡದು ಎನ್ನುವ ಪ್ರಶ್ನೆಯೇ ಇಲ್ಲ. ಆದರೆ ಮುಷ್ಕರ ನಡೆಸುವಾಗ ಅದರ ಒತ್ತಾಯವನ್ನು ಬಲಪಂಥವಾದಿಗಳ ಉಪಯೋಗಿಸಿಕೊಳ್ಳದಂತೆ ನೋಡಬೇಕು. ಅಂಚೆ ಮತ್ತು ತಂತಿ ನೌಕರರ ಹೋರಾಟ ವಿಷಯದಲ್ಲಿ ಕೆಲವು ಕಾಂಗ್ರೆಸ್ಸಿಗರು— ಯೋಜನೆಯನ್ನು ಮುರಿಯುವವರು — ಮುಷ್ಕರ ನಡೆಸಲೇ ಬೇಕೆಂದು ಒತ್ತಾಯತರುತ್ತಿದ್ದರು. ಅವರ ಇಚ್ಛೆ ಇದ್ದುದೇ ಬೇರೆ.

ನಾವು ಈ ಎರಡು ಬಗೆಯ ಪ್ರವೃತ್ತಿಗಳಿಗೂ ಮಣಿಯಬಾರದು. ನ್ಯಾಯವಾಗಿರತಕ್ಕ ಮುಷ್ಕರಗಳನ್ನು ತಪ್ಪಿಸಬಾರದು. ಕಾರ್ಮಿಕ ವರ್ಗದ ಹಿತರಕ್ಷಣೆ ಮಾಡುವ ಕಾರ್ಯವನ್ನು ಉಪೇಕ್ಷಿಸಬಾರದು. ಪರಿಸ್ಥಿತಿಯು ತೊಡಕಾದುದಾಗಿದೆ. ಒಂದಲ್ಲ ಒಂದು ಬಗೆ ಧೋರಣೆ ಎಂದು ಕೊಂಡು ನಿರ್ಣಯಗಳನ್ನು ಮಾಡುವಷ್ಟು ಸುಲಭ ಕಾರ್ಯವಲ್ಲ. ಹಾಗಿದ್ದರೆ ಮೂಲ ಘೋಷಣೆ ಏನಿರಬೇಕು?

ಘೋಷಣೆಗಳು

1. ಬೆಲೆ ತಗ್ಗಿಸಿ, 2. ಕೂಲಿ ಹೆಚ್ಚಿಸಿರಿ, ಆಹಾರಕ್ಕೆ ಸಬ್ಸಿಡಿ (ಪರಿಹಾರ) ನೀಡಿ. ಈ ಎರಡು ಮುಖ್ಯ ಘೋಷಣೆಗಳು ದೇಶಾದ್ಯಂತ ಮೊಳಗಬೇಕು.

3. ಸಂಬಳಸೂರಿಗೆ ಕಮಿಷನ್-ಕೂಡಲೇ ತಾತ್ಕಾಲಿಕ ಪರಿಹಾರ ವರದಿ ನೀಡಬೇಕು.

ಇದನ್ನು ಮಾಡದೇ ಇದ್ದಲ್ಲಿ ಪ್ರಭುತ್ವ ಕ್ಷೇತ್ರದಲ್ಲಿ ಯೂನಿಯನ್ ಚಳುವಳಿಯು ನಶಿಸಿ ಹೋಗುತ್ತದೆ, ಸರಕಾರದ ಅಡಿಯಲ್ಲಿರುವ ಪ್ರಭುತ್ವ ಯಂತ್ರವನ್ನು ನಡೆಸುತ್ತಿರುವ ಎರಡು ಮಿಲಿಯ ನೌಕರರಿಗೆ ತಾತ್ಕಲಿಕ ಪರಿಹಾರವನ್ನು ಪಡೆಯಲು ಚಳವಳಿಯನ್ನುಂಟು ಮಾಡದಿದ್ದಲ್ಲಿ ನಾವು ಬಹಳ ಹಿಂದುಳಿಯುತ್ತೇವೆ.

4. ಇಂಡಿಯನ್ ಲೇಬರ್ ಕಾನ್‌ಫರೆನ್ಸ್ ಸೂಚಿಸಿರುವಂತೆ ಕೂಲಿ ಹೆಚ್ಚಿಸಲು ಮತ್ತು ಕೂಲಿಯ ಮಟ್ಟವನ್ನು ಪುನರ್ ಪರಿಶೀಲಿಸಲು ವೇತನ ಸಮಿತಿಗಳು ಕೂಡಲೇ ನೇಮಕವಾಗಲಿ ಎಂಬುದೇ ನಮ್ಮ ಘೋಷಣೆ.

5. ಕಾಯಿದೆಗಳು ಮತ್ತು ಅವಾರ್ಡುಗಳನ್ನು ಶೀಘ್ರವಾಗಿ ಜಾರಿಗೊಳಿಸಲಿ. ನಾವು ಒಂದು ಚಳವಳಿಯನ್ನುಂಟು ಮಾಡಿದಿದ್ದಲ್ಲಿ ಸರಕಾರವು ಒಂದು ಹೆಜ್ಜೆಯೂ ಮುಂದಿರಿಸುವುದಿಲ್ಲ ಈಗ ಅಮಲಿನಲ್ಲಿರತಕ್ಕ ಕಾಯಿದೆಗಳೂ ಸಹ ಸರಿಯಾಗಿ ಆಚರಣೆಯಲ್ಲಿ ತರುತ್ತಿಲ್ಲ.

6. ಗೋಲಿಬಾರು ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕು ಮಾಡುವುದು ನಿಲ್ಲಬೇಕು. ಇದು ಅತ್ಯಂತ ಜರೂರಾದ ಪ್ರಶ್ನೆಯಾಗಿದೆ.

7. ಲಂಚ ಖುಷುವತ್ತು ಅಳಿಯಲಿ.

8. ಟ್ರೇಡ್ ಯೂನಿಯನ್ನುಗಳಿಗೆ ಮನ್ನಣೆ ದೊರಕಲಿ.

9. ಪ್ರಾತಿನಿಧ್ಯವುಳ್ಳ ಸಂಘವನ್ನು ಇತ್ಯರ್ಥ ಮಾಡಲು ಗುಪ್ತ ಮತದಾನ ತೆಗೆದುಕೊಳ್ಳುವುದು. ಮತವಾನವು ಐಕ್ಯತೆಯ ಘೋಷಣೆಯಾಗಿದೆ.

ಈ ಮೇಲ್ಕಂಡ ಒಂಬತ್ತು ಘೋಷಣೆಗಳ ಮೇಲೆ ನಾವು ಚಳವಳಿಯನ್ನು ಕಟ್ಟಬೇಕು.

ಇಂದು ಹೊಸ ಸಮಸ್ಯೆಯೊಂದು ನಮ್ಮ ಮುಂದೆ ಬಂದಿದೆ. ಆಹಾರದ ಬಿಕ್ಕಟ್ಟಿನಿಂದಾಗಿ, ವ್ಯವಸಾಯ ಕೂಲಿಗಾರರ ಸಮಸ್ಯೆಯು ಎದುರಿಸುತ್ತಿದೆ. ಕಾರ್ಮಿಕವರ್ಗದ ಚಳವಳಿಯು ನೇರವಾಗಿ ವ್ಯವಸಾಯ ಕೂಲಿಗಾರರ ಚಳವಳಿಗೆ ಬೆಂಬಲವೀಯುತ್ತದೆ. ಆಹಾರದ ಬೆಲೆಯ ಪ್ರಶ್ನೆಯು ಮೇಲೆ ಇಡೀ ಜನತೆಯನ್ನು ಒಂದು ಗೂಡಿಸಬಹುದು.

ಇಂಟಕ್ ಪಾತ್ರ

ಹಿಂದೆ ಮುಷ್ಕರಗಳನ್ನು ವಿರೋಧಿಸುತ್ತಿದ್ದ ಇಂಟಕ್, ಎರಡು ವರ್ಷಗಳಿಂದ ನೋಡುತ್ತಿರುವಂತೆ ಎಡ ಪಂಥಕ್ಕೆ ತಿರುಗಿದೆ. ಕೆಲವು ಬಾರಿ ಅವರು ಸರಕಾರವನ್ನು ಟೀಕಿಸುತ್ತಾರೆ. ಇದು ಕಣ್ಣೊರಸುವ ಮಾತಲ್ಲ, ಇಂಟಕ್‌ಗೂ ಸಹ ತನ್ನದೇ ಆದ ಜನ ಸಮೂಹವಿದೆ ಮತ್ತು ಅದನ್ನು ಉಳಿಸಿಕೊಳ್ಳಬೇಕಿದೆ. ಇಂಟಕ್ ಜನತೆಯೊಂದಿಗೆ ಅವರ ಬೇಡಿಕೆಗಳಿಗಾಗಿ ಹೋರಾಡುವ ರೀತಿಯ ಚಿಹ್ನೆಗಳನ್ನು ತೋರುತ್ತಿದೆ. ಶೇ25 ರಷ್ಟು ಕೂಲಿ ಹೆಚ್ಚಳವಾಗಬೇಕೆಂಬ ನಮ್ಮ ಘೋಷಣೆಯನ್ನು ಅವರು ಎತ್ತಿ ಕೊಂಡಿದ್ದಾರೆ

ಇಂಟಕ್ ಕಾಂಗ್ರೆಸ್‌ನಲ್ಲಿ ಒಂದು ಶಕ್ತಿಯಾಗಿದೆ, ಕಾಂಗ್ರೆಸ್ಸಿನಲ್ಲಿ ಒಂದು ತಂಡ ಅದು ಕೈ ಬಿಟ್ಟು ಹೋದೀತು ಎಂದು ಭಯಗೊಂಡಿದ್ದಾರೆ. ಕಾಂಗ್ರೆಸ್ ಮತ್ತು ಇಂಟಕ್ ನಡುವೆ ಸರಿಯಾದ ಸೌಹಾರ್ದವಿರಬೇಕೆಂದು ಅವರು ಹೇಳುತ್ತಾರೆ. ಕಾಂಗ್ರೆಸ್ ಸಂಸ್ಥೆಯು ಮಧ್ಯೆ ಪ್ರವೇಶಿಸದಿದ್ದಲ್ಲಿ, ಇಂಟಕ್, ಹಿಂದ್ ಮಜದೂರ್ ಸಭಾ, ಎ. ಐ. ಟಿ. ಯು ಸಿ. ಮತ್ತು ಇತರ ಸಂಸ್ಥೆಗಳ ನಡುವೆ ಸಯುಕ್ತ ಕಾರ್ಯಾಚರಣೆಗೆ ಎಡೆ ಕೊಡಬಹುದು ಎಂಬ ಭೀತಿ ಇದೆ. ಅದರಿಂದಾಗಿ ಇಂಟಕ್ ಅನ್ನು ಕಾಂಗ್ರೆಸ್ಸಿನ ಅಧೀನದಲ್ಲಿರಿಸಿಕೊಳ್ಳಲು ನೋಡಲಾಗುತ್ತಿದೆ. ಇದು ಇಂದು ನಡೆಯುತ್ತಿದೆ. ಇಂಟಕ್‌ನ ಇಂದಿನ ಸಂಘಟನೆಯಲ್ಲಿ ಕಾರ್ಮಿಕರು ನಾಯಕತ್ವದಲ್ಲಿ ಬರುವಂತಿಲ್ಲ. ಆರಂಭದಲ್ಲಿ ಕಾಂಗ್ರೆಸ್ ಇಂಟಕ್‌ನಮೇಲೆ ಹೆಚ್ಚು ಸಂಘಟನಾ ಹಿಡಿತವನ್ನು ಹೊಂದಿರುತ್ತದೆ. ಇದು ಹೇಗೆ ಆಗುತ್ತದೆ ಎಂಬುದು ಕಾರ್ಮಿಕರ ಪ್ರತಿಕ್ರಿಯೆಯ ಮೇಲೆ ಅವಲಂಬಿತವಾಗಿದೆ. ಈ ಬದಲಾವಣೆಗಳಿಂದ ಧೇಬರ್‌ರವರು ಗಾಂಗ್ರೆಸ್ ಟ್ರೇಡ್ ಯೂನಿಯನ್‌ಗಳ ಮೇಲ್ವಿಚಾರಕರಾಗುತ್ತಾರೆ.

ಅ. ಭಾ. ಟ್ರೆ

ಈ ಬೆಳವಣಿಗೆಗಳಲ್ಲಿ
ದ್ದೇವೆ. ಹತ್ತು ವರ್ಷಗ
ಯು. ಸಿ. ಯು ಒಂದು
ಇಂಟಕ್‌ಗಿಂತ ಹೆಚ್ಚಾಗಿ
ಮತ್ತು ಸಂಘಟನಾತ್ಮಕ
ಭಾವವನ್ನು ಹೊಂದಿದೆ
ದಿದ್ದೇವೆ. ಇಂದು ಪ್ರ
ಯಲ್ಲಿಯೂ ಎ. ಐ. ಟಿ.
ಬೆಂಬಲ ಕೊಡುವ ಜನ
ತ್ವದ ಸಂಖ್ಯೆಗಿಂತ ಪ್ರಭ
1951 ರಲ್ಲಿ ನಾವು ಪ
49ರ ಸ್ಥಿತಿಗಿಂತ ಸುಧಾ
ನಾವು ಎರಡನೆಯ
ಮೊದಲನೆಯದು ಇಂಟ
ಮಜದೂರ್ ಸಭಾವನ್ನು
ಇಳಿಸಿದೆವು. ಇಂದು
ಸಭಾ ಬೆಳೆದಿಲ್ಲ. ಎರಡ
ಲಾಗಿದೆ. ನಾವು ಇಂದು
ನ್ ಚಳುವಳಿಯಲ್ಲಿ ದೊ
ಸಂಘಟನಾತ್ಮಕವಾಗಿ
ಇಂಟಕ್‌ಗೆ ಸಮವಾಗಿ
ಕಾಂಗ್ರೆಸು ಇಂಟಕನ್ನ
ಡುತ್ತಿದೆ. ಎ. ಐ. ಟಿ. ಯ

ಬಲಯ

ಟ್ರೇಡ್ ಯೂನಿಯ
ಮ್ಮ ಹಿತೈಷಿಗಳೆಲ್ಲರನ್ನು
ಸಂಘಟನಾತ್ಮಕವಾಗಿ
ರುವುದು ನಮ್ಮ ಮು
ಹಿಂದೆ ಈರೀತಿ ಇರಲಿ
ಕೂಡಲೇ ನಿವಾರಿಸಬೇ
ಳಾಗಿರುವ ಎಲ್ಲ ಸಂಘ
ಸಿ.ಯೊಳಕ್ಕೆ ತರಬೇಕು.
ಮೇಷವೆಣಿಸಬಾರದು.
ಅದು ಚಳವಳಿಗೆ ಅಡ್ಡಿ

ಕಾರ್ಮಿಕ ವರ್ಗವು
ಬರಬಹುದಾದ ತೊಂದ
ಸಿದ್ಧವಿದೆ. ರೈಲ್ವೆ ಕೆಲಸ
ನಡುವೆ ಕೆಲಸ ಮಾಡಬೆ
ತ್ತಾರೆ. ಕಾರ್ಮಿಕರ ಮನ
ದುಕೊಂಡು ನಮ್ಮ ಯ
ಕೊಳ್ಳಬೇಕಾಗಿದೆ. ಇಂದ
ಸಂಘಗಳು ಇವೆ. ಪರಿಸ್ಥಿ
ವುದರಿಂದ ನಾವು ನಮ್ಮ
ಲಿಸಬೇಕು. ಆದರೆ ಫೆಡ
ಕೊಂಡಿರುವ ಸಂಘಗಳ
ಬೇಕು.

ಇಂಡಿಯನ್ ವ್ಯೆನ
ನ್ ಎ. ಐ. ಟಿ. ಯು. ಸಿ.
ರೇಷನ್ ಸಂಘಟನಾತ್ಮ
ಬೇಕು. "ಸ್ವತಂತ್ರ"
ಕೊಳ್ಳುವ ಹುಚ್ಚುತನ
ಐ. ಟಿ. ಯು. ಸಿ. ಯನ್ನು
ಹೀನಗೊಳಿಸುವುದು ಬೇ
ಳನ್ನು ಎ. ಐ. ಟಿ. ಯು. ಸಿ.
ಮ್ಮ ಘೋಷಣೆಯಾಗ
ಮತ್ತು ಅರ್ಜಿಯನ್ನು
ಬೇಕು.

ಐಕ್ಯತೆಯ ಹಾದಿಯ
ಟ್ರೇಡ್ ಯೂನಿಯನ್
ದು ಮಹತ್ವವಾದ ಅವ
ವಣಿಗೆಯೂ ಇದಕ್ಕೆ ಕಾ

...ಕರ್ತವ್ಯ

★

...ಯೂನಿಯನ್ ಕಾಂಗ್ರೆಸ್ ಸ್ಥಿತಿ

ಭಾಗಿಯಾಗಿ
...ದಲ್ಲಿ ಎ.ಐ.ಟಿ
...ಗಿ ಬೆಳೆದಿದೆ—
...ರಾಜಕೀಯ
...ದೇಶದಲ್ಲಿ ಪ್ರ
...ಮುಂದುವರಿ
...ಸಿ ಸಂಘಟನೆ
...ಧೋರಣೆಗೆ
...ನಮ್ಮ ಸದಸ್ಯ
...ಕ್ಚಾಗಿದೆ.
...ದಾಗ 1948-
...- 1954ರಲ್ಲಿ
...ನ್ನು—ಅಂದರೆ
...ಡೆದು ಹಿಂದ್
...ರನೆ ಸ್ಥಾನಕ್ಕೆ
...ಮಜದೂರ್
...ಸ್ಥಾನವೂ ಬದ
...ಕ್ ಯೂನಿಯ
...ಯಾಗಿದ್ದೇವೆ.
...ಹೆಚ್ಚು ಕಡಿಮೆ
...ಳಿಸಲು ನೋ
...ಬಲಗೊಳ್ಳುತ್ತಿ

...ವಾದ ಸಂಘಟನೆ ಅಗತ್ಯ

...ಳುವಳಿಯಲ್ಲಿ ನ
...ಟಿ.ಯು.ಸಿ.ಗೆ
...ತಾರದೇ ಇ
...ನತೆಯಾಗಿದೆ.
...ನ್ಯಾನತೆಯನ್ನು
...ಮ್ಮ ಹಿತೈಷಿಗ
...ಐ.ಟಿ.ಯು.
...ರ ಬಗ್ಗೆ ಮಾನ
...ಮಾಡದಿದ್ದಲ್ಲಿ
...ದೆ.
...ನಮ್ಮೊಂದಿಗೆ
...ಎದುರಿಸಲು
...ನಾವು ಅವರ
...ಅಪೇಕ್ಷಿಸು
...ವವನ್ನು ತಿಳಿ
...ನ್ನು ರೂಢಿಸಿ
...ವು ಸ್ವತಂತ್ರ
...ಪಕ್ಷವಾಗಿರು
...ಯನ್ನು ಬದ
...ಗಳಲ್ಲಿ ಸೇರಿ
...ಚ್ಚರದಿಂದಿರ
...ರ್ ಫೆಡರೇಷ
...ಟ್ಟಿದ ಈ ಫೆಡ
...ಅದರಲ್ಲಿ ಸೇರ
...ಎಂದು ಹೇಳಿ
...ದಗಿರಿಸಿ, ಎ.
...ಕವಾಗಿ ಬಲ
...ನಷ್ಟು ಸಂಘಗ
...ರಿಸುವುದೇ ಸ
...ಪ್ರವೇಶ ಧನ
...ಕಳಿಸಿ ಕೊಡ
...ಯಲು
...ಯಲ್ಲಿ ಇಂ
... ನಮ್ಮ ಬೆಳ
...ಗಿದೆ. ಕಾರ್ಮಿ

ರುವುದನ್ನು ಕಂಡು ಅವರು ಭೀತರಾಗಿದ್ದಾರೆ. ಆದರೆ ಪರಿಸ್ಥಿತಿ ಹೀಗೇ ಇರದು. ನಾವು ಎಚ್ಚರ ವಹಿಸಿ ಕ್ರಮ ತೆಗೆದುಕೊಳ್ಳಬೇಕು.

ಇಂಟಕ್ ಕಾಂಗ್ರೆಸಿನೊಂದಿಗೆ ನೇರ ಸಂಬಂಧ ಹೊಂದಿರುವ ಹೊಸ ಪರಿಸ್ಥಿತಿ ಬಂದಿದೆ. ಬಂಡವಾಳಶಾಹಿಗೆ ಇಂಟಕ್ ತಮ್ಮ ಕೈಯಿಂದ ಜಾರೀತು ಎಂಬ ಭೀತಿ ಇದೆ. ಇಂಟಕ್ ಹೆಚ್ಚು ಹೆಚ್ಚಾಗಿ ಸಂಘಟನಾತ್ಮಕವಾಗಿ ಕಾಂಗ್ರೆಸಿನಲ್ಲಿ ಬರುವುದರಿಂದ ಐಕ್ಯತೆಯು ನಮ್ಮ ಕ್ರಮವು ಕಷ್ಟವಾಗುತ್ತದೆ. ಐಕ್ಯತೆಗಾಗಿ ನಮ್ಮ ಚಳವಳಿಯು ಕಾರ್ಮಿಕರ ನಡುವೆ ಪ್ರಚಾರ ನಡೆಸಿ ಎರಡೂ ಕಡೆ ಬೆಳೆಯುವಂತೆ ಮಾಡುವುದಾಗಿದೆ.

ಎ.ಐ.ಟಿ.ಯು.ಸಿ. ಶಕ್ತಿಯನ್ನು ಮತ್ತಷ್ಟು ಬಲಗೊಳಿಸಲು ಒದಗಿರುವ ಮತ್ತೊಂದು ಅಂಶವೆಂದರೆ ಪಾರ್ಲಿಮೆಂಟಿನಲ್ಲಿ ನಮ್ಮ ಸದಸ್ಯರುಗಳು ಮಾತ್ರವೇ ಕಾರ್ಮಿಕ ವರ್ಗವನ್ನು ಪ್ರತಿನಿಧಿಸುತ್ತಿರುವುದು. ಪಾರ್ಲಿಮೆಂಟ್ ಸದಸ್ಯತ್ವವನ್ನು ಬಳಸಿಕೊಂಡು ನಾವು ಕಾರ್ಮಿಕ ವರ್ಗದ ಚಳವಳಿಯನ್ನು ಮುಖ್ಯವಾಗಿ ಎ. ಐ. ಟಿ.ಯು.ಸಿಯನ್ನು ಬಲಗೊಳಿಸಬಹುದು.

ಕರ ನಡುವೆ ಐಕ್ಯತೆಯ ಮನೋಭಾವವಿದೆ. ಸ್ವತಂತ್ರವಾಗಿ ರಚಿತವಾಗಿರುವ ಫೆಡರೇಶನ್‌ಗಳ ಮನೋಭಾವವೂ ಸಹ ಬದಲಾಗುತ್ತಿದೆ. ಉದಾಹರಣೆಗೆ ಕೇಂದ್ರ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸುತ್ತಿವೆ. ರಕ್ಷಣಾ ಕೆಲಸಗಾರರ ಫೆಡರೇಶನ್ ಸಂಬಳ ಸಾರಿಗೆ ಕಮಿಷನ್‌ಗೆ ಮನವಿ ಸಲ್ಲಿಸಲು ಇಂಟಕ್, ಎಚ್. ಎಂ.ಎಸ್. ಮತ್ತು ಎ.ಐ.ಟಿ.ಯು.ಸಿ.ಗಳನ್ನು ಸಂಯುಕ್ತ ಮನವಿ ಸಲ್ಲಿಸಲು ಕೇಳಿಕೊಳ್ಳುವ ತೀರ್ಮಾನ ಮಾಡಿದೆ. ಕಾರ್ಮಿಕರ ನಡುವೆ ಐಕ್ಯತೆಗಾಗಿ ಇರುವ ಮನೋಭಾವವನ್ನು ಮನಗಂಡು ಅದಕ್ಕೆ ನಾವು ತಕ್ಕ ಸ್ಫೂರ್ತಿ ಇತ್ತು ಬಲಗೊಳಿಸಬೇಕು.

ಪ್ರಗತಿ ಹಾಗೂ ಹಿನ್ನಡೆ

ಪಶ್ಚಿಮ ಬಂಗಾಳ, ತಮಿಳುನಾಡು, ಮಧ್ಯಪ್ರದೇಶ, ಬಿಹಾರ್ ಮತ್ತು ಪಂಜಾಬ್ ಪ್ರದೇಶಗಳಲ್ಲಿ ಒಳ್ಳೆಯ ಪ್ರಗತಿ ಸಾಧನೆಯಾಗಿದೆ.

ಮುಂಬಯಿಯಲ್ಲಿ ಹೆಚ್ಚೇನೂ ಆಗಿಲ್ಲ, ಆದರೆ ಮುನ್ನಡೆಯಲು ಅವಕಾಶವಿದೆ. ಉತ್ತರ ಪ್ರದೇಶದಲ್ಲಿ ಪ್ರಸಿದ್ಧವಾದ ಕಾನ್ಪುರ ಮುಷ್ಕರ ನಡೆದರೂ ಸಹ ಪ್ರಗತಿ ಕುಗ್ಗಿದೆ. ದೆಹಲಿಯಲ್ಲಿ ಏನೂ ಪ್ರಗತಿಯಾಗಿಲ್ಲ. ಅನೇಕ ಸಂಘಗಳನ್ನು ಎ.ಐ.ಟಿ.ಯು.ಸಿ.ಯಲ್ಲಿ ತರಬಹುದಾಗಿದ್ದರೂ ತಂದಿಲ್ಲ. ಒರಿಸ್ಸಾದಲ್ಲಿ ಬಲಹೀನವಾಗಿದೆ. ಈ ಪ್ರದೇಶಗಳ ಬೆಳವಣಿಗೆಗೆ ಎ. ಐ. ಟಿ. ಯು. ಸಿ. ನೆರವೀಯಬೇಕಾಗಿದೆ.

ಫೆಡರೇಷನ್ನುಗಳು

ಸ್ವತಂತ್ರ ಫೆಡರೇಶನ್‌ಗಳಲ್ಲಿ ಎ.ಐ.ಟಿ.ಯು.ಸಿ. ಪ್ರಭಾವವು ಬೆಳೆದಿದೆ. ನಮ್ಮ ಸಲಹೆಯನ್ನು ಕೇಳದಿರುವ ಒಂದು ಫೆಡರೇಶನ್ನೂ ಸಹ ಇಲ್ಲ. ಅವರಿಗೆ ಕಾರ್ಮಿಕ ವರ್ಗದ ನಡುವೆ ನಮ್ಮ ಶಕ್ತಿಯ ಅರಿವು ಇದೆ. ಟ್ರಾನ್ಸ್‌ಪೋರ್ಟ್ ಕೆಲಸಗಾರರ ಸಂಘಟನೆಯು ಶಕ್ತಿಯುತವಾಗುತ್ತಿದೆ.

ಸ್ವತಂತ್ರ ಫೆಡರೇಶನ್‌ಗಳಲ್ಲಿ ನಾವು ಸಂಘಟನೆಯನ್ನು ಬಲವಾಗಿ ಕಟ್ಟುವುದರ ಮೇಲೆ ಕೇಂದ್ರೀಕರಿಸಬೇಕು. ಕೇಂದ್ರ ಸರಕಾರದ ನೌಕರರ ಕಾನ್‌ಫೆಡರೇಷನ್ ಬಲಗೊಳ್ಳುವಂತೆ ನಾವು ಮಾಡಬೇಕು. ಅವರ ಸಂಘಟನೆಯನ್ನು ಕಟ್ಟುವುದು ಬಹಳ ಕಷ್ಟ. ಇಂಗ್ಲೆಂಡ್ ಮತ್ತು ಪಶ್ಚಿಮದ ಇತರ ರಾಷ್ಟ್ರಗಳಲ್ಲಿಯೂ ಸಹ ಇವರೇ ಕೊನೆಯಲ್ಲಿ ಸಂಘಟಿತರಾಗುವವರು. ಮತ್ತು ಧಾಳಿ ಬರುವುದು ಮೊದಲು ಇವರ ಮೇಲೆಯೇ. ಅವರ ಸ್ವತಂತ್ರ ಬೆಳವಣಿಕೆಗೆ ನಾವು ನೆರವು ನೀಡಬೇಕು.

ಅಸಮಾನವಾದ ಬೆಳವಣಿಗೆ

ಇಡೀ ದೇಶವನ್ನು ತೆಗೆದುಕೊಂಡಲ್ಲಿ ಚಳವಳಿಯಲ್ಲಿ ಹಿಂದಿದ್ದ ಅಸಮಾನವಾದ ಬೆಳವಣಿಗೆ ಇಂದು ಇಷ್ಟಿಲ್ಲ. ಸಾಕಷ್ಟು ಮಟ್ಟಿಗೆ ಅದು ಸುಧಾರಿಸಿದೆ. ಒಂದು ಕಾಲವಲ್ಲಿ ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಟೆಕ್ಸ್‌ಟೈಲ್ ಮತ್ತು ರೈಲ್ವೆ ಮಾತ್ರ ಸುಸಂಘಟಿತವಾದ ಕ್ಷೇತ್ರವಾಗಿತ್ತು. ಇಂದು ಸಂಘಟನೆ ಹೊಂದಿರದ ಯಾವ ಕೈಗಾರಿಕೆಯೂ ಇಲ್ಲ. ಚಳವಳಿಯ ಮಟ್ಟದಲ್ಲಿ ವ್ಯತ್ಯಾಸವಿದೆ ಅಷ್ಟೆ.

ಜನತೆ ಮುಂದೆ ಸಾಗುತ್ತಿದೆ. ಆದರೆ ಸ್ವಯಂಸ್ಫೂರ್ತಿಯ ಚಳವಳಿ ಒಳ್ಳೆಯದಲ್ಲ ಅದು ಅರಾಜಕತೆ. ಟ್ರೇಡ್ ಯೂನಿಯನ್ ಚಳವಳಿಗೆ ಇದು ತಕ್ಕುದಲ್ಲ. ಚಳವಳಿಯು ಇಂದು ಸಂಬಂಧವುಳ್ಳದ್ದಾಗಿದೆ. ಹಿಂದೆ ಎಲ್ಲ ಕೆಲಸಗಾರರೂ ನಮ್ಮ ಹಿಂದೆ ಇರಲಿ ಇಲ್ಲದಿರಲಿ ಮುಷ್ಕರದ ಘೋಷಣೆ ಈಯುತ್ತಿದ್ದೆವು. ಸಾರ್ವತ್ರಿಕ ಬಿಕ್ಕಟ್ಟು ಮತ್ತು ಅನುಭವವು ನಮಗೆ ಹೊಸ ತಂತ್ರಗಳನ್ನು ಕಲಿಸಿಕೊಟ್ಟಿವೆ.

ಇಂದಿನ ಪರಿಸ್ಥಿತಿಯಲ್ಲಿ ಹೊಸ ಶಕ್ತಿಯೆಂದರೆ ಮಧ್ಯಮ ವರ್ಗದ ನೌಕರರು ಹೋರಾಟಕ್ಕಿಳಿದಿರುವುದು. ಹಿಂದೆ ಅವರು ಬರುತ್ತಲೇ ಇರಲಿಲ್ಲ. ರಾಜಕೀಯ ಹೋರಾಟಕ್ಕೆ ಬರುತ್ತಿದ್ದರು. ಆದರೆ ಟ್ರೇಡ್ ಯೂನಿಯನ್ ಚಳವಳಿಗಲ್ಲ. ಈ ಕ್ಷೇತ್ರದಲ್ಲಿ ಅನೇಕರು ಬರುತ್ತಿದ್ದಾರೆ. ಇದು ಎ.ಐ.ಟಿ.ಯು.ಸಿಯ ಸಂಘಟಿತ ಶಕ್ತಿಯನ್ನು ಮುಂದಕ್ಕೆ ಕೊಂಡು ಹೋಗಬೇಕಿದೆ.

ಸರಿಯಾದ ತಂತ್ರ

ಇಂದು ಇರುವ ಪ್ರಧಾನವಾದ ಅಡಚಣೆ ತಾತ್ವಿಕವಾದ್ದಲ್ಲ, ಆದರೆ ಸರಿಯಾದ ತಂತ್ರ ಅನುಸರಿಸುವುದು ಆಗಿದೆ. ಸಂಘಟನೆ ಹೊಸ ಅವಕಾಶಗಳಿಗೆ, ಕಾನೂನುಗಳು, ನಿಯಮಗಳು ಮೊದಲಾದವುಗಳಲ್ಲಿ ಸುಸಜ್ಜಿತಗೊಳ್ಳಬೇಕಾಗಿದೆ. ಇವೆಲ್ಲ ಚಳವಳಿಯ ಅಂಗವಾಗಿದೆ. ಚಳವಳಿಯು ಬಲಗೊಳ್ಳದಿದ್ದಲ್ಲಿ ಇರತಕ್ಕ ಕಾಯಿದೆಗಳನ್ನೂ ಸಹ ಕಾರ್ಮಿಕ ವರ್ಗದ ಹಿತಕ್ಕೆ ಬಳಸಿಕೊಳ್ಳಲು ಸಾಧ್ಯವಾಗದು. ಇದಕ್ಕೆ ತರಬೇತಿ ಹೊಂದಿದ ಕಾರ್ಯಕರ್ತರುಗಳು ಅಗತ್ಯ.

ಟ್ರಿಬ್ಯೂನಲ್‌ಗಳು ಅನೇಕ ಸಂದರ್ಭಗಳಲ್ಲಿ ಅಧಿಕ ವೇತನವನ್ನು ಇತ್ತಿದೆ. ಈ ಅವಾರ್ಡುಗಳನ್ನು ಅಮಲಿಗೆ ತರಲಿಕ್ಕೆ ನಾವು ಹೋರಾಟ ನಡೆಸಬೇಕು. ಕಾನೂನು ಕಾಯಿದ ತಿಳಿದಿರುವವರ ಸಹಾಯವೂ ಇದಕ್ಕೆ ಅಗತ್ಯ.

ಎಸ್. ಎ. ಡಾಂಗೆ

ಇಂಟಕ್ ಮತ್ತು ಕಾಂಗ್ರೆಸ್ಸು ಈ ಪರಿಸ್ಥಿತಿಯನ್ನು ಮನಗಂಡು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಎಲ್ಲ ಪ್ರಾಂತೀಯ ಟ್ರೇಡ್ ಯೂನಿಯನ್ ಸಂಘಟನೆಗಳೂ ಪ್ರಾಂತ ಸಮ್ಮೇಳನಗಳನ್ನು ಜರುಗಿಸಬೇಕು. ಸದಸ್ಯತ್ವವನ್ನು ತನಿಖೆ ಮಾಡಬೇಕು. ಸದಸ್ಯತ್ವದ ಸಂಖ್ಯೆ ಅತ್ಯಗತ್ಯ. ಎ.ಐ.ಟಿ.ಯು.ಸಿ. ಗೆ ಸಮಿತಿಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ದೊರಕಲು ಇದು ಅಗತ್ಯ. ಚಳವಳಿಯ ಬಲವು ಅದರ ಸದಸ್ಯರ ಸಂಖ್ಯೆಯಲ್ಲಿ ವ್ಯಕ್ತಗೊಳ್ಳಬೇಕು. ಸದಸ್ಯರನ್ನು ಹೆಚ್ಚಿಸಲು ಅವಕಾಶವಿದೆ. ಪ್ರಾಂತ ಸಂಘಟನೆಗಳು ಕೇಂದ್ರಕ್ಕೆ ವರದಿ ಸಲ್ಲಿಸುತ್ತಿರಬೇಕು. ಸರಕಾರದಿಂದ ರಚಿತವಾದ ಸಮಿತಿಗಳಲ್ಲಿ ನಮ್ಮ ಕೆಲಸ ಸುವ್ಯವಸ್ಥಿತವಾಗಿರಬೇಕು. ಆದಷ್ಟು ವಿವಾದಗಳನ್ನು ನೇರವಾಗಿ ಸಂಧಾನ ಮಾತುಕತೆ ನಡೆಸುವುದರ ಮೂಲಕ ಇತ್ಯರ್ಥಗೊಳಿಸಬೇಕು.

ಕಾರ್ಮಿಕರ ಶಿಕ್ಷಣ

ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಶಿಕ್ಷಕರನ್ನು ತರಬೇತು ಮಾಡಲು ಎ.ಐ. ಟಿ.ಯು.ಸಿ. ಒಂದು ಕೇಂದ್ರ ಶಾಲೆಯನ್ನು ಸ್ಥಾಪಿಸಬೇಕು. ಶಾಲೆ ಹೆಸರು ನಮ್ಮ ಟ್ರೇಡ್ ಯೂನಿಯನ್ ಚಳವಳಿಯ ಸ್ಥಾಪಕರಲ್ಲೊಬ್ಬರಾದ ಶ್ರೀ ಎನ್. ಎಂ. ಜೋಷಿಯವರ ಗೌರವಾರ್ಥವಾಗಿರಬೇಕು.

ನಮ್ಮ ಮುಂದೆ ಇಂದು ಇರುವ ಪ್ರಶ್ನೆ ಸಂಘಟನೆ. ಸಮಿತಿಗಳಲ್ಲಿರುವಂಥವರು ಪರಿಣಾಮಕಾರಿಯಾಗಿ ಕೆಲಸ ಮಾಡದಿದ್ದಲ್ಲಿ ಏನೂ ಪ್ರಯೋಜನವಾಗದು. ಕಾರ್ಯಕರ್ತರಿಗೆ ತಾವು ಕೆಲಸ ಮಾಡುತ್ತಿರುವ ಕೈಗಾರಿಕೆ, ಅದರ ಇತಿಹಾಸ, ಅದರ ಆರ್ಥಿಕ, ಮುಂತಾದ ನಾನಾ ಮುಖಗಳ ಅರಿವಿರಬೇಕು. ಕಾಮ್ರೇಡುಗಳು ವಿಶಿಷ್ಟ ಕೈಗಾರಿಕೆಗಳ ಕುರಿತು ಪರಿಣಿತರಾಗಬೇಕು.

ಪ್ರಸ್ತುತದಲ್ಲಿ ನಾವು ಎಲ್ಲದರಲ್ಲೂ ಕೈ ಇರಿಸುತ್ತೇವೆ. ನಾವು ಇನ್ನು ಹೆಚ್ಚು ಪರಿಣಿತರಾಗಬೇಕು. ವಿವಿಧ ಕೈಗಾರಿಕೆಗಳು ಮತ್ತು ಅವುಗಳ ಆರ್ಥಿಕದ ಬಗ್ಗೆ ನಾವು ವಿಶೇಷವಾಗಿ ಅಧ್ಯಯನ ಮಾಡಿ ತಿಳಿದುಕೊಳ್ಳದಿದ್ದಲ್ಲಿ ಟ್ರೇಡ್ ಯೂನಿಯನ್ ಚಳವಳಿಗೆ ನೇತೃತ್ವ ಕೊಡಲಾಗುವುದಿಲ್ಲ. ಸಾಮಾನ್ಯ ಕಾರ್ಮಿಕ ಇನ್ನೂ ಆ ಮಟ್ಟಕ್ಕೆ ಬಂದಿಲ್ಲ.

ಸರಕಾರೀ ಸಂಸ್ಥೆಗಳಲ್ಲಿ ಮತ್ತು ಹೊರಗೆ ಅಂಕಿ ಅಂಶಗಳ ಸಂಗ್ರಹಕಾರರು ತಮ್ಮ ತಮ್ಮಲ್ಲೇ ಕಿತ್ತಾಡುತ್ತಿದ್ದಾರೆ. ಅಂಕಿ ಅಂಶಗಳ ಸಂಗ್ರಹಣೆಗೆ ಟ್ರೇಡ್ ಯೂನಿಯನ್ ಚಳವಳಿಗೆ ಸರಿಯಾದ ಜೀವನ ಮಟ್ಟದ ಅಂಕವನ್ನು ತಿಳಿಯಲೂ ಸಹ ಸಂಘಟನೆಯೇ ಇಲ್ಲ.

ಕಾರ್ಮಿಕರ ಶಿಕ್ಷಣ ಮತ್ತು ಸಮಿತಿಗಳಲ್ಲಿ ನಾವು ಪರಿಣಾಮಕಾರಿಯಾಗಿ ಕೆಲಸ ಮಾಡುವುದು ಬಹುಮುಖ್ಯವಾದ ಕಾರ್ಯವಾಗಿದೆ. ಸರಕಾರವು ಇಂದು ನಮ್ಮನ್ನು ಸಮಿತಿಗಳಲ್ಲಿ ತೆಗೆದುಕೊಳ್ಳಲು ಸಿದ್ಧವಿದೆ. ನಾವು ಅವುಗಳಲ್ಲಿ ಸಿದ್ಧತೆ ಇಲ್ಲದೆ ಹೋದರೆ ನಮ್ಮ ಬುದ್ಧಿವಂತಿಕೆ ಬಯಲಾಗುತ್ತದೆ. ಒಂದು ಕೈಗಾರಿಕೆಯನ್ನು ಅರಿತುಕೊಳ್ಳಲು ವರ್ಷಗಟ್ಟಲೆ ಅನುಭವಬೇಕು. ನಾವು ತಾಂತ್ರಿಕ ವಿಷಯ ತಿಳಿಯಲು ನಿರಾಕರಿಸುತ್ತೇವೆ. ಇಂದು ಆ ಜ್ಞಾನವಿಲ್ಲದೇ ಇದ್ದಲ್ಲಿ ಮುಂದುವರಿಯಲು ಸಾಧ್ಯವಿಲ್ಲ.

ಇಂದು ವಾತಾವರಣವು ಬೇಡಿಕೆಗಳನ್ನು ಪಡೆದು ಕೊಳ್ಳುವುದಾಗಿದೆ. ಅದ್ದರಿಂದ ಸಂಧಾನ ನಡೆಸಿ ಅದನ್ನು ಇತ್ಯರ್ಥಗೊಳಿಸಲು ಪ್ರಯತ್ನಿಸಬೇಕೇ ಹೊರತು ಮು

ಕೊನೇ ಪುಟವನ್ನು ನೋಡಿ

ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಸಮ್ಮೇಳನ ಮುಂದಕ್ಕೆ

ಜನವರಿ ಕೊನೆ ವಾರದಲ್ಲಿ ಸೇರಲಿದ್ದ ಭಾರತ ಕಮ್ಯೂನಿಸ್ಟ್ ಪಾರ್ಟಿಯ ವಿಶೇಷ ಅಧಿವೇಶನವನ್ನು ಏಪ್ರಿಲ್ 6 ರಿಂದ 13ಕ್ಕೆ ಮುಂದೂಡಲಾಗಿದೆ.

ಅದೇ ರೀತಿಯಲ್ಲಿ ಜನವರಿ 1ರಿಂದ 3ರ ತನಕ ನಡೆಯಬೇಕಾಗಿದ್ದ ಪ್ರಾಂತ ಕಮ್ಯೂನಿಸ್ಟ್‌ಪಾರ್ಟಿ ಸಮ್ಮೇಳನವನ್ನು ಜನವರಿ ತಿಂಗಳ ಕೊನೆಯ ವಾರಕ್ಕೆ ಮುಂದೆ ಹಾಕಲು ಪ್ರಾಂತ ಸಮಿತಿಯು ನಿರ್ಧರಿಸಿದೆ. ಸಮ್ಮೇಳನದ ನಿರ್ದಿಷ್ಟ ದಿನಗಳನ್ನು ಮುಂದಿನ ವಾರ ತಿಳಿಸಲಾಗುವುದು

ಪ್ರಾಂತ ಸಮ್ಮೇಳನಕ್ಕೆ ಪ್ರಾತಿನಿಧ್ಯವನ್ನು ಸ್ವಲ್ಪ ಹೆಚ್ಚಿಸಬೇಕೆಂದು ಪ್ರಾಂತ ಸಮಿತಿ ನಿರ್ಧರಿಸಿದೆ. ೨೦ ಸದಸ್ಯರಿಗೊಬ್ಬ ಪ್ರತಿನಿಧಿಯಂತೆ ಎಲ್ಲ ಯೂನಿಟ್‌ಗಳಿಂದಲೂ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕೆಂದು ತೀರ್ಮಾನವಾಗಿದೆ. ಎಲ್ಲ ಘಟಕಗಳೂ ಇದನ್ನು ಗಮನಿಸುವರೆಂದು ನಂಬಿದ್ದೇವೆ.

ಈಗ ದೊರೆತ ಸಮಯಾವಕಾಶವನ್ನು ಎಲ್ಲ ಪಾರ್ಟಿ ಯೂನಿಟ್‌ಗಳೂ ಹೊಸ ಪಾರ್ಟಿ ಸದಸ್ಯರನ್ನು ಸೇರಿಸುವುದಕ್ಕೂ, ಕಾರ್ಡುಗಳನ್ನು ಹಂಚುವುದಕ್ಕೂ, ಚಂದಾ ಪೂರ್ತಿ ವಸೂಲು ಮಾಡುವುದಕ್ಕೂ, ಪಾರ್ಟಿ ಸಂಘಟನೆಯ ಬಗ್ಗೆ ವಿಷದವಾಗಿ ಚರ್ಚೆ ನಡೆಸಲಿಕ್ಕೂ, ಕ್ರಮಬದ್ಧವಾಗಿ ಪ್ರಾಂತ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆರಿಸುವುದಕ್ಕೂ ಸದುಪಯೋಗ ಪಡಿಸಿಕೊಳ್ಳಬೇಕೆಂದು ನಾವು ವಿನಂತಿಸುತ್ತೇವೆ.

ಕೆಲವು ಯೂನಿಟ್‌ಗಳು ಇನ್ನೂ ಪಾರ್ಟಿ ಕಾರ್ಡುಗಳನ್ನು ಪಡೆಯದಿರುವುದು ಶೋಚನೀಯವಾಗಿದೆ. ಕಾರ್ಡು ಪಡೆದವರನ್ನು ಮಾತ್ರ ಸದಸ್ಯರೆಂದು ಪರಿಗಣಿಸಲಾಗುವುದೆಂದು ಪುನಃ ಎಚ್ಚರಿಸಲಾಗಿದೆ. ಕೆಲವರಿಂದ ಕಾರ್ಡಿನ ಎಂಟಾಣೆ ಮಾತ್ರ ಬಂದಿದೆ. ಅವರಿಂದ ಚಂದಾ ಹಣದ ಪ್ರಾಂತ ಸಮಿತಿಯ ಭಾಗವಾದ 0—8—0 ಬರಬೇಕಾಗಿದೆ. ಅದನ್ನು ಸಹ ಜನವರಿ 10ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ವಿನಂತಿಸುತ್ತೇವೆ.

ಕೇಂದ್ರ ಮತ್ತು ಪ್ರಾಂತ ಸಮಿತಿಗಳ ಆದೇಶದಂತೆ ಹೊಸ ಸದಸ್ಯರನ್ನು ಸೇರಿಸುವ ಕಾರ್ಯವನ್ನು ಕೂಡಲೇ ಹೆಚ್ಚು ತೀವ್ರಗೊಳಿಸಿ ಕಮ್ಯೂನಿಸ್ಟ್ ಪಾರ್ಟಿಯನ್ನು ಬಲಗೊಳಿಸಲು ಎಲ್ಲ ಯೂನಿಟ್‌ಗಳೂ ಶ್ರದ್ಧೆವಹಿಸಬೇಕೆಂದು ಪ್ರಾಂತ ಸಮಿತಿಯು ಕರೆ ಕೊಡುತ್ತದೆ.

ಭಾರತ ಕಮ್ಯೂನಿಸ್ಟ್ ಪಾರ್ಟಿ
ಕರ್ನಾಟಕ ಪ್ರಾಂತ ಸಮಿತಿ.

19-12-57

ಕರ್ನಾಟಕ ಪ್ರಾಂತ ಪ್ಲಾಂಟೇಶನ್ ಕೆಲಸಗಾರರ ಪ್ರಥಮ ಸಮ್ಮೇಳನ

ಡಿಸೆಂಬರ್ ತಾರೀಕು 11 ಮತ್ತು 12ರಲ್ಲಿ ಸಕಲೇಶ್‌ಪುರದ ಪ್ರವಾಸಿ ಮಂದಿರದಲ್ಲಿ ಕರ್ನಾಟಕದಲ್ಲೇ ಪ್ರಥಮವಾಗಿ ತೋಟ ಕೆಲಸಗಾರರ ಸಮ್ಮೇಳನವು ಸಮಾವೇಶಗೊಂಡಿತು. 171 ಪ್ರತಿನಿಧಿಗಳು ಬೇರೆ ಬೇರೆ ಭಾಗಗಳಿಂದ ಆಗಮಿಸಿದ್ದರು. ಸ್ವಾಗತ ಸಮಿತಿಯ ಕಾರ್ಯದರ್ಶಿಯವರಾದ ಕಾ|| ಯಂ. ವಿ. ಭಾಸ್ಕರ್‌ರವರು ಪ್ರತಿನಿಧಿಗಳನ್ನೂ, ಧ್ವಜಾರೋಹಣ ಮಾಡಲು ದಕ್ಷಿಣಕನ್ನಡ ಜಿಲ್ಲೆಯಿಂದ ಬಂದಿದ್ದ ರೈತ ಕಾರ್ಮಿಕ ಮುಂದಾಳು ಕಾ|| ಎ. ಕೃಷ್ಣ ಶೆಟ್ಟರನ್ನೂ, ಸಮ್ಮೇಳನ ಉದ್ಘಾಟನೆ ಮಾಡಲು ಬಂದಿದ್ದ ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಎನ್. ಎಲ್. ಉಪಾಧ್ಯಾಯರನ್ನೂ ಮತ್ತು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಬಂದಿದ್ದ ಕಾ|| ಎಂ. ಸಿ. ನರಸಿಂಹನ್ (ಎಂ. ಎಲ್. ಎ)ರವರನ್ನು ಸ್ವಾಗತಿಸಿ ಭಾಷಣ ಮಾಡಿದರು.

ಕಾ|| ಎ. ಕೃಷ್ಣಶೆಟ್ಟರು ಕೆಂಬಾವುಟವನ್ನು ಅರಳಿಸುತ್ತಾ, ಕೆಂಬಾವುಟ ದಳಿತ ಜನತೆಯನ್ನು ಒಂದುಗೂಡಿಸಿ ದುಡಿಮದದನ್ನು ಗಳಿಸಲು ಎಚ್ಚರಿಸಿ ದಾರಿ ತೋರುವ ಬಾವುಟವೆಂದೂ, ಕಾರ್ಮಿಕರು ಇದರಡಿಯಲ್ಲಿ ಸಂಘಟಿತರಾಗಿ ಮುನ್ನಡೆಯಬೇಕೆಂದೂ ಕೇಳಿಕೊಂಡರು. ಕಾ|| ಎನ್. ಎಲ್. ಉಪಾಧ್ಯಾಯರು ಪ್ಲಾಂಟೇಶನ್ ಕೈಗಾರಿಕೆ ರಾಷ್ಟ್ರಕ್ಕೇ ಹೆಚ್ಚಿನ ವರಮಾನವನ್ನುಂಟು ಮಾಡುವುದಾದರೂ ಕಾರ್ಮಿಕರು ಮಾತ್ರ ಅತೀವ ಶೋಷಣೆಗೊಳಗಾಗಿದ್ದಾರೆಂದೂ ಇದನ್ನು ತಡೆಯಲು ಪ್ಲಾಂಟೇಶನ್ ಕಾರ್ಮಿಕರು ಸಹಸ್ರಗಟ್ಟಲೆ ಮುಂದೆ ಬಂದು ಒಕ್ಕಟ್ಟನ್ನು ಸಾಧಿಸುವುದರ ಮೂಲಕ ಶೋಷಣೆಯನ್ನು ನಿಲ್ಲಿಸಲು ಅಣಿಯಾಗಬೇಕೆಂದೂ ಕರೆಯಿತ್ತರು.

ಅಧ್ಯಕ್ಷರಾದ ಕಾ|| ಯಂ. ಸಿ. ನರಸಿಂಹನ್ ಇಷ್ಟರ ತನಕ ಕಾರ್ಮಿಕರು ಸಂಘಟನೆಗೊಂಡದ್ದು ಸಾಲದೆಂದೂ ಇದಕ್ಕಿಂತ ಹತ್ತು ಪಾಲು ಸಂಘಟನೆಗೊಳ್ಳಲು ಮುಂದೆ ಬರಬೇಕೆಂದು ಕೇಳಿಕೊಂಡರು.

ಆನಂತರ ಕಾ|| ಯಂ. ವಿ. ಭಾಸ್ಕರ್‌ರವರು ವರದಿಯನ್ನು ಪ್ರತಿನಿಧಿಗಳ ಮುಂದಿಟ್ಟು ಹಲವಾರು ನಿರ್ಣಯಗಳನ್ನು ಚರ್ಚಿಸಿ ತೀರ್ಮಾನಕ್ಕೆ ಬರಲಾಯಿತು.

ನಿರ್ಣಯಗಳು

○ ಪ್ಲಾಂಟೇಶನ್ ಕಾರ್ಮಿಕರಿಗೆ ಇಂದು ದೊರೆಯುತ್ತಿರುವ ಕಡಿಮೆ ದರದ ಕೂಲಿಯನ್ನು ಬರ್ತಿ ಮಾಡಲೂ ಇಂದಿಗಿಂತ ಉತ್ತಮ ಜೀವನವನ್ನು ನಡಿಸಲು ಸಾಧ್ಯವಾಗುವಂತೆ ಇಡೀ ವರ್ಷದ ಮೊತ್ತ ಕೂಲಿಯ ಶೇಕಡಾ 25 ಬೋನಸ್ಸಾಗಿ (1956-57) ದೊರೆಯಬೇಕು.

○ ಪ್ಲಾಂಟೇಶನ್‌ನಲ್ಲಿ ದುಡಿಯುವ ಪ್ರತಿಯೊಬ್ಬ ಕಾರ್ಮಿಕರಿಗೂ ವರ್ಷದಲ್ಲಿ 12 ರೂ ಕಂಬಳಿ ಅಲೆವೆನ್ಸ್ ಕೊಡಬೇಕು. ಇದು ಆರು ತಿಂಗಳು ಕಾಲ ಕೆಲಸ ಮಾಡಿದ ಪ್ರತಿಯೊಬ್ಬರಿಗೂ ದೊರೆಯಬೇಕು.

○ ಪ್ಲಾಂಟೇಶನ್‌ನಲ್ಲಿ ದುಡಿಯುವ ಪ್ರತಿಯೊಬ್ಬ ಕಾರ್ಮಿಕನಿಗೂ ವರ್ಷದ ರಜಾ ಕಾಲವನ್ನು ಉಪಯೋಗಿಸಿ ಅವರವರ ಹುಟ್ಟೂರಿಗೆ ಹೋಗಿಬರಲು (ದೂರಕ್ಕೆ ಅನುಸರಿಸಿ) ಬೀಳುವ ಹಾದಿ ಖರ್ಚು ದೊರೆಯಬೇಕು. ಇದು ಕೂಡ ಆರು ತಿಂಗಳು ಕಾಲ ಕೆಲಸ ಮಾಡಿದ ಪ್ರತಿಯೊಬ್ಬರಿಗೂ ಅನ್ವಯಿಸಬೇಕು.

○ ಎಲ್ಲಾ ಪ್ಲಾಂಟೇಶನುಗಳಲ್ಲೂ ತಿಂಗಳು ತಿಂಗಳು ಸಂಬಳ ಪಾವತಿಯಾಗಬೇಕು. ಜೊತೆಯಲ್ಲೇ ಹಾಜರಿ, ವಾರದ ಬಟ್ವಾಡೆ, ಪ್ರೊವಿಡಂಟ್‌ಫಂಡ್, ಸಂಬಳ ಇತ್ಯಾದಿಯನ್ನು ಸೂಚಿಸುವ ಪೇಸ್ಲಿಪ್ ಕೊಡಬೇಕು.

○ ಸ್ತ್ರೀಕೂಲಿಕಾರರು ಗರ್ಭವತಿಯಾಗಿ ತಿಂಗಳು ತುಂಬದೆ ಗರ್ಭಪಾತವಾದರೆ ಇಂದು ಮೈಸೂರು ಪ್ಲಾಂಟೇಶನ್ ರೂಲ್ಸ್‌ನಲ್ಲಿ ಹೇಳಿರುವ ಎರಡು ವಾರದ ಸಂಬಳ ಸಹಿತ ರಜೆಯ ಬದಲು ಐದು ವಾರಗಳು ಎಂದು ತಿದ್ದುಪಡಿಯಾಗಬೇಕು. ಏಕೆಂದರೆ ಸ್ತ್ರೀ ಕಾರ್ಮಿಕರಿಗೆ ಇಂತಹ ಸಂದರ್ಭದಲ್ಲಿ ಐದು ವಾರಗಳು ವಿಶ್ರಾಂತಿಬೇಕೆಂಬುದು ಎಲ್ಲರ ಅಭಿಪ್ರಾಯ ಆದುದರಿಂದ ಈ ಬಗ್ಗೆ ಕೂಡಲೇ ತಿದ್ದುಪಡಿಯಾಗಬೇಕು.

○ ಎಲ್ಲಾ ಕಾರ್ಮಿಕರಿಗೂ ಔಷಧೋಪಚಾರ ಸುಲಭವಾದ ರೀತಿಯಲ್ಲಿ ದೊರೆಯಬೇಕು. ಮತ್ತು ಎಲ್ಲಾ ಸಂದರ್ಭದಲ್ಲೂ ದೊರಯುವಂತಾಗಬೇಕು.

○ ಮೈಸೂರು ಪ್ಲಾಂಟೇಶನ್ ರೂಲ್ಸ್‌ನಲ್ಲಿ ಹೇಳಿರುವ 14 ದಿನಗಳ ಕಾಯಿಲೆ ರಜೆಗೆ ಮೂರನೆ ಎರಡಂಶ ಸಂಬಳವೆಂದಿರುವುದನ್ನು ಪೂರ್ತಿ ಸಂಬಳದಷ್ಟು ಕೊಡಬೇಕೆಂದು ತಿದ್ದುಪಡಿಯಾಗಿ ಬರಬೇಕು.

ಅಲ್ಲದೆ ಟ್ರೇಡ್ ಯೂನಿಯನ್ ಕೆಲಸಕ್ಕೆ ತಡೆಯಾಗುವಂತೆ ಪೋಲೀಸರೂ-ಮಾಲೀಕರೂ ಅನುಸರಿಸುವ ನೀತಿಯನ್ನು ಖಂಡಿಸುವ, ವಿಮಾನ ಕಾರ್ಖಾನೆಯ ಕೆಲಸಗಾರರ ಕೇಳಿಕೆಗೆ ಬೆಂಬಲ ನೀಡಿ ಅವರ ಹೋರಾಟವನ್ನು ಅಭಿನಂದಿಸುವ, ಎರನೇ ಕೈಗಾರಿಕಾ ನ್ಯಾಯಾಲಯ (ಟ್ರಿಬ್ಯೂನಲ್)ವನ್ನು ಕೂಡಲೇ ರಚಿಸಬೇಕೆನ್ನುವ, ಆಲ್ ಇಂಡಿಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗೆ ಅಫಿಯಿಲೇಟ್ ಮಾಡಬೇಕೆನ್ನುವ, ಯೂನಿಯನಿನ ಘಟನೆಯಲ್ಲಿ ಕೆಲ ತಿದ್ದುಪಡಿ ಮಾಡಬೇಕೆನ್ನುವ, ಕೇರಳ ಸರಕಾರವನ್ನು ಅಭಿನಂದಿಸುವ ಮತ್ತು ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸುವ ನಿರ್ಣಯಗಳನ್ನು ಮಾಡಲಾಯಿತು.

12—12-57ರಂದು ಸಾಯಂಕಾಲ 4 ಘಂಟೆಗೆ ಬಹಿರಂಗ ಅಧಿವೇಶನವು ನಡೆಯಿತು. ಎ. ಕೃಷ್ಣ ಶೆಟ್ಟಿ, ಎನ್. ಎಲ್. ಉಪಾಧ್ಯಾಯ, ಕಳಸಯ್ಯ, ಎ. ಅಣ್ಣಾಮಲೈ, ಯಂ. ಸಿ. ನರಸಿಂಹನ್ ಮತ್ತು ಯಂ. ವಿ. ಭಾಸ್ಕರ್ ಮೊದಲಾದವರು ಮಾತಾಡಿದರು. ಕೊನೆಗೆ ಜಯಘೋಷಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

ಬಿಜಾಪುರ

ನಗರಸಭೆಯ ಕಲುಷಿತ ಆಡಳಿತೆ

(೯ನೇ ಪುಟದಿಂದ)

ದುರಾಡಳಿತೆ ಮತ್ತು ದುರ್ವ್ಯಯಕ್ಕೆ ಪ್ರಸಿದ್ಧವಾದ ಬಿಜಾಪುರ ಮುನಿಸಿಪಾಲಿಟಿಯ ಆಡಳಿತೆ ಒಂದೂವರೆ ವರ್ಷದಿಂದ ಸುಧಾರಿಸುತ್ತ ಬಂದಿದ್ದು, ಈಗ ಕೆಲವು ತಿಂಗಳುಗಳಿಂದ ಮತ್ತೆ ಮೊದಲಿನ ದಾರಿಯನ್ನೇ ಹಿಡಿಯ ಹತ್ತಿದೆ. ಹೋದ ವರ್ಷ ಜಾತೀಯತೆಗಾಗಲೀ, ಲಂಚಗುಳಿತನಕ್ಕಾಗಲೀ, ದುಂದುವೆಚ್ಚಕ್ಕಾಗಲಿ ಅಥವಾ ಇತರ ಯಾವುದೇ ತರದ ಅನೀತಿಗೆ ಕಾರಣೀಭೂತವಾದ ನಡಾವಳಿ ಹಾಗೂ ಕೆಲಸಗಳಿಗೆ ಅವಕಾಶ ಸಿಗುತ್ತಿರಲಿಲ್ಲ. ಕೆಲವು ಕುಂದು ಕೊರತೆಗಳಿದ್ದರೂ ಕೂಡ, ಹೋದ ವರ್ಷದ ಆಡಳಿತೆ ಮತ್ತು ಸಾರ್ವಜನಿಕ ಹಿತದ ಕೆಲಸಗಳನ್ನು ನೋಡಿ ಜನರೆಲ್ಲ, "ಮುನಿಸಿಪಾಲಿಟಿ ಸುಧಾರಣೆಯಾಗ ಹತ್ತಿದಪ್ಪಾ" ಎಂದು ಹೇಳುತ್ತಿದ್ದರು.

ಈಗ 2-3 ತಿಂಗಳುಗಳಿಂದ ಮತ್ತೆ ಮುನಿಸಿಪಾಲಿಟಿ ಆಡಳಿತೆ ಅಧೋಗತಿಗಿಳಿಯ ಹತ್ತಿದೆ. ಜಾತೀಯತೆ, ಲಂಚಗುಳಿತನಗಳು ಸುಳಿದಾಡ ಹತ್ತಿವೆ. ಯಾವ ಸದಸ್ಯರು ಹಿಂದಿನ ಕಾಲದ ದುರಾಡಳಿತೆಗೆ ಕಾರಣೀಭೂತರಾಗಿದ್ದರೋ ಅಂಥವರೇ ಮುಂದಾಳುತ್ವ ವಹಿಸ ಹತ್ತಿದ್ದಾರೆ. ತಮ್ಮ ಮನ ಬಂದಂತೆ ಆಡಳಿತೆಯಲ್ಲಿ ಹಸ್ತಕ್ಷೇಪ ಮಾಡ ಹತ್ತಿದ್ದಾರೆ. 1956ನೇ ಎಪ್ರಿಲ್ ತಿಂಗಳಲ್ಲಿ ನೆಹರೂರವರು ಬಿಜಾಪುರಕ್ಕೆ ಬಂದಾಗ ರೂ. 50 ಸಾವಿರಕ್ಕಿಂತಲೂ ಹೆಚ್ಚಿಗೆ ಹಣವನ್ನು ನಗರ ಸಭೆಯವರು ಖರ್ಚು ಮಾಡಿದ್ದು, ಇದರ ಪೈಕಿ ಅರ್ಧಕ್ಕಿಂತಲೂ ಹೆಚ್ಚಿನ ಖರ್ಚಿಗೆ ಯಾವುದೇ ತರದ ಮಂಜೂರಿಯಿಲ್ಲೆಂದೂ ಇದನ್ನು ಸಂಬಂಧ ಪಟ್ಟವರಿಂದ ವಸೂಲಿ ಮಾಡಬೇಕಾದೀತೆಂದೂ ಸರಕಾರಿ ಲೆಕ್ಕ ತಪಾಸಣೆ ಅಧಿಕಾರಿಗಳು ಬರೆದಿದ್ದು, ಇದನ್ನೆಲ್ಲ ಮುಚ್ಚಿಕೊಳ್ಳುವುದರ ಸಲುವಾಗಿ ಕೆಲವು ಹಳೇ ಪುಡಾರಿಗಳು ಪ್ರಯತ್ನ ನಡೆಸಿ, ಹೊಸ ಸದಸ್ಯರನ್ನು ಮೋಸ ಮಾಡ ಹತ್ತಿರುವರು. ಜಾತೀಯತೆ ಭಾವನೆಯನ್ನೆಬ್ಬಿಸಿ ಹೊಸ ಗುಂಪು ಮಾಡಲೆತ್ನಿಸುತ್ತಿರುವರು. ಇವರ ಈ ಕುತಂತ್ರಕ್ಕೆ ಕೆಲವು ಯೋಗ್ಯ ಸದಸ್ಯರೂ ಬಲಿಬೀಳುತ್ತಿರುವರು. ಇದು ನಗರದ ಹಿತದ ದೃಷ್ಟಿಯಿಂದ ಯೋಗ್ಯವಲ್ಲ. ತಾ.13-12-57ನೇ ದಿವಸ ಜಾಹೀರ ಸಭೆಯಲ್ಲಿ ಮುನಿಸಿಪಲ ಸದಸ್ಯರಾದ ಶ್ರೀ ಎನ್. ಕೆ. ಉಪಾಧ್ಯಾಯರು, ಲಂಚ ತಿಂದು ನೌಕರದಾರರನ್ನು ನೇಮಿಸುತ್ತಿರುವುದನ್ನೂ, ಆಡಳಿತೆಯಲ್ಲಿಯ ಕುಂದುಕೊರತೆಗಳನ್ನೂ ಸದಸ್ಯರಲ್ಲಿಯ ಜಾತೀಯತೆ ಭಾವನೆಯನ್ನೂ ಬಯಲಿಗೆಳೆದು ಭಾಷಣ ಮಾಡಿದರು.

ಮೈಸೂರು ಪೌರಸಭಾಡಳಿತೆಗೆ

ಪ್ರಜಾಹಿತೈಷಿಗಳನ್ನೇ ಆರಿಸಿರಿ

ಮೈಸೂರಿನ ಪೌರಸಭೆಯ ಮೇಲೆ ಕಾಂಗ್ರೆಸ್ ಪುಢಾರಿಗಳಿಗೆ ಇರುವ ಹಿಡಿತದಿಂದಾಗಿ ಹಣದ ಅಪವ್ಯಯ, ಅದಕ್ಷತೆ, ಪಕ್ಷಪಾತ, ತಲೆಭಾರ ಆಡಳಿತೆ ಹೆಚ್ಚುತ್ತಿವೆ. ಇವುಗಳನ್ನು ತೊಡೆದುಹಾಕಿ, ಪೌರಸಭೆಯ ಆಡಳಿತವನ್ನು ಪ್ರಾಮಾಣಿಕವಾಗಿ ಪುರನಿವಾಸಿಗಳಿಗೆ ಅನುಕೂಲವಾಗುವಂತೆ ನಡೆಸುವಂತಾಗಬೇಕು. ಮತ್ತು ಬಡಜನರ ವಾಹನವಾದ ಸೈಕಲ್ ತೆರಿಗೆಯನ್ನು ತೆಗೆದುಹಾಕಲು, ಬಳಕೆಯ ಆಧಾರದ ಮೇಲೆ ನೀರಿನ ತೆರಿಗೆ ವಿಧಿಸಲು, ಉಪಯೋಗವಿಲ್ಲದ ಉಪಾಧ್ಯಕ್ಷ ಪದವಿಯನ್ನು ತೆಗೆದುಹಾಕಲು, ಟ್ರಸ್ಟ್ ಬೋರ್ಡನ್ನು ಮುನಿಸಿಪಲ್ ಆಡಳಿತದ ವಶಕ್ಕೆ ತೆಗೆದುಕೊಳ್ಳಲೂ, ಪೌರಸಭೆಯ ನೌಕರರಿಗೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿಕೊಟ್ಟು ಆಡಳಿತದ ದಕ್ಷತೆಯನ್ನು ಹೆಚ್ಚಿಸಲೂ, ನೀರು, ದೀಪ, ವೈದ್ಯಕೀಯ ಸಹಾಯ ಹೆಚ್ಚಿಸಲೂ, ಬಡವರು ನಿವಾಸಿಸುವ ಪ್ರದೇಶಗಳ ಕಡೆ ಹೆಚ್ಚು ಗಮನಕೊಡಲು ಮತ್ತು ಜನತೆಯ ಸಹಕಾರದಿಂದ ಪೌರಸಭೆಯ ಕೆಲಸಗಳನ್ನು ಮಾಡಲೂ ದುಡಿಯುವ ಯೋಗ್ಯ ಪ್ರಜಾಪ್ರಭುತ್ವವಾದಿ ಪಕ್ಷದ ಸದಸ್ಯರುಗಳು ಚುನಾಯಿತರಾಗಬೇಕಾದುದು ಅಗತ್ಯ. ಪುರನಿವಾಸಿಗಳ ಈ ಸಮಸ್ಯೆಗಳ ಪರಿಹಾರ ದೃಷ್ಟಿಯನ್ನೇ ಇಟ್ಟುಕೊಂಡು ಕಮ್ಯೂನಿಸ್ಟ್ ಪಕ್ಷವು ಮೂರು ಉಮೇದುವಾರರನ್ನು ನಿಲ್ಲಿಸಿದೆ. ಹಾಗೂ ಇನ್ನು ಕೆಲವರಿಗೆ ತನ್ನ ಬೆಂಬಲವನ್ನು ಸೂಚಿಸಿದೆ.

ಇದೆ 22—12—57ರಂದು ಮೈಸೂರು ಸಿಟಿ ಮುನಿಸಿಪಾಲಿಟಿಗೆ ನಡೆಯುವ ಚುನಾವಣೆಗಳಲ್ಲಿ ಮೊದಲನೆಯ ಡಿವಿಜನಿನಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಇಬ್ಬರು ಉಮೇದುವಾರರನ್ನು ನಿಲ್ಲಿಸಿದೆ. ಮತ್ತು ರಿಜರ್ವ್ ಸ್ಥಾನಕ್ಕೆ ನಿಂತಿರುವ ಒಬ್ಬ ಸ್ವತಂತ್ರ ಉಮೇದುವಾರರಾದ ಶ್ರೀ ಎಂ. ಚಿಕ್ಕತಮ್ಮಯ್ಯನವರಿಗೆ ತನ್ನ ಬೆಂಬಲವನ್ನು ನೀಡುತ್ತದೆ. ಮೊದಲನೇ ಡಿವಿಜನಿನಲ್ಲಿ ಪಾರ್ಟಿಯ ಉಮೇದುವಾರರು, ಪಾರ್ಟಿಯ ಮೈಸೂರು ಜಿಲ್ಲಾ ಕಾರ್ಯದರ್ಶಿ ಕಾ|| ಎಸ್. ಸೋಮಸುಂದರ ಶರ್ಮ ಮತ್ತು ರೈತ ಕಾರ್ಮಿಕ ಮುಖಂಡರಾದ ಕಾ|| ಎಂ. ಎನ್. ಉಗ್ರಪ್ಪ, ಎರಡನೆಯ ಡಿವಿಜನ್ನಿನಲ್ಲಿ ಪಾರ್ಟಿಯ ಕಾರ್ಮಿಕ ಮುಖಂಡರಾದ ಕಾ|| ಬಿ. ಎ ಬೆಳ್ಳಿಯಪ್ಪನವರನ್ನು ನಿಲ್ಲಿಸಿದೆ ಮತ್ತು ಡಾ|| ಬಿ. ಜಿ. ದಾಸ್ (ಪ್ರಸಕ್ತ ಕೌನ್ಸಿಲರ್), ಶ್ರೀ ಪೋಲೀಸು ವೆಂಕಟಪ್ಪ (ರಿಜರ್ವ್)ನವರಿಗೆ ಬೆಂಬಲವನ್ನು ಕೊಡುತ್ತದೆ.

ಏಳನೆಯ ವಾರ್ಡಿನಲ್ಲಿ ಬೀಡಿ ಕೆಲಸಗಾರ ಪ್ರಮುಖರಾದ ಕಾ|| ನಜೀರ್ ಅಹಮದ್ ಖಾನರವರಿಗೆ ತನ್ನ ಬೆಂಬಲವನ್ನು ಕೊಡುತ್ತದೆ.

ಇತರ ಕಡೆಗಳಲ್ಲಿ ಕಾಂಗ್ರೆಸ್ ವಿರೋಧಿ ಪ್ರಗತಿಪರರಿಗೆ ಬೆಂಬಲಕೊಟ್ಟು, ಪಾರ್ಟಿಯ ಉಮೇದುವಾರರನ್ನೂ ಮತ್ತು ಪ್ರಗತಿಪರ ಉಮೇದುವಾರರನ್ನೂ ಮೈಸೂರಿನ ಪೌರರು ಆರಿಸುವುದು ಖಂಡಿತ. ಕಾಂಗ್ರೆಸ್ಸಿನ ಕಲುಷಿತ, ಅವ್ಯವಸ್ಥಿತ ಪೌರಾಡಳಿತೆಯಿಂದ ಕಂಗೆಟ್ಟ ಪೌರರು ಪ್ರಜಾಪ್ರಭುತ್ವ ಶಕ್ತಿಗಳ ಚುನಾವಣೆಗೆ ತಮ್ಮ ಸರ್ವ ಬೆಂಬಲವನ್ನು ಮತದಾನದ ಮೂಲಕ ಪ್ರಕಟಿಸುವರೆಂದು ನಮ್ಮ ನಂಬುಗೆ.

ಕೇರಳ

ಸುಳ್ಳು - ಹಿಂಸೆ - ಬ್ಲಾಕ್‌ಮೈಲ್ ಕಾಂಗ್ರೆಸ್ - ಪಿ. ಎಸ್. ಪಿ. ದಿನಚರಿ

ಕಾಂಗ್ರೆಸ್ ಸಂಸ್ಥೆಗೆ ವಿಧೇಯವಾಗಿರುವ ಕೇರಳದ ಯುವಕ ಕಾಂಗ್ರೆಸ್ಸಿನ ಆರಂಭೋತ್ಸವವು ಕೇಂದ್ರ ಸಚಿವ ಮೊರಾರ್ಜಿಯವರ ಹಸ್ತದಿಂದ ಜರಗಿತು.

ಈ ಸಂದರ್ಭದಲ್ಲಿ ಅಲ್ಲೆಪ್ಪಿಯಲ್ಲಿ ನಡೆದ ಈ ಯುವಕ ಕಾಂಗ್ರೆಸ್‌ನ ನಿಜರೂಪವನ್ನು ಬಯಲುಮಾಡಿ, ಅಲ್ಲಿನ ಕಮ್ಯೂನಿಸ್ಟ್ ಪಕ್ಷವು ಮೊರಾರ್ಜಿಯವರಿಗೆ ಒಂದು ಮನವಿ ಸಲ್ಲಿಸಿತ್ತು.

'ಕ್ರಿಸ್ಟೋಫರ್' ಗೂಂಡಾಗಿರಿ

ಈ ಮನವಿಯಲ್ಲಿ ಹೇಳಲಾದ ಪ್ರಕಾರ ಈ ಯುವಕ ಕಾಂಗ್ರೆಸ್ಸಿನ ಚಟುವಟಿಕೆಗಳು ಕಾಂಗ್ರೆಸ್ಸಿನ ಹೆಸರಿಗೆ ಮಸಿಹಚ್ಚುವಂತಾಗಿವೆ ಎಂದು ಹೇಳಲಾಗಿದೆ. ಈ ಯುವಕ ಕಾಂಗ್ರೆಸ್ ಪ್ರತಿಗಾಮಿ ರೋಮನ್ ಕ್ಯಾಥೊಲಿಕ್ ಚರ್ಚುಗಳಿಂದ ಪೋಷಿತ 'ಕ್ರಿಸ್ಟೋಫರ್' ಗೂಂಡಾಗಳೊಡನೆ ಸಂಬಂಧ ಹೊಂದಿದೆ. ಈ 'ಕ್ರಿಸ್ಟೋಫರ್'ಗಳು ಸದಾ ಕೈಯಲ್ಲಿ ಕಬ್ಬಿಣದ ಸರಳು, ಎಸಿಡ್ ಬಲ್ಬುಗಳು ಮತ್ತು ಸ್ಫೋಟಕಗಳು ಇರುತ್ತವೆ. ಇವರು ತಿರುನೆಲ್ಲದಿಂದ ಅಲ್ಲೆಪ್ಪಿಗೆ ಯುವಕ ಕಾಂಗ್ರೆಸ್ ಮೇಳದಲ್ಲಿ ಭಾಗವಹಿಸಲು ಬಂದಿರುತ್ತಾರೆಂದು ತಿಳಿಸಲಾಗಿದೆ.

ಇಲ್ಲಿಗೆ ಬರುವ ಶೆರ್ಥಳ್ಳಿಯ ರಸ್ತೆಯಲ್ಲಿ, ಈ 'ಕ್ರಿಸ್ಟೋಫರ್'ಗಳ ಜೀಪು ಕಾರಿನಿಂದ ಕೆಳಗೆ ಬಿದ್ದ ಕಬ್ಬಿಣದ ಸರಳೊಂದು ದೊರಕಿದೆ. ಅದನ್ನು ಪೋಲೀಸರ ವಶಮಾಡಲಾಗಿದೆ. ಈ ಸರಳಿಗೆ ತ್ರಿವರ್ಣ ಧ್ವಜವನ್ನೂ ಕಟ್ಟಲಾಗಿದೆ.

ಮೆರವಣಿಗೆ ಮೇಲೆ ಧಾಳಿ

ಇತ್ತ ತಿರುವಾಂಕೂರಿನ ಚೆಂಗನ್‌ಚೇರಿಯಲ್ಲಿ ಕಮ್ಯೂನಿಸ್ಟ್ ಪಕ್ಷದ 5000 ಮಂದಿಯ ಮೆರವಣಿಗೆಯೊಂದರ ಮೇಲೆ ಸೋಡಾ ಬಾಟ್ಲಿ, ಕಲ್ಲುಗಳನ್ನು ಬೀರಲಾಯಿತು. ಮಾರ್ಗದಲ್ಲಿ ಕೈಗಾಡಿಗಳನ್ನು ತಡೆಯಾಗಿಟ್ಟು, ಅರ್ಧ ಗಂಟೆಯ ವರೆಗೆ ಮೆರವಣಿಗೆ ಕದಲದಂತಾಗಿತ್ತು. ಪೋಲೀಸರು ಬರುವ ತನಕ ಈ ಧಾಳಿ ನಡೆದು, ಕಮ್ಯೂನಿಸ್ಟ್ ಎಂ. ಎಲ್. ಎ. ಮತ್ತು ಡಿಪ್ಯೂಟಿ ಕಲೆಕ್ಟರ್ ಮೊದಲಾಗಿ ಹಲವರು ಗಾಯ ಹೊಂದಿದ್ದಾರೆ.

ಇದೇ ವಾರದಲ್ಲಿ ಮಲಬಾರಿನ ಪೆರಂಬ್ರಾದಲ್ಲಿ ಕಮ್ಯೂನಿಸ್ಟ್ ಮೆರವಣಿಗೆಯ ಮೇಲೆ ಗುಂಡು ಹಾರಿಸಲಾಗಿದೆ.

ಈ ಹಿಂದೆ ವಿದ್ಯಾಮಂತ್ರಿ ಮುಂಡಾಸ್ಸೇರಿ, ಪಿ.ಡಬ್ಲ್ಯೂ.ಡಿ. ಮಂತ್ರಿ ಮಜೀದ್, ಕಾನೂನು ಸಚಿವ ಕೃಷ್ಣಯ್ಯರ್ ಮೇಲೆ ಧಾಳಿ ನಡೆದುದು ಸರ್ವರಿಗೂ ತಿಳಿದಿದೆ.

ಲಂಚ — ಬೆದರಿಕೆ

ಕಮ್ಯೂನಿಸ್ಟ್ ಎಂ.ಎಲ್.ಎ.ಗಳನ್ನು ಮನೆಗೆ ಕರೆಸಿ ಒಂದು ಲಕ್ಷರೂಪಾಯಿಯ ನೋಟಿನ ಗಂಟನ್ನು ಮುಂದೆ ಇಟ್ಟು, ಈಗಾಗಲೇ ರಾಜಿನಾಮೆ ಪತ್ರ ಕೊಡಬೇಕೆಂದು ಕೇಳಲಾಗಿದೆ. ರಾಜಿನಾಮೆ ಪತ್ರ ಕೊಟ್ಟ ಮೇಲೆ ಆ ಎಂ.ಎಲ್.ಎ. ಅದೇ ಬಂಡವಾಳಶಾಹಿಯ ಮನೆಯಲ್ಲೇ ಒಂದು ವಾರ ಉಳಕೊಳ್ಳಬೇಕು. ಸ್ಪೀಕರರಿಗೆ ರಾಜಿನಾಮೆ ಪತ್ರ ತಲಪಿಸಿದ ನಂತರ ಇವರ ಬಿಡುಗಡೆ ಮಾಡುವುದೆಂಬ ಶರ್ತದ ಮೇಲೆ ಕಾಮ್ರೇಡ್ ಆರ್. ಬಾಲಕೃಷ್ಣ ಪಿಳ್ಳೆಯವರನ್ನು ದೊಡ್ಡ ಬಂಡವಾಳಿಗ ಶ್ರೀ ಪೋತನ್ ಕರೆದಿದ್ದರು. ಈ ಕಾಮ್ರೇಡರಿಗೆ ಒಂದು ಕಾರು ಕೂಡಾ ಉಪಯೋಗಿಸಲು ಕೊಟ್ಟಿದ್ದರು. ಇವರಿಂದ ಸಾಧ್ಯವಾದಷ್ಟು ಹಣ ಇಸಕೊಂಡು ನೆಹರೂ ನಿಧಿಗೆ ಕೊಡಬೇಕೆಂದಿದ್ದ ಈ ಕಾಮ್ರೇಡರನ್ನು, ಈ ಕಲುಷಿತ ಹಣ ಮುಟ್ಟಬಾರದೆಂದು ಪಾರ್ಟಿ ಹೇಳಿದ ಕಾರಣ, ಕಾಮ್ರೇಡ್ ಬಾಲಕೃಷ್ಣ ಪಿಳ್ಳೆಯವರು ಈ ಕುತಂತ್ರವನ್ನು ಬಹಿರಂಗವಾಗಿ 'ನ್ಯೂ ಕೇರಳ' ಪತ್ರಿಕೆಯಲ್ಲಿ ಹೊರಗೆಡಹಿದ್ದಾರೆ.

ಪುಡಿಯಾದ ಕನಸು

ಡಿಸೆಂಬರ್ ಹದಿನೆರಡರಂದು ಕೇರಳಾಧಿವೇಶನ ಆರಂಭವಾಗಲಿದ್ದು, ಆವಾಗಲೇ ಅವಿಶ್ವಾಸ ನಿರ್ಣಯ ತರಲು ಕಾಂಗ್ರೆಸ್ ಪಿ.ಎಸ್.ಪಿ. ನಿರ್ಣಯಿಸಿದ್ದವು. ಆದರೆ ಲಂಚಕ್ಕೆ ಕಮ್ಯೂನಿಸ್ಟ್ ಎಂ ಎಲ್ ಎ. ಗಳು ಬಲಿ ಬೀಳಲಿಲ್ಲ. ಇವರನ್ನು ಕೊಂದು ಹಾಕುವ ಬೆದರಿಕೆ ಹಾಕಲಾಗಿದ್ದು ಅದಕ್ಕೂ ಯಾರು ಹೆದರಲಿಲ್ಲ. ಶ್ರೀಮನ್ನಾಯಣರು ಕೇರಳಕ್ಕೆ ಹೋಗಿ ಮುಂದಿನ ಮಂತ್ರಿಮಂಡಳ ಮುಖ್ಯಮಂತ್ರಿಯಾರಾಗಬಹುದೆಂದು ಕೂಡಾ ಚರ್ಚಿಸಿರುತ್ತಾರೆಂದು ಹೇಳಲಾಗಿದೆ.

ಇದಕ್ಕೆ ಬೆಂಬಲವಾಗಿಯೇ ಕಟ್ಟಂಪಳ್ಳಿಯಲ್ಲಿ ಪಿ. ಎಸ್. ಪಿ. ಮತ್ತು ಕಾಂಗ್ರೆಸ್ ಸತ್ಯಾಗ್ರಹದ ಹೆಸರಿನಲ್ಲಿ ದುರಾಗ್ರಹ ಹೂಡಿದ್ದು! ತ್ರಿಚೂರಿನಲ್ಲಿ 25,000 ಸ್ವಯಂಸೇವಕರ ಮೆರವಣಿಗೆ ಹೊರಡಿಸಬೇಕೆಂದಿದ್ದು ಇವೆಲ್ಲವೂ ನೀರ ಮೇಲೆಸೈದ ಹೋಮದಂತಾಗಿದೆ, ಕೊನೆಗೆ ಪಿ ಎಸ್.ಪಿ. ಕಾಂಗ್ರೆಸ್‌ಗಳಲ್ಲೇ ಜಗಳವಾಗಿ, ಕಮ್ಯೂನಿಸ್ಟ್ ಮಂತ್ರಿಮಂಡಳ ಮುರಿಯುವ ಕನಸು ಕನಸಾಗಿಯೇ ಉಳಿಯುವಂತಾಗಿದೆ. ಇದಕ್ಕೆ ಸಹಾಯವಾಗಿ, ಉರಿಯುವ ಗಾಯಕ್ಕೆ ಉಪ್ಪೆರಚಿದಂತೆ ಮುಸ್ಲಿಂಲೀಗ್, ಕಾಂಗ್ರೆಸ್-ಪಿ.ಎಸ್.ಪಿ. ಜಂಟಿ ಮಂತ್ರಿಮಂಡಲ ರಚಿಸಿದರೆ ತಮ್ಮ ಸಹಕಾರ ಇಲ್ಲವೆಂದು ನಿರ್ಣಯ ಕೈಗೊಂಡಿದೆ.

ಇದಲ್ಲದೆ ಕೇರಳ ಸರಕಾರವು ರಿಸರ್ವ್ ಬ್ಯಾಂಕಿನಿಂದ ಮಿತಿಮೀರಿ ಹಣಕೊಂಡಿದೆಯೆಂದೂ, ಆಂಧ್ರದ ಅಕ್ಕಿ ವ್ಯಾಪಾರಿಯಿಂದ ಹೆಚ್ಚು ದರವಿತ್ತು ಅಕ್ಕಿ ಖರೀದಿ ಮಾಡಿದೆ ಎಂದೂ ಸುಳ್ಳು ಪ್ರಚಾರ ಗೈಯಲಾಗುತ್ತಿದೆ, ಇದು ಸುಳ್ಳೆಂದು, ಕೇರಳದಲ್ಲಿ ಸ್ವತಂತ್ರ ಪತ್ರಿಕೆಯೊಂದಾದ 'ಕಾಮುದಿ' ಕೂಡ ಬರೆದಿದೆ.

ಅಂತು ಕೇರಳದಲ್ಲಿ ಕಾಂಗ್ರೆಸ್ ಪಿ. ಎಸ್.ಪಿ. ಗಳ ದಿನಚರಿ ಹಿಂಸೆ, ಸುಳ್ಳು, ಕೊಲೆಯ ಬೆದರಿಕೆ, ಬ್ಲಾಕ್‌ಮೈಲ್‌ಗಳಿಂದ ಕೂಡಿವೆ ಎಂದು ಕೇರಳ ಜನತೆಗೆ ಸ್ಪಷ್ಟವಾಗಿದೆ. ಆದ ಕಾರಣವೇ ಇಂದು ಕೇರಳದಲ್ಲೆಲ್ಲೂ ಜನರು ದಶಸಹಸ್ರ ಸಂಖ್ಯೆಯಲ್ಲಿ ಈ ಅನ್ಯಾಯ, ಅಕ್ರಮಗಳ ವಿರುದ್ಧ ಪ್ರತಿಭಟಿಸ ಹತ್ತಿದ್ದಾರೆ.

'ಅಕ್ಕಿತಿನ್ನದ ಕಾಂಗ್ರೆಸ್' ಸಚಿವರ ಗಮನಕ್ಕೆ

ಕೇರಳದಲ್ಲಿ ಮಂತ್ರಿಗಳ ಸಂಬಳವನ್ನು ಮಾಸಿಕ ರೂ. 500 ಎಂದು ನಿಗದಿಗೊಳಿಸಿದ್ದರೂ, ಮುಖ್ಯಮಂತ್ರಿ ಮತ್ತಿತರ 7 ಜನ ಮಂತ್ರಿಗಳು ಬರೇ ರೂ 350 ಸಂಬಳ ಪಡೆದಿರುತ್ತಾರೆಂದು ಕೇರಳ ಅಸೆಂಬ್ಲಿಯಲ್ಲಿ ಮುಂದಿಟ್ಟ ಹೇಳಿಕೆಯ ಪ್ರಕಾರ ತಿಳಿದುಬಂದಿದೆ. ಇತರ ಮೂವರು ಮಂತ್ರಿಗಳು ಪೂರ್ಣ ಸಂಬಳ ಪಡೆದಿರುತ್ತಾರೆ.

'ಬ್ಯೂಕ್' ಕಾರುಗಳಿಗಾಗಿ ಜಗಳ ಮಾಡುವ, ಬರೇ 'ಸ್ಟಂಟ್'ಗಾಗಿ ಅಕ್ಕಿ ಉಪಯೋಗಿಸುವುದಿಲ್ಲವೆಂದು ಹೇಳುವ ಬದಲು ಕಾಂಗ್ರೆಸ್ ಸಚಿವರು ಕೇರಳ ಮಂತ್ರಿಗಳ ಈ ಈ ಮಾದರಿ ನಡಾವಳಿಯನ್ನು ಒಪ್ಪಿದರೆ ಲಕ್ಷಾಂತರ ರೂಪಾಯಿಗಳ ಸದುಪಯೋಗವಾಗುತ್ತಿತ್ತು.

ಇನ್ನೊಂದು ನಿದರ್ಶನ

ಪಶ್ಚಿಮ ಬಂಗಾಳದ ಅಸೆಂಬ್ಲಿ ವಿರೋಧ ಪಕ್ಷದ ನಾಯಕರಿಗೆ ಸ್ಪೀಕರಿಗೆ ಕೊಡುವಷ್ಟು ಸಂಬಳ ನೀಡಬೇಕೆಂದು ಬಿ. ಸಿ. ರಾಯ್ ಸರಕಾರ ಬಿಲ್ಲನ್ನು ಮಂಡಿಸಲಿದೆ. ಇದರ ಪ್ರಕಾರ ಕಾ|| ಜ್ಯೋತಿ ಬಸುರವರಿಗೆ ರೂ 1,250 ಸಂಬಳ ಬರುವುದು. ಆದರೆ 500ಕ್ಕಿಂತ ಹೆಚ್ಚು ಸಂಬಳವನ್ನು ಸ್ವೀಕರಿಸಲಾರೆವು ಎಂದು ಕಾ|| ಬಸುರವರು ವಿರೋಧ ಸೂಚಿಸುವ ತಿದ್ದುಪಡಿ ತರಲಿದ್ದಾರೆ.

ಭಾರತಕ್ಕೆ ನೂತನ ಸೋವಿಯತ್ ರಾಯಭಾರಿ

ಘನತೆವೆತ್ತ ಪಾಂತಿಲೆಯಿಮೋನ್ ಕೋರ್ದ್ರಾತಿಯೆವಿಚ್ ಪೊನೊಮರೆಂಕೋರವರು—ಭಾರತ ದೇಶಕ್ಕೆ ಸೋವಿಯತ್ ಒಕ್ಕೂಟದ, ಸರ್ವಾಧಿಕಾರಯುತ, ಅಸಾಧಾರಣ, ನೂತನ ರಾಯಭಾರಿಯವರಾಗಿ ನೇಮಿತರಾಗಿದ್ದಾರೆ.

ಜೀವನ ಪರಿಚಯ

ಘನತೆವೆತ್ತ ಪಾಂತಿಲೆಯಿಮೋನ್ ಕೋನ್‌ದ್ರಾತಿಯೋವಿಚ್ ಪೊನೊಮರೆಂಕೋರವರು ದಕ್ಷಿಣ ರಶಿಯದ ಕೂಬನ್ ಪ್ರಾಂತದಲ್ಲಿ, ೧೯೦೨ರಲ್ಲಿ ಒಂದು ರೈತ ಕುಟುಂಬದಲ್ಲಿ ಹುಟ್ಟಿದರು. ೧೪ ವರ್ಷ ವಯಸ್ಸಿನಲ್ಲಿ ಅವರು ಹಳ್ಳಿಯ ಕಮ್ಮಾರ ಶಾಲೆಯೊಂದರಲ್ಲಿ ಕೆಲಸವನ್ನು ಮಾಡಲಾರಂಭಿಸಿದರು. ೧೯೧೮ರಲ್ಲಿ ಪೊನೊಮರೆಂಕೋರವರು ಕೆಂಪು ಸೇನೆಯನ್ನು ಸೇರಿದರು. ಮತ್ತು ದಕ್ಷಿಣ ರಶಿಯದ ಕ್ರಾಸ್ನೋದಾರ್ ರಕ್ಷಣೆಯ ಕಾಲದಲ್ಲಿ ಶ್ವೇತ ರಕ್ಷಕ ದಳಗಳ ವಿರೋಧವಾಗಿ ನಡೆದ ಯುದ್ಧಗಳಲ್ಲಿ ಭಾಗವಹಿಸಿದರು. ೧೯೨೧ರ ಪ್ರಾರಂಭದಿಂದಪೊನೊಮರೆಂಕೋರವರು, ತೈಲೋದ್ಯಮ ಕ್ಷೇತ್ರಗಳಲ್ಲಿಯೂ ಮತ್ತು ರೈಲ್ವೆ ಇಲಾಖೆಯಲ್ಲಿಯೂ "ಫಿಟ್ಟರ್" ಆಗಿಯೂ ಮತ್ತು 'ಇಂಜಿನ್' ಚಾಲಕರಾಗಿಯೂ ಕೆಲಸ ಮಾಡಿದರು.

ಅವರು ೧೯೩೨ರಲ್ಲಿ ಮಾಸ್ಕೋ ನಗರದಲ್ಲಿನ 'ರೈಲ್ವೆ ಎಂಜನಿಯರ'ರ ವಿದ್ಯಾಲಯದಲ್ಲಿ ಪದವೀಧರರಾದರು. ೧೯೩೨ರಿಂದ ೧೯೩೮ರವರೆಗೆ ಅವರು ಅಖಿಲ-ಒಕ್ಕೂಟದ ವಿದ್ಯುತ್-ಯಂತ್ರ ಶಿಲ್ಪ ವಿದ್ಯಾಲಯದ ಸಂಶೋಧಕ—ತಂಡದ ಅಧಿಪತಿ ಆಗಿದ್ದರು.

೧೯೩೮ರ ಅಂತ್ಯದಿಂದ, ಪಿ. ಕೆ. ಪೊನೊಮರೆಂಕೋರವರು ಬ್ಯೆಲೋರಶಿಯದಲ್ಲಿದ್ದು, ಬ್ಯೆಲೋರಶಿಯಾ ಪ್ರಜಾತಂತ್ರದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಕಾರ್ಯದರ್ಶಿಯವರಾಗಿದ್ದರು ತರುವಾಯ ಅವರು ಬ್ಯೆಲೋರಶಿಯದ ಮಂತ್ರಿ ಮಂಡಲದ ಅಧ್ಯಕ್ಷರಾಗಿ ನಿಯುಕ್ತರಾದರು.

೧೯೫೦ರ ನವೆಂಬರ್ ತಿಂಗಳಲ್ಲಿ ಪಿ. ಕೆ. ಪೊನೊಮರೆಂಕೋರವರು ಸೋವಿಯತ್ ಒಕ್ಕೂಟದ ವಸ್ತು ಶೇಖರಣೆಗಳ ಮಂತ್ರಿಯಾಗಿಯೂ ಮತ್ತು ೧೯೫೩ರಿಂದ ೧೯೫೪ರವರೆಗೆ ಸಂಸ್ಕೃತಿ ಶಾಖೆಯ ಸಚಿವರೂ ಗಿದ್ದರು.

೧೯೫೫ರ ಮೇ ತಿಂಗಳಿಂದ, ಪಿ. ಕೆ. ಪೊನೊಮರೆಂಕೋರವರು ಪೋಲೆಂಡ್ ದೇಶಕ್ಕೆ ಸರ್ವಾಧಿಕಾರಯುತ ಅಸಾಧಾರಣ ರಾಯಭಾರಿಯವರಾಗಿದ್ದರು.

ಅವರು ಸೋವಿಯತ್ ಒಕ್ಕೂಟದ ಸರ್ವೋಚ್ಚ ಸೋವಿಯತ್ತಿನ ಪ್ರತಿನಿಧಿಯಾಗಿಯೂ, ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಸದಸ್ಯರಾಗಿಯೂ ಇದ್ದಾರೆ. ಸೋವಿಯತ್ ರಾಷ್ಟ್ರಕ್ಕೆ ಅವರು ಸಲ್ಲಿಸಿದ ಗಣ್ಯ ಸೇವೆಗಳನ್ನು ಅನುಲಕ್ಷಿಸಿ, ಪಿ. ಕೆ. ಪೊನೊಮರೆಂಕೋರವರಿಗೆ 'ಲೆನಿನ್ ಪ್ರಶಸ್ತಿ' (ಆರ್ಡರ್ ಆಫ್ ಲೆನಿನ್) ಯನ್ನೂ, ಮತ್ತಿತರ ಪ್ರಶಸ್ತಿಗಳನ್ನೂ ನೀಡಲಾಗಿದೆ.

ತುಮುಕೂರು—

ಕಮ್ಯೂನಿಸ್ಟ್ ಪಾರ್ಟಿ ಜಿಲ್ಲಾ ಸಮ್ಮೇಳನ

15—12—57ರಂದು ದಿವಾನ್ ಪೂರ್ಣಯ್ಯನವರ ಛತ್ರದಲ್ಲಿ ತುಮುಕೂರು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಸಮ್ಮೇಳನವು ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಕಾ॥ ಎನ್. ಎಲ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ವಿಶ್ವಶಾಂತಿಗಾಗಿ ನಮ್ಮ ಪಾರ್ಟಿಯ ಹೋರಾಟ ಮತ್ತು ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ನಮ್ಮ ಕರ್ತವ್ಯ ಮತ್ತು ರಾಷ್ಟ್ರೀಯವಾಗಿ ಪಂಚವಾರ್ಷಿಕ ಯೋಜನೆಯನ್ನು ಕೈಗೂಡುವುದರಲ್ಲಿ ನಮ್ಮಗಳ ಪಾತ್ರದ ಬಗ್ಗೆ ದೇಶದ ಮತ್ತಿತರ ಸಮಸ್ಯೆ ಅಲ್ಲದೇ ಕೇಂದ್ರ ಸಮಿತಿಯ ಘಟನೆಗಳ ಸೂಕ್ತ ತಿದ್ದುಪಡಿಗಳ ಮತ್ತು ಜಿಲ್ಲೆಯ ರೈತರ ಮತ್ತು ಪಾರ್ಟಿಯ ಸಂಘಟನೆ, ಇತರ ಸಮಸ್ಯೆಗಳ ಬಗ್ಗೆ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಜಿಲ್ಲೆಯಿಂದ 45 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮ್ಮೇಳನದಲ್ಲಿ ಈ ಕೆಳಗಿನ ನಿರ್ಣಯಗಳನ್ನು ಸ್ವೀಕರಿಸಲಾಯಿತು.

○ ನಮ್ಮ ರಾಜ್ಯದಲ್ಲಿ ಭೂಸುಧಾರಣೆ ಸಂಬಂಧದ ಹೊಸ ಗೇಣಿ ಶಾಸನವೊಂದು ಹಳೆಯ ಗೇಣಿ ಶಾಸನಕ್ಕಿಂತ ಕೊಂಚ ಪ್ರಗತಿಯುತವಾಗಿ ಜತ್ತಿ ಸಮಿತಿ ವರದಿಯ ಆಧಾರದ ಮೇಲೆ ಬರುವ ನಿರೀಕ್ಷೆ ಇರುವುದರಿಂದ ಭೂಮಾಲೀಕರು ಈಗಾಗಲೇ ತಮ್ಮ ಜಮೀನನ್ನು ಹೆಚ್ಚು ಬೆಲೆಗೆ ಮಾರಲು ಹವಣಿಸುತ್ತಿದ್ದಾರೆ. ಈ ರೀತಿಯಾಗದಂತೆ ಹೊಸ ಶಾಸನವು ಜಾರಿಗೆ ಬರುವ ವರೆಗೂ ಮಾರಾಟ ಮಾಡದಂತೆ ಆರ್ಡಿನೆನ್ಸ್ ಒಂದನ್ನು ಸರ್ಕಾರದವರು ಕೂಡಲೇ ತರಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ.

○ ಬೆಂಗಳೂರಿನಲ್ಲಿ ನವಂಬರ್ 16-17ರಂದು ಪ್ರಾಂತ್ಯ ರೈತ ಸಮ್ಮೇಳನದಲ್ಲಿ ರಾಜ್ಯದ ಗೇಣಿ ಶಾಸನಗಳಿಗೆ ಮಾಡಿರುವ ಶಿಪಾರಸ್ಸುಗಳಿಗೆ ಈ ಸಮ್ಮೇಳನವು ತನ್ನ ಮೆಚ್ಚುಗೆಯನ್ನು ಕೊಡುವುದಲ್ಲದೇ ಈ ಶಿಪಾರಸ್ಸುಗಳನ್ನು ಸಂಪೂರ್ಣವಾಗಿ ಹೊಸ ಗೇಣಿಶಾಸನದಲ್ಲಿ ಅಳವಡಿಸಿರಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತದೆ.

○ ರಾಜ್ಯದಾದ್ಯಂತವೂ ಎಲ್ಲಾ ತಾಲ್ಲೋಕುಗಳಲ್ಲಿಯೂ ಷಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಶಾಸನವನ್ನು ತಕ್ಷಣ ಜಾರಿಗೆ ತರಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತದೆ.

○ ನಮ್ಮ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಬಗ್ಗೆ ಜನರು ತೋರುತ್ತಿರುವ ಅಭಿಮಾನಪೂರ್ವಕ ಪ್ರೋತ್ಸಾಹಕ್ಕಾಗಿ ಜಿಲ್ಲೆಯ ಜನತೆಯನ್ನು ಅಭಿನಂದಿಸುತ್ತದೆ. ಮತ್ತು ಮುಂದೆಯೂ ಸಹ ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷದ ಜನವಿರೋಧಿ ನೀತಿಯನ್ನು ವಿರೋಧಿಸಿ ಮುಂದೆ ಜನತೆಯನ್ನು ಸಂಘಟಿಸುವುದರಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ಸಹಕಾರವನ್ನು ನೀಡುವರೆಂದು ಆಶಿಸುತ್ತಾ ಈ ಸಮ್ಮೇಳನವು ಜಿಲ್ಲೆಯ ಸಮಿತಿಯ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು 2000 ರೂ.ಗಳ ನಿಧಿಯನ್ನು ಸಂಗ್ರಹಿಸಲು ಜನತೆಯು ಬೆಂಬಲವೀಯಬೇಕೆಂದು ಕರೆಕೊಡುತ್ತದೆ.

ಸಮ್ಮೇಳನದಲ್ಲಿ ಕೆಳಕಂಡ ಸದಸ್ಯರುಗಳನ್ನೊಳಗೊಂಡ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು. ಕಾರ್ಯದರ್ಶಿ: T.R. ರೇವಣ್ಣ, ತುಮುಕೂರು. ಸದಸ್ಯರುಗಳು: ಕಾ॥ ಕೆ. ಆರ್. ನಾಯಕ್, ತುಮುಕೂರು, ಕೆ. ವಿ. ಕೃಷ್ಣಸ್ವಾಮಿ, ರಾಮಣ್ಣ, ಕುಣಿಗಲು; ಪಿ. ನಾರಾಯಣ ರೆಡ್ಡಿ, ಮಧುಗಿರಿ; ಪರಳ್ಳಿಕೊಂಡಪ್ಪ, ಪಾವುಗಡ; ಎಚ್. ಸಿ. ಚೆನ್ನಪ್ಪ, ಗುಬ್ಬಿ.

ಬಹಿರಂಗ ಸಭೆ

ಸಂಜೆ ಗಂಟೆ 6½ ಘಂಟೆಗೆ ಸಮ್ಮೇಳನದ ಅಂಗವಾಗಿ ಝಾನ್ಸಿ ರಾಣಿ ಚೌಕದಲ್ಲಿ ಎಚ್. ಸಿ. ಚೆನ್ನಪ್ಪನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯಲ್ಲಿ ಕಾ॥ ಎನ್.ಎಲ್. ಉಪಾಧ್ಯಾಯರವರು— ಪಂಚವಾರ್ಷಿಕ ಯೋಜನೆಯನ್ನು ಕೈಗೂಡಿಸುವುದರಲ್ಲಿ ಕಾಂಗ್ರೆಸ್ ಸರಕಾರ ಹಿಂದೆ ಬೀಳುತ್ತಲಿದೆಯೆಂದು ಆದರೆ ಕಮ್ಯೂನಿಸ್ಟರಾದ ನಾವು ಈ ನೀತಿಯನ್ನು ಖಂಡಿಸಿದರೆ ಇದು ನಮ್ಮ ತಪ್ಪೆಂದು ಕಾಂಗ್ರೆಸ್ಸಿಗರು ಹೇಳುವುದು ನಾಚಿಕೆಗೇಡೆಂದೂ ತಿಳಿಸುತ್ತಾ, ತೆರಿಗೆಗಳ ಬಗ್ಗೆ ಕಾಂಗ್ರೆಸ್ ಸರಕಾರದ ನೀತಿಯನ್ನು ಟೀಕಿಸುತ್ತಾ ಇದೇ ವೇಳೆಯಲ್ಲಿ ಕೇರಳದ ಸರ್ಕಾರ ತೆರಿಗೆ ಕೊಡಲು ಶಕ್ತಿ ಇರುವವರ ಮೇಲೆ ಮಾತ್ರ ತೆರಿಗೆ ಹಾಕಿದೆಯೆಂದೂ ಮತ್ತು ಕೇರಳ ವಿದ್ಯಾಭ್ಯಾಸ ಮಸೂದೆಗೆ ರಾಷ್ಟ್ರಾಧ್ಯಕ್ಷರು ಇದುವರೆಗೆ ಒಪ್ಪಿಗೆ ಕೊಡದಿರುವುದನ್ನು ಖಂಡಿಸಿದರು ಮತ್ತು ಕೇರಳ ಸರ್ಕಾರವನ್ನು ಉಳಿಸಲು ಪ್ರತಿಗಾಮಿಗಳ ಹಂಚಿಕೆಯನ್ನು ಪ್ರಾಮಾಣಿಕ ಕಾಂಗ್ರೆಸ್ಸಿಗರೂ ಸಹ ಖಂಡಿಸಿ ನಿಜವಾದ ಪ್ರಜಾಪ್ರಭುತ್ವದ ಬೆಳವಣಿಗೆಗೆ ಅವಕಾಶ ಕಲ್ಪಿಸುವಂತಾಗಲಿ ಎಂದು ತಿಳಿಸಿದರು. ಕಾ॥ ಕೆ. ವಿ. ಕೃಷ್ಣಸ್ವಾಮಿಗಳು ಜಿಲ್ಲಾ ರೈತರ ಸಮಸ್ಯೆಯ ಬಗ್ಗೆ ಮಾತನಾಡಿದರು. ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು

ಪೊಲೀಸರ ಗೂಂಡಾಗಿರಿ!

ತಾ. 15ರಂದು ರಾತ್ರಿ8¾ ಘಂಟೆಗೆ ತುಮುಕೂರು ಮುನಿಸಿಪಲ್ ಕೆಲಸಗಾರರ ಸಂಘದ ಇಬ್ಬರು ಕಾರ್ಯಕರ್ತರುಗಳನ್ನು ಸ್ಥಳೀಯ ಪೊಲೀಸಿನವರು ಹೊಡೆದು ಕಾಲು ಮತ್ತು ತೊಡೆಯ ಮೇಲೆ ಗಾಯವಾಗಿರುತ್ತೆ. ಸಂಘವನ್ನು ಮುರಿಯಲು ಪ್ರಯತ್ನಿಸುತ್ತಿರುವ ಕಾಂಗ್ರೆಸ್ ಪುಢಾರಿಗಳ ಸಹಕಾರದಿಂದ ಪೌರರಿಗಾಗಿ ದುಡಿಯುತ್ತಿರುವ ಈ ನೌಕರರನ್ನು ಹೊಡೆದಿರುವುದು ವಿಷಾದವಾಗಿದೆ. ಇದರ ಬಗ್ಗೆ ಸರಕಾರ ಬೇಗನೆ ನ್ಯಾಯ ದೊರಕಿಸಿ ಕೊಡಲು ಸಾಧ್ಯವೆ?

ಪ್ರಾಂತೀಯ ಸುದ್ದಿ ಸಂಗ್ರಹ

ಕಾಂಗ್ರೆಸ್ಸಿಗರಿಂದ ಜಮೀನಿನ ಆಕ್ರಮಣ

ಕಾಂಗ್ರೆಸ್ ಪುಢಾರಿಗಳು ಯಾವ ರೀತಿಯಲ್ಲಿ ಅಕ್ರಮವಾಗಿ ಊರ ಜಮೀನನ್ನು ಆಕ್ರಮಣಮಾಡಿ ತಮ್ಮ ವಶಪಡಿಸಿಕೊಳ್ಳುತ್ತಿದ್ದಾರೆಂಬುದಕ್ಕೆ ತುಮುಕೂರಿನಿಂದ ಬಂದ ಈ ವರದಿಯು ವಿಶದ ಪಡಿಸುತ್ತದೆ. ತುಮುಕೂರು ತಾಲೂಕಿನ ಕೋರಾ ಹೋಬಳಿ ದೇವಲಾಪುರ ಗ್ರಾಮದಲ್ಲಿ ಸುಮಾರು 800 ನಿವಾಸಿಗಳಿದ್ದರೂ ಅದರಲ್ಲಿ 300 ಜನರಿಗೆ ಒಂದು ಇಂಚು ಜಮೀನು ಇಲ್ಲದೆ ಒದ್ದಾಡುತ್ತಿದ್ದಾರೆ. ಅದರಲ್ಲಿ ಹೆಚ್ಚಿನ ಭಾಗ ಹರಿಜನರಿದ್ದಾರೆ. ಅವರಿಗೆ ಜಮೀನು ಕೊಡಬೇಕೆಂದು ಎಷ್ಟು ಒತ್ತಾಯಪಡಿಸಿದರೂ ಅಧಿಕಾರಿಗಳು ಯಾವ ಕ್ರಮವನ್ನು ತೆಗೆದುಕೊಳ್ಳಲು ನಿರಾಕರಿಸಿರುತ್ತಾರೆ.

ಊರಲ್ಲಿ ಸುಮಾರು 5 ಎಕ್ರೆಯಷ್ಟು ಗೋಮಾಳವಿವೆ. ದನಕರುಗಳನ್ನು ಮೇಯಿಸುವುದಕ್ಕೂ, ಸ್ಮಶಾನಕ್ಕೂ ಮತ್ತಿತರ ಊರಿನ ಜನತೆಯ ಉಪಯೋಗಕ್ಕೂ ಇದೊಂದೇ ಜಮೀನು ಇರುವುದು ಎಲ್ಲರಿಗೂ ತಿಳಿದ ವಿಷಯ. ಊರಿನ ಜನರಿಗೆ ಇದು ಬಹಳ ಅವಶ್ಯ ಬೇಕಾಗಿದೆ.

ಆದರೆ ಸುಮಾರು 2 ವರ್ಷದ ಹಿಂದೆ ಇದೇ ಊರಿನ ಕಾಂಗ್ರೆಸ್ ಪುಡಾರಿಯಾದ ಡಿ. ಆರ್. ಮುದ್ದಪ್ಪನವರು ತಮಗೆ ಬೇರೆ ಸ್ವಂತ ಜಮೀನಿದ್ದರೂ ಸಹ ಈ ಊರಿನ 1½ ಎಕ್ರೆ ಜಮೀನನ್ನು ಆಕ್ರಮಣ ಮಾಡಿ ಎರಡು ವರ್ಷದಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಜನರು ಎಷ್ಟು ಪ್ರತಿಭಟಿಸಿದರೂ ಯಾವ ಪ್ರಯೋಜನವೂ ಆಗಿಲ್ಲ. ಈಗ ಅದೇ ನಾಯಕರು ಉಳಿದ 4½ ಎಕ್ರೆ ಜಮೀನನ್ನೂ ಸಹ ವಶಪಡಿಸಿಕೊಳ್ಳಲು ಪಿತೂರಿ ನಡೆಸಿರುತ್ತಾರೆ. ಮಂತ್ರಿಗಳ ಮೇಲೆ ವರ್ಚಸ್ಸನ್ನು ಉಪಯೋಗಿಸಿ ಊರಿನ ಜನತೆಗೆ ಅನ್ಯಾಯ ಮಾಡಲು ಹೊರಡಿದ್ದಾರೆ. ಈ ಜಮೀನನ್ನು ಅವರಿಗೆ ಬಿಟ್ಟರೆ ಊರಿನ ನೂರಾರು ಜನರಿಗೆ ತುಂಬಾ ಅನ್ಯಾಯ ಮಾಡಿದಂತಾಗುವುದು.

ಗ್ರಾಮ ಪಂಚಾಯ್ತಿಯು ಸಹ ಇದರ ವಿರುದ್ಧ ನಿರ್ಣಯ ಮಾಡಿ ನೂರಾರು ಸಹಿ ಸಂಗ್ರಹ ಮಾಡಿ ಮೇಲಧಿಕಾರಿಗಳಿಗೆ ತಿಳಿಸಿದ್ದಾರೆಂದು ಗೊತ್ತಾಗಿದೆ. ಶ್ರೀ ಮುದ್ದಪ್ಪನವರು ಕಾಂಗ್ರೆಸ್ಸಿಗರಾಗಿದ್ದರೂ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ವಿರೋಧವಾಗಿ ಕೆಲಸ ಮಾಡಿದ್ದರು. ನೂರಾರು ಜನರಿಗೆ ಜಮೀನೇ ಇಲ್ಲದಿರುವಾಗ, ಊರಿಗೆ ಗೋಮಾಳ ಬೇರೆ ಇಲ್ಲದಿರುವಾಗ ಈ ಜಮೀನನ್ನು ಅಕ್ರಮವಾಗಿ ಸಾಕಷ್ಟು ಸ್ವಂತ ಜಮೀನಿರುವ ಮುದ್ದಪ್ಪನವರಿಗೆ ಕೊಡುವುದು ಖಂಡನೀಯವಾಗಿದೆ. ಇದರಿಂದ ಗ್ರಾಮಸ್ಥರಲ್ಲಿ ಕಳವಳ ಉಂಟಾಗಿದೆ. ಅಧಿಕಾರಿಗಳು ಈ ಅನ್ಯಾಯವನ್ನು ತಡೆಗಟ್ಟಿ ಜಮೀನನ್ನು ಮುದ್ದಪ್ಪನವರಿಗೆ ಕೊಡದೆ ಗ್ರಾಮಸ್ಥರ ವಶದಲ್ಲೇ ಇಡಬೇಕೆಂದು ಜನ ಒತ್ತಾಯ ಪಡಿಸುತ್ತದೆ. ಕಾಂಗ್ರೆಸ್ಸಿಗರ ಸ್ವಾರ್ಥತೆಗೆ, ಜನರಿಗೆ ಮಾಡುವ ಮೋಸಕ್ಕೆ ಇದೂ ಒಂದು ನಿದರ್ಶನ.

(ಸ್ವಂತ ಪ್ರತಿನಿಧಿಯಿಂದ)

ರೈತರ ಸಭೆಗಳು

ಶ್ರೀರಂಗಪಟ್ಟಣ

ಶ್ರೀರಂಗನಾಥ ದೇವಸ್ಥಾನದ ಮೈದಾನದಲ್ಲಿ ತಾ. 16ರಂದು ಮಾಜಿ ಪಠೇಲ ಶ್ರೀ ಬೋರೇ ಗೌಡರ ಅಧ್ಯಕ್ಷತೆಯಲ್ಲಿ ಜರಗಿದ ಶ್ರೀರಂಗಪಟ್ಟಣ ತಾಲೂಕು ರೈತರ ಸಭೆಯಲ್ಲಿ ಕರ್ನಾಟಕ ರೈತ ಸಂಘದ ಕಾರ್ಯದರ್ಶಿ ಶ್ರೀ ಬಿ. ವಿ. ಕಕ್ಕಿಲ್ಲಾಯರು ಹಾಲಿ ಜಾರಿಯಲ್ಲಿರುವ ಕಾನೂನನ್ನು ವಿವರಿಸಿದರು. ಕಾನೂನಿನಂತೆ ಉತ್ಪತ್ತಿಯ ⅓ ಅಂಶ ಗುತ್ತಿಗೆ ಕೊಡುವಂತೆಯೂ ಉಳುವವರು ಜಮೀನು ಬಿಟ್ಟು ಕದಲದಂತೆಯೂ ಕೇಳಿಕೊಂಡು ಶ್ರೀಗಳಾದ ರಂಗನಾಥಯ್ಯ, ರಾಮೇಗೌಡರು, ಕ್ಯಾತನಹಳ್ಳಿ ರಾಮೇಗೌಡರು, ಜವರೇಗೌಡರು ಮತ್ತು ದಾಸೇಗೌಡರು ಭಾಷಣ ಮಾಡಿದರು. ಬೊಂಬಾಯಿ ಕಾನೂನಿನಲ್ಲಿರುವಂತೆ ಪ್ರತಿಯೊಂದು ಎಕ್ರೆಯೊಂದಕ್ಕೆ ಉತ್ಪತ್ತಿ ಎಷ್ಟೆಂದು ಪ್ರಕಟಿಸುವ ಅಧಿಕಾರವನ್ನು ಅಮಲ್ದಾರರಿಗೆ ಕೊಡುವ ಸುಗ್ರೀವಾಜ್ಞೆ ಹೊರಡಿಸುವಂತೆ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ಹುಣಸೂರಿನಲ್ಲಿ

ರೈತರ ಸಹಕಾರ ಸಂಘದ ಆಶ್ರಯದಲ್ಲಿ ತಾ. 17ರಂದು ಶ್ರೀ ರಾಜಗೋಪಾಲ ಮೊದಲಿಯಾರರ ಅಧ್ಯಕ್ಷತೆಯಲ್ಲಿ ರೈತರ ಸಭೆಯು ಜರಗಿತು. ಡಾ. ರಾಮರಾವ್ ಸಿಂಧೆ ಸಭಿಕರನ್ನು ಸ್ವಾಗತಿಸಿದರು. ಶ್ರೀ ಬಿ. ವಿ. ಕಕ್ಕಿಲ್ಲಾಯರು ಭೂಸುಧಾರಣೆಯ ಅವಶ್ಯಕತೆಯನ್ನೂ ಜತ್ತಿಸಮಿತಿಯ ವರದಿಯನ್ನು ಕುರಿತು ಭಾಷಣ ಮಾಡಿದರು. ಶ್ರೀ ಹನುಮಂತ ಶೆಟ್ಟಿಯವರು, ಜತ್ತಿಸಮಿತಿಯ ವರದಿಯು ಕಾನೂನಾಗುವುದನ್ನು ಅರಿತು ಜಮೀನ್ದಾರರು ಈಗಾಗಲೇ ಜಮೀನನ್ನು ತಮಗೆ ಬೇಕುಬೇಕಾದವರ ಹೆಸರಲ್ಲಿ ಹಂಚುತ್ತಿರುವುದಾಗಿ ತಿಳಿಸಿದರು.

ಬಿಜಾಪುರ ಸಮಾಚಾರ

ತೇರದಾಳದಲ್ಲಿ ಕಾಂಗ್ರೆಸ್ಸಿಗರ ದಬ್ಬಾಳಿಕೆ

'ಶ್ರೀ. ಮಹಾದೇವಪ್ಪ ಮುಗ್ಗೋಡ' ಇವರು ಬಿ. ಡಿ. ಜತ್ತಿ ವಿರುದ್ಧ ಚುನಾವಣಾ ಅರ್ಜಿ ಮಾಡಿಕೊಂಡಿದ್ದು ಅದು ಕಳೆದ ಒಂದು ತಿಂಗಳಿಂದ ಬಿಜಾಪುರ ಜಿಲ್ಲಾ ನ್ಯಾಯಾಧೀಶರ ಮುಂದೆ ವಿಚಾರಣೆ ನಡೆದಿರುತ್ತದೆ. ತೇರದಾಳದಿಂದ ಮಹಾದೇವಪ್ಪನವರ ಪರವಾಗಿ ನಾನೂ ಒಬ್ಬ ಸಾಕ್ಷಿದಾರನಾಗಿದ್ದೆ. ಆದರೆ ಕೋರ್ಟಿನಲ್ಲಿ ನನ್ನ ಸಾಕ್ಷಿಯಾಗಲಿಲ್ಲ. ಆದರೆ ತೇರದಾರದಲ್ಲಿಯ ಇತರ ಸಾಕ್ಷಿದಾರರನ್ನು ಕರೆದುಕೊಂಡು ನಾನು ಬಿಜಾಪುರಕ್ಕೆ ಹೋಗಿದ್ದೆ. ಶ್ರೀ ಬಿ. ಡಿ. ಜತ್ತಿಯವರ ಜನರು ಶ್ರೀ ಮಹಾದೇವಪ್ಪನವರಿಗೆ ಸಹಾಯ ಮಾಡಬಾರದೆಂದು ಅಂಜಿಸಿದರು. ಈಗ ಚುನಾವಣಾ ಅರ್ಜಿಯ ಚೌಕಶಿ ಮುಗಿದಿದೆ.

ನಾನು ಮಹಾದೇವಪ್ಪನವರಿಗೆ ಸಹಾಯ ಮಾಡಿವೆನೆಂದು ಭರಮಪ್ಪ ಗಂಗಪ್ಪ ನಂದಗಾವಿ ಎಂಬವರು ಚಪ್ಪಲಿನಿಂದ ಹೊಡೆದರು. 7—12—57ನೇ ದಿವಸ ನಾನು ತೇರದಾಳದ ಸಬ್ ಇನ್ಸ್ಪೆಕ್ಟರರಿಗೆ ತಕರಾರ ಅರ್ಜಿ ಕೊಟ್ಟೆ. ಮೊದಲು ಅದನ್ನು ಅವರು ಹಿಡಿಯಲಿಲ್ಲ: ಅನಂತರ ತಗೊಂಡರು, ಕಾಂಗ್ರೆಸ್ಸಿನವರ ಮಾತು ಕೇಳಿ ಪೋಲೀಸ್ ಅಧಿಕಾರಿಗಳು ತನ್ನ ತಕರಾರನ್ನು ಮುಚ್ಚಿಡುವ ಅಂಜಿಕೆಯಿರುತ್ತದೆಂದು; ದುಂಡಪ್ಪ ನರಸಪ್ಪ ನಿಡೋಣಿಯವರು ಡಿ. ಎಸ್. ಪಿ. ಯವರಿಗೆ ತಾ. 9—12—57ನೇ ದಿವಸ ಅರ್ಜಿ ಮಾಡಿಕೊಂಡಿರುವರು.

ಜಮಖಂಡಿ ಟ್ರೈನಿಂಗ್ ಶಿಕ್ಷಕರ ಗೋಳು

ಮುಂಬಯಿ ಸರಕಾರವಿದ್ದಾಗ ಟ್ರೈನಿಂಗ್ ಪಡೆಯುತ್ತಿರುವ ಶಿಕ್ಷಕರಿಗೆ ಸರಕಾರದವರು ಸ್ಟೈಪೆಂಡ ಕೊಡುತ್ತಿದ್ದರು. ಕೆಲವು ವರ್ಷಗಳ ಹಿಂದೆ ಅದು ಬಂದಾಯಿತು. ಅನಂತರ ಶಿಕ್ಷಕರ ಪಗಾರದಿಂದ ತಿಂಗಳ 25 ರೂಪಾಯಿ ಕೊಡಲಾಯಿತು. ಮೈಸೂರು ರಾಜ್ಯವಾದ ನಂತರ ಇದನ್ನೂ ತಡೆಯಲಾಗಿದೆ. ಹೀಗಾಗಿ ಟ್ರೈನಿಂಗ್ ಪಡೆಯುತ್ತಿರುವ ಬಡ ಶಿಕ್ಷಕರಿಗೆಲ್ಲ ಉಪಜೀವನ ನಡೆಸುವುದೇ ಅಸಾಧ್ಯವಾಗಿದೆ. ಆದ ಕಾರಣ ಮೈಸೂರು ಸರಕಾರದವರು ಮೊದಲಿನಂತೆಯೇ ಟ್ರೈನಿಂಗ್ ಕಲಿಯುತ್ತಿರುವ ಶಿಕ್ಷಕರಿಗೆ ಟ್ರೈನಿಂಗ್ ಮುಗಿಯುವ ತನಕ ದರ ತಿಂಗಳ ರೂ. 40 ಸ್ಟೈಪೆಂಡ್ ಕೊಡುವ ವ್ಯವಸ್ಥೆ ಮಾಡಿ, ಬಡ ಶಿಕ್ಷಕರಿಗೆ ಸಹಾಯ ಮಾಡಬೇಕು

ಜಮಖಂಡಿಯಲ್ಲಿ ಬೀಡಿ ಕೆಲಸಗಾರರ ಸಂಘ ಸ್ಥಾಪಣೆ

ಜಮಖಂಡಿಯಲ್ಲಿರುವ ಸಾಧಾರಣ 1000 ಬೀಡಿ ಕೆಲಸಗಾರರ ಮೇಲೆ ದಬ್ಬಾಳಿಕೆ ನಡೆದಿದೆ. ಅವರ ಪಗಾರ ಕಡಿಮೆ ಮಾಡಲಾಗಿದೆ. ತಮ್ಮ ಸಂಕಷ್ಟಗಳನ್ನು ದೂರ ಮಾಡುವುದರ ಸಲುವಾಗಿ ಶ್ರೀ ಪಿ. ಎಂ. ಬಂಗಿ, ವಕೀಲರ ಅಧ್ಯಕ್ಷತೆಯಲ್ಲಿ ಕೆಲಸಗಾರರು ಸಂಘಟಿತರಾಗಿರುವರು. ಸಂಘವನ್ನು ರಿಜಿಸ್ಟರ ಮಾಡಬೇಕೆಂದು ಅರ್ಜಿ ಮಾಡಿಕೊಳ್ಳಲಾಗಿದೆ.

ಕಾಂಗ್ರೆಸ್ ಮತ್ತು ಕಮ್ಯೂನಿಸ್ಟರು —

ಆರ್ಥಿಕ ಮಂತ್ರಿ ಮರಿಯಪ್ಪನವರ ವಿಶ್ಲೇಷಣೆ

ಹಿಂದುಳಿದ ವರ್ಗಗಳ ಸಮ್ಮೇಳನದಲ್ಲಿ ಉದ್ಘಾಟನಾ ಭಾಷಣ ಮಾಡುತ್ತಾ ಮೈಸೂರಿನ ಹಣಕಾಸಿನ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ಕಾಂಗ್ರೆಸ್ಸಿಗೂ ಕಮ್ಯೂನಿಸ್ಟ್ ಪಾರ್ಟಿಗೂ ಇರುವ ವ್ಯತ್ಯಾಸವೇನೆಂದು ಹೇಳುತ್ತಾ "ಕಮ್ಯೂನಿಸ್ಟರು ದೇಶದ ಸಂಪತ್ತನ್ನೆಲ್ಲ ಸರಕಾರದ ಕೈಯಲ್ಲಿ ಕೇಂದ್ರೀಕರಿಸಿ ಎಲ್ಲರಿಗೂ ಸರಿಸಮಾನವಾಗಿ ಹಂಚಬೇಕೆಂದಿರುವರೆಂದೂ, ಸುಧಾರಣೆಗಳನ್ನೆಲ್ಲ ತೀವ್ರಗತಿಯಿಂದ ಮಾಡಬೇಕೆಂದು ಹೇಳುತ್ತಿರುವರೆಂದೂ, ಕಾಂಗ್ರೆಸ್ಸು, ಯಾರಿಗೂ ಅನ್ಯಾಯವಾಗದಂತೆ, ಸಾವಕಾಶವಾಗಿ, ಜನರ ಮನಸ್ಸನ್ನು ಪರಿವರ್ತನೆ ಮಾಡಿ ಸುಧಾರಣೆ ಮಾಡಬೇಕೆನ್ನುತ್ತದೆಂದು ಹೇಳಿದರು. ಮುಂದುವರಿಯುತ್ತಾ ಕಾಂಗ್ರೆಸ್ ಸರಕಾರ ಹಿಂದುಳಿದ ವರ್ಗದವರ ಸಲುವಾಗಿ ಎಷ್ಟೋ ಸವಲತ್ತುಗಳನ್ನೊದಗಿಸಿ ಕೊಟ್ಟಿದೆಂದೂ ಆದರೆ ಕೇರಳದ ಕಮ್ಯೂನಿಸ್ಟ್ ಸರಕಾರ ಇತರ ಎಲ್ಲಾ ರಾಜ್ಯ ಸರಕಾರಗಳಿಗಿಂತ ಅತಿ ಹೆಚ್ಚಿನ ಸವಲತ್ತುಗಳನ್ನು ಹಿಂದುಳಿದವರಿಗೆ ಕೊಟ್ಟಿದೆಂದೂ, ಇದು ಒಂದು ಅಸೂಯೆ ಭಾವನೆಯಿಂದ ಕೊಟ್ಟಿದೆಂದೂ ಹೇಳಿದರು.

ಕಾಂಗ್ರೆಸ್ಸಿನವರು ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ "ವ್ಯಾಪಾರಸ್ತರು ಕರದ ಸಲುವಾಗಿ ತಕ್ರಾರ ಮಾಡುತ್ತಿರುವುದು ಯೋಗ್ಯವಲ್ಲವೆಂದೂ, 6000 ವ್ಯಾಪಾರಸ್ಥರನ್ನು ವಿಚಾರ ಮಾಡಿ ಅವರ ಸಲಹೆ ತಗೊಂಡ ಮೈಸೂರು ಸರಕಾರ ಈ ಕರ ಹೇರಿದೆಂದೂ, ಎಂ. ಎಲ್. ಎ. ಗಳ ಸೂಚನೆಗಳಂತೆ ಈ ಕಾಯಿದೆ ಪಾಸು ಮಾಡಲಾಗಿದೆಂದೂ ಹೇಳಿ, ತನ್ನ ವೈಯ್ಯಕ್ತಿಕ ಜವಾಬ್ದಾರಿಯಿಲ್ಲೆಂದೂ, ಎಂ. ಎಲ್. ಎ ಗಳು ಹೇಳಿದರೆ ನಾನು ಕರಾಕರಣೆಯಲ್ಲಿ ಬದಲಾವಣೆ ಮಾಡಲು ತಯಾರಿದ್ದೇನೆಂದು ನುಡಿಯುತ್ತಾ "ಕರ ಹೇರಿದವರು ಇವರೇ" ಎಂದು ಅಲ್ಲಿಕೂರಿದ್ದ ಎಂ. ಎಲ್. ಎ. ಗಳತ್ತಕೈ ತೋರಿಸಿದರು.

ಕಮ್ಯೂನಿಸ್ಟರಿಗೆ ಕಾಂಗ್ರೆಸ್ಸಿನ ಮೇಲೆ ಹಟವಿರಲಿ, ಅಸೂಯೆ ಇರಲಿ ಅಂತೂ ಕಮ್ಯೂನಿಸ್ಟರು ಜನಹಿತ ಮಾಡುತಿದ್ದಾರೆಂದು ಮರಿಯಪ್ಪನವರು ಒಪ್ಪಿದಂತಾಯಿತು.

(೬ನೇ ಪುಟ ನೋಡಿ)

ತಿರುಗುಬಾಣ

ಏಕಾಏಕಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರ ಕೃಪಾದೃಷ್ಟಿ ನಮ್ಮ ದೇಶದ ಶಿಕ್ಷಕರ ಜೀವನದ ದುಸ್ಥಿತಿಯತ್ತ ಹರಿದಿದೆ.

''ರಾಜ್ಯ ಸರ್ಕಾರಗಳು ಶಿಕ್ಷಕರ ಪ್ರಾಧಾನ್ಯತೆ ತಿಳಿದುಕೊಂಡಿಲ್ಲ. ಅವರ ಸಮಸ್ಯೆಗಳು ಮತ್ತು ವಿದ್ಯಾಭಿವೃದ್ಧಿ ಪ್ರಶ್ನೆಗಳನ್ನು ಕಡೆಗಣಿಸಲಾಗಿದೆ. ಇದು ನಮ್ಮ **ಪ್ರಜಾಪ್ರಭುತ್ವಕ್ಕೆ ಕಂಟಕಪ್ರಾಯ**." ಎಂದು ಶ್ರೀಮನ್ನಾರಾಯಣರು ನುಡಿದಿದ್ದಾರೆ.

ಅಂದರೆ ಕೇರಳ ವಿದ್ಯಾ ಮಸೂದೆಗೆ ಕೇಂದ್ರ ಅರ್ಥಾತ್ ರಾಷ್ಟ್ರಾಧ್ಯಕ್ಷರು ಸಮ್ಮತಿಯೀಯಲು ತಡೆಮಾಡುತ್ತಿರುವುದು ಕೂಡಾ **ಪ್ರಜಾಪ್ರಭುತ್ವಕ್ಕೆ ಕಂಟಕ ಪ್ರಾಯ**ವೆಂದು ಶ್ರೀಮನ್ನಾರಾಯಣರ ಈ ಮಾತಿನ ಗೂಢಾರ್ಥವಾಗಿರಲಾರದಷ್ಟೆ ?

ೲ ೲ ೲ ೲ

"ಉದ್ಯಮದಲ್ಲಿ ಘಾತುಕ ಸ್ಪರ್ಧೆ ಬೇಡ. ಕಾರ್ಮಿಕರ ವಿಷಯದಲ್ಲಿ ಮಾನವೀಯ ದೃಷ್ಟಿ ಇರಲಿ .... ಎಂದು ನೆಹ್ರೂರವರು ಏನೇನೋ ಹೇಳಿದ್ದಾರೆ.

ಹೇಳಿದ್ದನ್ನೇ ಹೇಳೋದಿದ್ದರೆ ನೀವಿಷ್ಟು ಕಂಠ ಶೋಷಣೆ ಮಾಡುವ ಅಗತ್ಯವಿತ್ತೆ ಪಂಡಿತ್‌ಜಿ. ಆಕಾಶವಾಣಿ ಪ್ರಸಾರ ಶಾಖೆಯ ಸಚಿವ ಕೇಸ್ಕರ್‌ರವರಿಗೆ ತಿಳಿಸಿದ್ದರೆ ಅವರು ನಿಮ್ಮ ಹಿಂದಿನ ಭಾಷಣದ ರಿಕಾರ್ಡುಗಳನ್ನು ಬರಸಿಕೊಳ್ಳುತ್ತಿದ್ದರಲ್ಲಾ !

ೲ ೲ ೲ ೲ

ಇನ್ನು 'ಘಾತುಕ ಸ್ಪರ್ಧೆ' ಎಂದು ಹೇಳಿ ತಾತಾ ಬಿರ್ಲಾರವರ ಮನಸ್ಸು ಘಾಸಿ ಮಾಡಬೇಕೇ? ಅವರು ಕಾಂಗ್ರೆಸ್ಸಿನ ಚುನಾವಣಾ ನಿಧಿಗೆ ಹಣ ಸುರಿಯುವುದು ಈ ಘಾತುಕ ಸ್ಪರ್ಧೆ ನಿರಾತಂಕವಾಗಿ ನಡೆಯಲೆಂದಲ್ಲವೇ ? ಅಲ್ಲದೆ ಈ 'ಘಾತುಕ ಸ್ಪರ್ಧೆ'ಗೆ ಸಹಾಯವಾಗಿ ಆಹಾರಧಾನ್ಯ ದಾಸ್ತಾನುಕಾರರಿಗೆ ರಿಸರ್ವ್ ಬ್ಯಾಂಕ್ ಸಾಲ ತೆತ್ತುದರಿಂದ ಭಾರತದ ಜನತೆ ಆಹಾರವಿಲ್ಲದೆ ನರಳುತ್ತಿರುವುದು ಪ್ರಧಾನಿಯವರಿಗೆ ಗೊತ್ತಿಲ್ಲವೆ.

ೲ ೲ ೲ ೲ

ಮತ್ತೆ 'ಮಾನವೀಯ ಆಯವ್ಯಯ ಪಟ್ಟಿ' ನೋಡಿ ಎಂದು ನೆಹ್ರೂಜಿ ಖಾಸಗಿ ಉದ್ಯಮಿಗಳಿಗೆ ಹೇಳುವಾಗ ಈ ಮಾನವೀಯ ಆಯವ್ಯಯ ಪಟ್ಟಿ'ಯ ಮಾನದಂಡವನ್ನು ಎಚ್. ಎ. ಎಲ್. ನೌಕರರ ಕೇಳಿಕೆಗಳ ಪರಿಹಾರ ಪ್ರಶ್ನೆಯಲ್ಲಿ ಕೇಂದ್ರ ಉಪಯೋಗಿಸಿಲ್ಲವೇಕೆ? ಈ ಮಾನವೀಯ ಮಾನದಂಡದ ಬದಲು ಎಚ್. ಎ. ಎಲ್ ಹೋರಾಟಕಾರರ ಮೇಲೆ 144ನೆ ಸೆಕ್ಷನ್ ಮೂಲಕ ಅಧಿಕಾರಶಾಹಿ, ದಬ್ಬಾಳಿಕಾ ದಂಡ ಉಪಯೋಗಿಸಿದ್ದೇಕೆ ಎಂದು ಪ್ರಧಾನಿ ನೆಹ್ರೂಜಿಯವರನ್ನು ನಾವು ಕೇಳಬಹುದೆ ?

ಅಂತೂ 'ಓದುವುದು ಶಾಸ್ತ್ರ, ಇಕ್ಕುವುದು ಗಾಳ' ಎಂಬಂತೆ ಪ್ರಧಾನಿ ನೆಹ್ರೂ ಕೂಡಾ ನಡೆಯಬೇಕೆ ?

ೲ ೲ ೲ ೲ

ಅಮೆರಿಕಾ ಬಯಸಿದಾಗ 'ಉಪಗ್ರಹ, ಹಾರಿಸಬಲ್ಲುದೆಂದೂ ಅದೂ 1000 ಪೌಂಡು ತೂಕದಷ್ಟು ದೊಡ್ಡ ಉಪಗ್ರಹವೊಂದನ್ನು ಹಾರಿಸಲು ಸಾಧ್ಯವೆಂದು ಅಮೇರಿಕನ್ ವಕ್ತಾರರೊಬ್ಬರ ಹೇಳಿಕೆ.

ಬಹುಶಃ ಮೊನ್ನೆ ತಾನೆ ಅಮೆರಿಕನ್ 'ಉಪಗ್ರಹ'(ಒಂದೆರಡು ಪೌಂಡು ತೂಕವಿರಬಹುದು.) ಮೇಲೆ ಹಾರಲು ನಿರಾಕರಿಸಿದುದರ ಕಾರಣ ಈ ಮಹನೀಯರು ಬಯಸದಿರುವುದರಿಂದಲೇ ಎಂದು ಕಾಣುತ್ತೆ.

ಅಡಿಗೆ ಬಿದ್ದರೂ ಮೂಗು ಮೇಲು !

ೲ ೲ ೲ ೲ

[illegible] ಸಭೆ

(ಕಾಂಗ್ರೆಸ್ [illegible]) ಬಂದುದರ ಗೌರವಾರ್ಥವಾಗಿ ಜೋರಾಗಿ ಕರತಾಡನ ಮಾಡಿದವರಲ್ಲಿ 'ಅಮೆರಿಕನ್ ಸೆನೇಟರ್' ಮಸಾನಿ ಮತ್ತು ಅಮೆರಿಕದ ಹಿತ ರಕ್ಷಕ ಟಿ. ಟಿ. ಕೆ. ಎದ್ದು ಕಾಣುತ್ತಿದ್ದರೆಂದು ವದಂತಿ. ಬಿಹಾರಿನ ಕೆಲವು ಪಿ. ಎಸ್. ಪಿ. ಗಳು ಸುಮ್ಮಗಿದ್ದರೆಂದು ಸುದ್ದಿ.

ಇಷ್ಟು ಮಾತ್ರಕ್ಕೆ ಅಶೋಕ್ ಮೆಹ್ತಾರು ಈಗ ಪಿ. ಎಸ್. ಪಿ. ಯಲ್ಲ— ಕಾಂಗ್ರೆಸ್, ಎಡಪಂಥಿಗಳಲ್ಲ-ಬಲಪಂಥಿಗಳು, ಭಾರತದ ನಾಗರಿಕರಲ್ಲ - ಅಮೆರಿಕನ್ ನಾಗರಕರೆಂದು ಯಾರಾದರೂ ಕುಹಕ ನುಡಿಯಲು ಮುಂದಾಗ ಬಾರದೆಂದು ವಿನಂತಿ.

ಯೋಜನೆಯ 'ತಿರುಳು'

ಯೋಜನೆಗೆ ಕಮ್ಯೂನಿಸ್ಟರ ಬೆಂಬಲ ದುರುದ್ದೇಶ ಪೂರಿತವೆಂದು ಪಂಡಿತ ಪಂತರ ನುಡಿ. ಅಂದರೆ ಯೋಜನೆಯನ್ನು ವಿರೋಧಿಸುವುದೇ ಸದುದ್ದೇಶಪೂರಿತವೆಂದು ಯಾರಾದರೂ ಭಾವಿಸಬಾರದು ಈಗ ಯೋಜನೆಗಲ್ಲ, ಯೋಜನೆಯಲ್ಲಿ ಕಡಿತವಾಗಿಉಳಿದ 'ತಿರುಳಿಗೆ' ಬೆಂಬಲಬೇಕು ಎಂದು ಪಂತರ ವಾದವಂತೆ! ನಿಜ....

ಆದರೆ.... ಈ ಯೋಜನೆಯ 'ತಿರುಳು ಯಾವುದು ಎಂಬ ಒಂದು ವಿಶಿಷ್ಟ ಪ್ರಶ್ನೆ ಜನರ ತಲೆ ತಿನ್ನ ಹತ್ತಿದೆ ನಮ್ಮ ಸಹೋದ್ಯೋಗಿಯೊಬ್ಬರು ಇದರ ಬಗ್ಗೆ ಒಂದು ಉತ್ತಮ ಹೋಲಿಕೆ ಇತ್ತಿದ್ದಾರೆ; ನಮ್ಮ ಯೋಜನೆ ಎಂದರೆ ಈರುಳ್ಳಿಯಂತೆ. ಸಿಪ್ಪೆ ಸುಲಿಯುತ್ತಾ ಸಿಗುವ 'ತಿರುಳು' ಮತ್ತು ನಮ್ಮ ಸರಕಾರ ಹೇಳುವ ಯೋಜನೆಯ 'ತಿರುಳು' ಇವೆರಡರಲ್ಲಿ ಯಾವ ಅಂತರವೂ ಇಲ್ಲವೆನ್ನುತ್ತಾರೆ- ಈ ಮಹನೀಯರು

"ಸೂಕ್ಷ್ಮದರ್ಶಿ"

ನಾಗರಿಕ ಸಂಯುಕ್ತ ರಂಗಕ್ಕೆ ಬೆಂಬಲ ನೀಡಿರಿ

(೧ನೇ ಪುಟದಿಂದ)

ದಾಯವನ್ನು ರೂಢಿಸಿಕೊಂಡಿಲ್ಲ. ಸರಕಾರೀ ಕಟ್ಟಡಗಳ ಮೇಲೆ ಕಂದಾಯ ಮನ್ನಾ ಮಾಡಿರುವುದರಿಂದ ಸುಮಾರು 2 3 ಲಕ್ಷ ರೂ ಆದಾಯ ನಷ್ಟವಾಗಿದೆ. ಹಿಂದೆ ಇದನ್ನು ವಸೂಲಿ ಮಾಡಲಾಗುತ್ತಿತ್ತು. ಸರಕಾರವೇ ನೇರವಾಗಿ ವಸೂಲು ಮಾಡುತ್ತಿರುವ ಮನರಂಜನೆಯ ತೆರಿಗೆ, ವಾಹನ ತೆರಿಗೆ ಇತ್ಯಾದಿಗಳಲ್ಲಿ ಕಾರ್ಪೊರೇಷನ್ನಿಗೆ ಸೇರುವ ಭಾಗವು ತೀರಾ ಅಲ್ಪವಾಗಿವೆ. ಮನೆ ಕಂದಾಯ, ನೀರಿನ ತೆರಿಗೆ, ಆಕ್ಟ್ರಾಯ ಇವುಗಳಲ್ಲಿ ಬಾಕೀ ವಸೂಲಿ ಸರಿಯಾಗಿ ಆಗದೆ ಸಾವಿರಾರು ರೂ.ಗಳು ಹಾಗೇ ನಿಂತಿದೆ. ತೆರಿಗೆ ತಪ್ಪಿಸುವುದಂತೂ ವಿತಿಮೀರಿದೆ. ಲಂಚ ಖುಷುವತ್ತು ಪಕ್ಷಪಾತಗಳಂತೂ ಮಿತಿಮೀರಿದೆ. ಈ ದುರವಸ್ಥೆಯನ್ನು ಕೊನೆಗಾಣಿಸುವುದು ಅಗತ್ಯ.

ಕರ್ನಾಟಕದ ರಾಜಧಾನಿಯಾಗಿರುವ ಬೆಂಗಳೂರು ನಗರ, ಕೇಂದ್ರ ಕೈಗಾರಿಕಾ ಪ್ರದೇಶವೂ ಆಗಿ, ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಹೊಸ ಹೊಸ ಬಡಾವಣೆಗಳು ಉಂಟಾಗುತ್ತಿವೆ. ನಾನಾ ಮುಖವಾದ ಸಮಸ್ಯೆಗಳು ಉದ್ಭವಿಸುತ್ತಿವೆ. ಇವುಗಳನ್ನು ಪರಿಹರಿಸಲು ಸಮರ್ಥವಾದ ಕಾರ್ಪೊರೇಷನ್ ಕೌನ್ಸಿಲ್ ಅಗತ್ಯ. ಕಾರ್ಪೊರೇಷನ್ ಮಸೂದೆಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ, ಕಾರ್ಪೊರೇಷನನ್ನು ಸ್ವತಂತ್ರವೂ ಸ್ವಾಯತ್ತ ಪ್ರಜಾ ತಾಂತ್ರಿಕವೂ ಆದ ಅಂಗವನ್ನಾಗಿ ಮಾಡುವುದು, ಲಂಚ ಖುಷುವತ್ತುಗಳ ನಿರ್ಮೂಲನ, ಕೊಳಕು ಪ್ರದೇಶ ಶುದ್ಧೀಕರಣ, ನಗರ ನೈರ್ಮಲ್ಯ, ಸೈಕಲ್ ಕರದ ರದ್ದು, ಉತ್ತಮವಾದ ನೀರಿನ ಸರಬರಾಜು ಇವುಗಳ ವ್ಯವಸ್ಥೆಗಾಗಿ ಹೋರಾಡುವ ಪ್ರಜಾಪ್ರಭುತ್ವವಾದಿ ಉಮೇದುವಾರರನ್ನು ಚುನಾವಣೆಯಲ್ಲಿ ಆಯ್ಕೆ ಮಾಡುವುದು ಅಗತ್ಯ.

ಕಾಂಗ್ರೆಸ್ಸನ್ನು ಎದುರಿಸಲು ಕಮ್ಯೂನಿಸ್ಟ್ ಪಾರ್ಟಿ, ರಿಪಬ್ಲಿಕನ್ ಪಕ್ಷ ಮತ್ತು ಸ್ವತಂತ್ರರು ನಾಗರಿಕ ಸಂಯುಕ್ತ ರಂಗವನ್ನು ರಚಿಸಿ ಚುನಾವಣೆಯಲ್ಲಿ ಉಮೇದುವಾರರುಗಳನ್ನು ನಿಲ್ಲಿಸಿದ್ದಾರೆ. ಈಗಾಗಲೇ ಕಾರ್ಮಿಕ ಕ್ಷೇತ್ರದಲ್ಲಿ ನಾಗರಿಕ ಸಂಯುಕ್ತರಂಗ ಅದ್ಭುತ ವಿಜಯ ಗಳಿಸಿದೆ. ಇದೇ ರೀತಿಯಲ್ಲಿ ಮುಂಬರುವ ಚುನಾವಣೆಯಲ್ಲಿ ನಾಗರಿಕ ಸಂಯುಕ್ತ ರಂಗದ ಉಮೇದುವಾರರು ಹೆಚ್ಚು ಸಂಖ್ಯೆಯಲ್ಲಿ ಆರಿಸಿ ಬರಲಿ ಎಂದು ಹಾರೈಸುತ್ತೇವೆ.

——

ಕಾರ್ಮಿಕ ಸಂಘಟನೆಗಳ ಕರ್ತವ್ಯ

(ಮಧ್ಯದ ಪುಟದಿಂದ)

ಷ್ಕರ ತಪ್ಪಿಸಬೇಕೆನ್ನುವ ದೃಷ್ಟಿಯಿಂದಲ್ಲ.

ಸಂಘಟನೆ ಮತ್ತು ಐಕ್ಯತೆ; ಪ್ರದರ್ಶನ ಮತ್ತು ಪ್ರತಿಭಟನೆ; ಸಂಧಾನ ಮತ್ತು ಇತ್ಯರ್ಥ, ಇಲ್ಲವೇ ಕೊನೆಯ ಅಸ್ತ್ರವಾಗಿ ಶಾಂತಿಯುತವಾದ ಮುಷ್ಕರ ನಡೆಸುವುದು. ನಮ್ಮ ಇಂದಿನ ತಂತ್ರವು ಇದೇ ಆಗಿರಬೇಕೆಂದು ನಾನು ಹೇಳುತ್ತೇನೆ.

ರಷ್ಯಾ ಸಾಂಸ್ಕೃತಿಕ ಸಂಬಂಧದ ಮೈಲುಗಲ್ಲು

"ಪರದೇಶಿ"

ಭಾರತ-ರಷ್ಯಾ ಸಾಂಸ್ಕೃತಿಕ ಬಾಂಧವ್ಯ ಮತ್ತು ಗೆಳೆತನದ ಮೈಲುಗಲ್ಲೆನ್ನುವಂತೆ "ಪರದೇಶಿ" ಚಲಚ್ಚಿತ್ರವು ತೆರೆಗೆ ಬರುತ್ತಿದೆ. ಹಿಂದೀ ಭಾಷೆಯಲ್ಲಿ "ಪರದೇಶಿ" ಮತ್ತು ರಷ್ಯನ್ ಭಾಷೆಯಲ್ಲಿ "ಅಫನಾಸಿ ನಿಕಿತಿನ್" ಈ ಚಿತ್ರ ಭಾರತ-ಸೋವಿಯತ್ ಚಲಚ್ಚಿತ್ರೋದ್ಯಮಿಗಳು ಜಂಟಿಯಾಗಿ ಕೈಗೊಂಡಿರುವ ಸಾಹಸೋದ್ಯಮ ಇದೀಗ ಭಾರತದ ನಾನಾ ಭಾಗಗಳಲ್ಲೂ ಮತ್ತು ರಷ್ಯದ ನಾನಾ ಭಾಗಗಳಲ್ಲೂ ತೆರೆಗೆ ಬಂದಿದೆ.

ಅಫನಾಸಿ ನಿಕಿತಿನ್ ಹದಿನೈದನೆ ಶತಮಾನದಲ್ಲಿ ಸವಿಸ್ತಾರವಾಗಿ ಪರ್ಯಟನ ಮಾಡಿ, ಸಾಮಾನ್ಯ ಭಾರತೀಯನಂತೆಯೆ, ಅವರಲ್ಲೊಬ್ಬನಂತೆಯೇ ಪರ್ಯಟನ ಮಾಡಿದ್ದರ ಕಥೆಯೇ ಚಿತ್ರದ ಕಥಾವಸ್ತು. ಆತ ಸಾಮ್ರಾಜ್ಯವಾದೀ ಉದ್ದೇಶಗಳ ಸಲುವಾಗಿ ನಾಡಿನಲ್ಲಿ ಬೇಹುಕಾರನಾಗಿ ಸುತ್ತಾಡುತ್ತಿರಲಿಲ್ಲ; ಜನತೆಯ ಜೀವನವನ್ನು ಪರಿಶೀಲಿಸಲಿಕ್ಕೆ ಮತ್ತು ವ್ಯಾಪಾರಕ್ಕಾಗಿ ಮಾರ್ಗ ಹೂಡಲು ಪರ್ಯಟನ ಮಾಡಿದನು. ಭಾರತ-ರಷ್ಯಾದ ಮೈತ್ರಿಯನ್ನು ಸೂಚಿಸುವ ಐತಿಹಾಸಿಕ ಘಟನೆ ಕಥೆಯ ಮೂಲವಾಗಿದೆ.

ಚಿತ್ರವನ್ನು ಭಾರತೀಯ ಮತ್ತು ಸೋವಿಯತ್ ಚಲಚ್ಚಿತ್ರ ರಂಗದ ಕಾರ್ಯಕರ್ತರುಗಳು ಜಂಟಿಯಾಗಿ ತಯಾರಿಸಿದ್ದಾರೆ. ಭಾರತದ ಕೆ. ಎ. ಅಬ್ಬಾಸ್ ಮತ್ತು ಸೋವಿಯತ್ ರಷ್ಯದ ವಿ. ಎಂ. ಪ್ರೋನಿನ್ ಚಿತ್ರದ ನಿರ್ದೇಶಕರು. ಭಾರತದಲ್ಲಿ ಚಲಚ್ಚಿತ್ರ ರಂಗದಲ್ಲಿ ಖ್ಯಾತಿವಂತರಾದ ಬಾಲರಾಜ ಸಹಾನಿ, ನರ್ಗಿಸ್, ಪದ್ಮಿನಿ, ಪೃಥ್ವಿರಾಜ್ ಕಪೂರ್ ಮತ್ತು ಸೋವಿಯತ್ ನಟ ಓಲೆಗ್ ಸ್ಟ್ರಿಝೆನೋವ್ 'ಪರದೇಶಿ' ಚಿತ್ರದ ನಟವರ್ಗ. ಈ ಬಗೆಯ ಜಂಟಿ ಚಿತ್ರ ತಯಾರಿಕೆಯ ಪ್ರಯತ್ನ ಹಿಂದೆಂದೂ ನಡೆದ ಉದಾಹರಣೆಯಿಲ್ಲ. ಈ ಪ್ರಥಮ ಯತ್ನವು ಯಶಸ್ವಿಗೊಂಡು, ಮುಂದೆ ಇನ್ನೂ ಹೆಚ್ಚು ಪ್ರಗತಿ ಸಾಧಿಸಲು ಸಾಧ್ಯವಾಗಲೆಂದು ಹಾರೈಸುತ್ತೇವೆ.



ಕೇಂದ್ರ ಸರಕಾರದ ನೌಕರರ ಪ್ರಥಮ ವಿಜಯ

ದ್ವಿತೀಯ ಪೇ ಕಮಿಷನ್ನಿನ ರಚನೆಗೆ ಮತ್ತು ತಾತ್ಕಾಲಿಕ ಪರಿಹಾರಕ್ಕಾಗಿ ಅಂಚೆ ಮತ್ತು ತಂತಿ ನೌಕರರು ಮತ್ತು ಇತರ ಕೇಂದ್ರ ಸರಕಾರಿ ನೌಕರರು ಕಳೆದ ಆಗಸ್ಟ್ ತಿಂಗಳಿನಲ್ಲಿ ನಡೆಸಿದ ಹೋರಾಟದ ನೆನಪು ಎಲ್ಲರಿಗೂ ಇದೆ. ಅವರ ದೇಶಾದ್ಯಂತ ಚಳವಳಿಯ ಫಲವಾಗಿ ಸರಕಾರವು ದ್ವಿತೀಯ ಪೇ ಕಮಿಷನನ್ನು ರಚಿಸಿತು.

ಈ ದ್ವಿತೀಯ ಪೇ ಕಮಿಷನ್ನು ಇದೀಗ ತನ್ನ ತಾತ್ಕಾಲಿಕ ವರದಿಯನ್ನು ಸರಕಾರಕ್ಕೆ ಒಪ್ಪಿಸಿದೆ. 250ರೂ ಗಳಿಗಿಂತ ಕಮ್ಮಿ ಸಂಬಳ ಬರುವವರಿಗೆ ತುಟ್ಟಿ ಭತ್ಯವನ್ನು 5ರೂ. ನಂತೆ ಹೆಚ್ಚಿಸಲಾಗಿದೆ. ಜುಲೈ ೧ರಿಂದ ಈ ಹೆಚ್ಚಳ ಅಮಲಿಗೆ ಬರುತ್ತದೆ. ಹಿಂದಿನ ಬಾಕಿಯನ್ನು ನ್ಯಾಷನಲ್ ಪ್ಲಾನ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳ ಮೂಲಕ ನೌಕರರಿಗೆ ಕೊಡಲಾಗುವುದು. ಕೊಡಲಾಗಿರುವ ತಾತ್ಕಾಲಿಕ ಪರಿಹಾರವು ಎಷ್ಟೇ ಅಲ್ಪವಾಗಿದ್ದರೂ ಕೂಡ ಅದು ಕೇಂದ್ರ ಸರಕಾರದ ನೌಕರರಿಗೆ ದೊರೆತಿರುವ ಅದ್ಭುತ ವಿಜಯವಾಗಿದೆ. ಈ ಪರಿಹಾರವು ಕೇಂದ್ರ ಸರಕಾರದ ನೌಕರರಿಗೆ ಅಷ್ಟೇ ಅಲ್ಲದೆ, ಅಲ್ಪ ವೇತನಗಳನ್ನು ಪಡೆಯುತ್ತಿರುವ ಇತರ ಪ್ರಾಂತ ಸರಕಾರಗಳ ನೌಕರರಿಗೂ ಮತ್ತು ಕೇಂದ್ರ ಸರಕಾರದ ಉದ್ದಿಮೆಗಳ ನೌಕರರಿಗೂ ದೊರಕಬೇಕೆಂದು ಒತ್ತಾಯ ಪಡಿಸುವುದು ಅಗತ್ಯ.

ದ್ವಿತೀಯ ಪೇ ಕಮಿಷನ್ ತನ್ನ ಕಾರ್ಯವನ್ನು ಆದಷ್ಟು ಶೀಘ್ರವಾಗಿ ಮುಗಿಸಿ ತನ್ನ ಶಿಫಾರಸ್ಸುಗಳನ್ನು ಮುಂದುವರಿಸುವುದೆಂದು ಆಶಿಸುತ್ತೇವೆ. ಕೇಂದ್ರ ಸರಕಾರದ ನೌಕರರು ತಮ್ಮ ಸಂಘಟನೆಯನ್ನು ಮತ್ತಷ್ಟು ಬಲಗೊಳಿಸಿಕೊಂಡು ನೌಕರರ ಹಿತರಕ್ಷಣೆ ಮಾಡಲೆಂದು ಆಶಿಸುತ್ತೇವೆ. ಕೇಂದ್ರ ಸರಕಾರದ ನೌಕರರಿಗೆ ದೊರೆತಿರುವ ಈ ವಿಜಯ ಇಡೀ ಕಾರ್ಮಿಕವರ್ಗಕ್ಕೆ ದೊರೆತಿರುವ ವಿಜಯವಾಗಿದೆ.

ಓದುಗರ ಓಲೆ

ಸ್ವಾಮಿ,

ಗೌರೀಬಿದನೂರು ತಾಲ್ಲೂಕಿನಲ್ಲಿ ಕಬ್ಬಿನ ಬೆಳೆ ಹೆಚ್ಚಾಗಿದ್ದು ರೈತರ ಸಹಕಾರವೂ ಹೆಚ್ಚಾಗಿದ್ದರೂ ಸಹ ಗೌರೀ ಬಿದನೂರಿನಲ್ಲಿ ಸ್ಥಾಪಿಸಬೇಕಾಗಿದ್ದ ಸಕ್ಕರೆ ಕಾರ್ಖಾನೆಯನ್ನು ಹಿಂದೂಪುರದಲ್ಲಿ ಇಲ್ಲಿಗಿಂತಲು ಹೆಚ್ಚಿನ ಸಹಕಾರವಿದೆಯೆಂಬ ಭರವಸೆ ಮೇಲೆ ಸ್ಥಾಪಿಸಲಾಯಿತು. ಸಕ್ಕರೆ ಕಾರ್ಖಾನೆ ಮುಂದುವರಿಯದೆ ಈಗ್ಗೆ ತಿಲಾಂಜನ ಬಿಟ್ಟಂತಾಗಿದೆ.

ಸಕ್ಕರೆ ಕಾರ್ಖಾನೆ ಆಗುವ ಭರವಸೆ ಮೇಲೆ ಅನೇಕ ರೈತರು ಹೆಚ್ಚಿಗೆ ಕಬ್ಬಿನ ಬೆಳೆ ಬೆಳೆದು ಬೆಲ್ಲದ ಧಾರಣೆ ಬಿದ್ದು ಹೋಗಿರುವುದರಿಂದ ರೈತರಿಗೆ ಬಹಳ ಅನ್ಯಾಯವಾಗಿ ಇಟ್ಟ ಅನ್ನವನ್ನು ಕಿತ್ತುಕೊಂಡಂತಾಗಿದೆ.

"ಗುಪ್ತ' ಗೌರಿಬಿದನೂರು

ಬಂಡವಾಳಶಾಹಿ ಜೇಬಿನಿಂದ ಕಾಂಗ್ರೆಸ್ ಕೈಗೆ ರೂ. 5ಲಕ್ಷ

5 ಲಕ್ಷ ರೂಪಾಯಿಯಷ್ಟು ಪೋಷಕ ಧನ (ಡೊನೇಷನ್) ವನ್ನು ಕಾಂಗ್ರೆಸ್ಸಿಗೆ ದಾನವಾಗಿ ನೀಡಲಾಗಿದೆ. ಉತ್ತರ ಹಿಂದೂಸ್ಥಾನದ ಪ್ರಧಾನ ಬಂಡವಳಿಗ ಸಂಸ್ಥೆಯಾದ ದೆಹಲಿ ಕ್ಲೋತ್ ಮಿಲ್ಸ್ ಕಂಪೆನಿಯು ಈ ದಾನ ಮಾಡಿದೆ.

ಕಳೆದ ಮಾರ್ಚ್ ತಿಂಗಳಲ್ಲಿ ತಾತಾರವರಿಂದ ಕಾಂಗ್ರೆಸ್ ರೂ. 10 ಲಕ್ಷ ಪಡೆದಿತ್ತು. ಅದಾದ ನಂತರ ಕಾಂಗ್ರೆಸ್ ನಿಧಿಗೆ ಸಿಕ್ಕಿದ ಅತ್ಯಂತ ದೊಡ್ಡ ದಾನ. ಈ ಕಂಪೆನಿಯ ಬೋರ್ಡ್ ಆಫ್ ಡೈರೆಕ್ಟರ್ಸ್ ಚೇಯರ್‌ಮೆನ್‌ರಾದ ಲಾಲಾ ರಾಮ್ (ಬ್ರಿಟಿಷರ ಕಾಲದಲ್ಲಿ ಇವರು 'ಸರ್' ಆಗಿದ್ದರು) ಈ ಹಿಂದೆ ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನಿನ ಚೆಯರ್‌ಮೆನ್ನರಾಗಿದ್ದರು. ಆಗ್ಗೆ ಪ್ರಥಮ ಭಾರತದ ಪಾರ್ಲಿಮೆಂಟ್ ಈ ಕಾರ್ಪೊರೇಷನಿನಲ್ಲಿ ಹಣದ ದುರುಪಯೋಗ ನಡೆದದ್ದರ ಬಗ್ಗೆ ವಿಚಾರಣಾ ಸಮಿತಿಯನ್ನು ರಚಿಸಿತ್ತು. ಈ ಸಮಿತಿ ಶ್ರೀ ಲಾಲಾಜಿಯವರನ್ನು ಹಣ ಮುಳುಗಿಸಿದ ಆಪಾದನೆಯಿಂದ ತಪ್ಪಿಸಿ, ಯೋಗ್ಯರೆಂದು ಸರ್ಟಿಫಿಕೇಟು ಕೊಟ್ಟಿತ್ತು. ಅದಕ್ಕಿದು ಪ್ರತಿಫಲವಿರಬೇಕು.

ರಾಜಕೀಯ ಪಕ್ಷಗಳಿಗೆ ಬಂಡವಳಿಗರು ಹಣ ಸಹಾಯ ನೀಡುವುದು ಪ್ರಜಾಪ್ರಭುತ್ವಕ್ಕೆ ಕಂಟಕ ಪ್ರಾಯವಾಗಿದೆ ಎಂದು ಹೈಕೋರ್ಟ್ ಜಸ್ಟಿಸ್ ಮುಖರ್ಜಿ ಹೇಳಿದ್ದರೂ, ಕಾಂಗ್ರೆಸ್ ಈ 'ಕಲುಷಿತ ಹಣ'ವನ್ನೇಕೆ ಸ್ವೀಕರಿಸುತ್ತಿದೆ ಎಂದು ಪ್ರಜಾ ಪ್ರಭುತ್ವವಾದಿ ಜನತೆ ಆಶ್ಚರ್ಯ ಪಡಬಹುದು!

REG. No. M. 6867

Edited Printed and Published by C. R. Krishna Rao, at Janashakthi Printers, L—59, K. V. Temple St., Sultanpet Bangalore- 2 phone · 3810